(೮) ಸುಳ್ಯ ತಾಲ್ಲೂಕಿನ ಹರಿಹರ ಪಳ್ಳತ್ತಡ್ಕ ಗ್ರಾಮಗಳ ಹರಿಜನರಿಗೆ ಅರಣ್ಯ ಇಲಾಖೆ ಅಧಿಕಾರಿಗಳಿಂದ ಕಿರುಕುಳ

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೆ, ಸುಳ್ಯ ತಾಲ್ಲೂಕಿನ ಹರಿಹರ ಪಳ್ಳತ್ತಡ್ಕ ಗ್ರಾಮಗಳಲ್ಲಿ ಸುಮಾರು ೧೨ ವರ್ಷಗಳಿಗೆ ಮೇಲ್ಪಟ್ಟು ಸರಕಾರಿ ಸ್ಥಳದಲ್ಲಿ ಗೃಮೆ ಮಾಡಿ ಅನುಭವಿಸಿ ಕೊಂಡು ಬರುತ್ತಿರುವ ಕೆಲವು ಬಡ ಹರಿಜನ ಕುಟುಂಬಗಳನ್ನು ಅರಣ್ಯ ಇಲಾಖೆಯವರು ಅವಾಚ್ಯ ಶಬ್ದಗಳಿಂದ ಬೈದು, ಹೆದರಿಸಿ. ಗುಡಿಸಲನ್ನು ಕಿತ್ತು ತೆಗೆಯಬೇಕು, ಮತ್ತು ವಕ್ಕಲು ಎದ್ದು ಹೋಗ ಬೇಕು, ಇಲ್ಲವಾದರೆ ಪೋಲೀಸರನ್ನು ತರಿಸಿ, ಮನೆ ಕೀಳಿಸಿ ತೆಗೆಸುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದು ತಿಳಿದು ಬರುತ್ತದೆ. ಸದರಿ ಕುಟುಂಬ ಸದರಿ ಜಮೀನುಗಳಲ್ಲಿ ೧೦ ವರ್ಷಗಳಿಂದ ಅನುಭವ ಮಾಡಿ ಕೃಷಿ ವಗೈರೆ ಮಾಡಿಕೊಂಡು ಬರುತ್ತಿರುವಾಗ ಈ ತನಕ ಕಣ್ಣು ಮುಚ್ಚಿ ಕುಳಿತ ಅರಣ್ಯ ಇಲಾಖೆ ಈಗ ದಿಢೀರನೆ, ಸವಾರಿ ಮಾಡುತ್ತಿರುವುದನ್ನು ನೋಡಿದರೆ ತುಂಬಾ ಬೇಸರದ ಸಂಗತಿ ಅದರಲ್ಲೂ ಈ ಬಡ ಹರಿಜನ ಕುಟುಂಬದವರ ಮೇಲೆ ಮಾತ್ರ ಈ ರೀತಿ ಸವಾರಿ ಮಾಡುತ್ತಿರುವುದನ್ನು ತುಂಬಾ ಅನ್ಯಾಯ ಈ ಬಡ ಕುಟುಂಬಗಳಲ್ಲದೆ, ಇನ್ನಿತರ ಶ್ರೀಮಂತ ವರ್ಗದವರು ಸರಕಾರಿ ಸ್ಥಳವನ್ನು ಆಗು ಮಾಡಿದಕುಟುಂಬಗಳು ಇರುವುದಿಲ್ಲವೇ? ಅಲ್ಲದೆ ಸರಕಾರಿಜಮೀನು ಆಗುಮಾಡಿದವರನ್ನು ಸದ್ಯ ವಕ್ಕಲು ಎಬ್ಬಿಸಬಾರದು ಎಂದು ಕಾನೂನು ತಂದಿದ್ದರೂ, ಈ ರೀತಿಯಿಂದ ಅನ್ಯಾಯವಾಗುತ್ತಿದೆ. ಮತ್ತು ಅಲೆಟ್ಟಿ ಎಂಬ ಗ್ರಾಮದಲ್ಲಿ ೨ ವರ್ಷದಿಂದ ಆಗು ಮಾಡಿದ ೩ ಕುಟುಂಬಗಳನ್ನು ಕೂಡ ಈಗಾಗಲೇ ಗುಡಿಸಲನ್ನು ತೆಗೆಸಿ ವಕ್ಕಲು ಎಬ್ಬಿಸಿದ್ದಾರೆ. ಈ ಕುಟುಂಬಗಳಿಗೆ ಪರ್ಯಾಯವಾಗಿ ಮನೆ ನಿವೇಶನ ಕೂಡ ಕೊಟ್ಟಿರುವುದಿಲ್ಲ. ಆದುದರಿಂದ ಈ ರೀತಿಯ ತೊಂದರೆಯನ್ನು ಕೂಡಲೇ ತಡೆಗಟ್ಟಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಎ. ಜೀವಿಜಯ.—ಅವರು ಬೇಸರಪಡುವುದು ಬೇಡ. ೧೯೭೮ರ ಹಿಂದೆಯೇ ಯಾರು ಈ ರೀತಿ ಅತಿಕ್ರಮಣ ಮಾಡಿದ್ದಾರೆ ಅವರನ್ನು ಒಕ್ಕಲೆಬ್ಬಿಸಬಾರದೆಂದು ಸೂಚನೆ ಕೊಟ್ಟಿದ್ದೇನೆ.

೬. ವಿತ್ತೀಯ ಕಾರ್ಯಕಲಾಪಗಳು ೧೯೮೬–೮೭ ಬೇಡಿಕೆಗಳ ಮಂಡನೆ

ಅಧ್ಯಕ್ಷರು.—ಮಾನ್ಯ ಸಚಿವರುಗಳು ಅವರುಗಳಿಗೆ ಸಂಬಂಧಪಟ್ಟಂತಹ ಬೇಡಿಕೆ ನಂ. ೫೫, ೫೬, ೫೪, ೫೭, ೫೮, ೫೯ ಹಾಗೂ ೬೦ ನಂಬರ್‌ನ ಬೇಡಿಕೆಗಳನ್ನು ಸಭೆಯಲ್ಲಿ ಮಂಡಿಸಬೇಕು.

ಅಭಿಯಾಚನೆ ಕ್ರಮಾಂಕ ೫೫.—ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ (ಕ್ರಮ ಪಡಿಸಿದ ಮಾರುಕಟೆಗಳ ಹೊರತು) ಸಂದಾಯ ಮಾಡವಲ್ಲಿ ಬರತಕ್ಕಂತಹ ವೆಚ್ಚ ವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೮, ೯೩, ೨೩,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತಯಲ್ಲಿ ೧೪,೩[illegible]೫,೦೦೦ ರೂ. ಗಳಿಗಿಂತ ಮೀರದ ಮೊತ್ತ ವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೫೬ ಕ್ರಮಪಡಿದ ಮಾರುಕಟ್ಟೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ, ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೪೭,೮೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೫೪ ವಕ್ಫ್

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಕ್ಫ್‌ಗೆ, ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೯,೨೭,೭೮,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೫೭ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೨,೬೨,೬೪,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ

ಅಭಿಯಾಚನೆ ಕ್ರಮಾಂಕ ೫೮ ಸಾಮುದಾಯಿಕ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಾಮುದಾಯಿಕ ಅಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೯,೭೬,೮೭,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೬,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ

ಅಭಿಯಾಚನೆ ಕ್ರಮಾಂಕ ೫೯ ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೧೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೦,೭೫,೦೮,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ

ಅಭಿಯಾಚನೆ ಕ್ರಮಾಂಕ ೬೦ ಗ್ರಾಮೀಣ ಉದ್ಯೋಗ ಯೋಜನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ಉದ್ಯೋಗ ಯೋಜನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೪,೫೨,೪೮,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವಗಳನ್ನು ಮಂಡಿಸಲಾಯಿತು.

ಅಧ್ಯಕ್ಷರು.—ಈ ಎಲ್ಲಾ ಬೇಡಿಕೆಗಳೂ ಚರ್ಚೆಗೆ ಸಭೆಯ ಮುಂದಿವೆ.

ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಈ ಸದನದ ಮುಂದೆ ಮಹತ್ತರವಾದ ಮತ್ತು ಜನೋಪಯೋಗವಾದ ಬೇಡಿಕೆಗಳನ್ನು ಮಾನ್ಯ ಮಂತ್ರಿಗಳು ಮಂಡಿಸಿದ್ದಾರೆ. ಈ ಬೇಡಿಕೆಗಳ ಬಗ್ಗೆ ಚರ್ಚೆಯನ್ನು ಪ್ರಾರಂಭಿಸುವ ಅವಕಾಶ ನನಗೆ ಬಂದುದಕ್ಕೆ ನಾನು ಸಂತೋಷಿಸುತ್ತೇನೆ ಮತ್ತು ತಮ್ಮನ್ನು ಇದಕ್ಕಾಗಿ ವಂದಿಸುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ನಾನು ಮೊದಲನೆಯದಾಗಿ ಸಹಕಾರ ಇಲಾಖೆಯ ಬೇಡಿಕೆ ಮೇಲೆ ಮಾತನಾಡುತ್ತೇನೆ. ಸಹಕಾರ ಚಳುವಳಿ ಅಂದಕೂಡಲೇ ಈ ಸದನದ ಮತ್ತು ಹೊರಗಿನ ಅನೇಕ ಜನರಲ್ಲಿ ಆ ಚಳುವಳಿಯ ಬಗ್ಗೆ ಇರಬೇಕಾದ ಆತುರ ಇಲ್ಲ. ಇದನ್ನು ನಾನು ಅನಾದರಣೆ ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಜನತೆಯ ತಪ್ಪು ಕಲ್ಪನೆಯಿಂದ ಈ ಖಾತೆಗೆ ಎಷ್ಟು ಮಹತ್ವ ಇರಬೇಕಾಗಿತ್ತೋ ಅಷ್ಟು ಸಿಗುತ್ತಿಲ್ಲ. ಇದು ನಮ್ಮ ದುರ್ದೈವವೆಂದು ಹೇಳುತ್ತೇನೆ. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ, ಸಹಕಾರ ಚಳುವಳಿ ಯಶಸ್ವಿಯಾದರೆ ಮಾತ್ರ ಸಾಧ್ಯ. ಸಹಕಾರ ಚಳುವಳಿ ಯಾವ ರಾಜ್ಯದಲ್ಲಿ ಕೆಲಮಟ್ಟಿಗೆ ಮಾತ್ರ ಇದೆ, ಆ ರಾಜ್ಯದಲ್ಲಿ ಪ್ರಜಾಪ್ರಭುತ್ವ ಪದ್ಧತಿ ಅಷ್ಟಾಗಿ ಇಲ್ಲವೆಂದು ಸ್ಪಷ್ಟವಾಗಿ ಹೇಳಲಿಕ್ಕೆ ಅಡ್ಡಿಯಿಲ್ಲ. ಏಕೆಂದರೆ ಯಾವುದೇ ಜಾತಿಯ ಜಂಜಾಟ, ಬಡತನ, ಶ್ರೀಮಂತಿಕೆಯ ತೊಳಲಾಟ ಇಲ್ಲದೆ ಪ್ರಜಾಪ್ರಭುತ್ವದ ಎಲ್ಲ ಗುಣಾವಗುಣಗಳನ್ನು ಒಳಗೊಂಡಂತ ಏಕಮೇವ ಚಳುವಳಿ ಇದ್ದರೆ ಅದು ಸಹಕಾರ ಚಳುವಳಿ. ಈ ಸಹಕಾರ ಚಳುವಳಿ ಕೇವಲ ಒಂದು ರಾಜ್ಯಕ್ಕೆ, ರಾಷ್ಟ್ರಕ್ಕೆ ಮೀಸಲಾಗುವುದಿಲ್ಲ. ಇವತ್ತಿನ ದಿವಸ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಹ ಸಹಕಾರ ಚಳುವಳಿ ಒಂದುಗೂಡಿದೆ. ಸಹಕಾರ ಚಳುವಳಿಯ ವಿಷಯವಾಗಿ ಅನೇಕ ಜನರು ಅನೇಕ ರೀತಿಯ ಅರ್ಥ ವಿಶ್ಲೇಷಣೆ ಮಾಡಿದ್ದಾರೆ. ನಾನು ಈ ಬಗ್ಗೆ ಹೆಚ್ಚು ವಿವರಣೆ ಕೊಡುವುದಕ್ಕೆ ಹೋಗದೆ ಪ್ರೊ. ಡಿ.ಸಿ. ಕರ್ವೆಯವರು ಸಹಕಾರದ ವಿಷಯವಾಗಿ ಏನು ಹೇಳಿದ್ದಾರೆಂದರೆ,

> "Co-operation ir only an economic system, a rejoinder to capitalist economy. The main object of the co-operative movement is the promotion of the social and economic development of the people."

ಎಂದು, ಅದೇ ರೀತಿ ಸಹಕಾರ ರಂಗದ ಶ್ರೇಷ್ಠ ಆದರ್ಶವಾದಿ ವೈಕುಂಠ ಮೆಹತಾರವರು ಏನು ಹೇಳಿದ್ದಾರೆಂದರೆ,

> "Co-operation is meant to bring about in a possible manner a social change of a far-reaching nature to users in a social order where exploitation is stopped and equality brought in respect to caste, colour, creed the harmony the dignity of the individual with the well being of the community." ಎಂದು,

ಮೊನ್ನೆ ಮೊನ್ನೆ ನಮ್ಮ ರೂರಲ್ ಇಂಟಿಗ್ರೇಟೆಡ್ ವಿಷಯದ ಬಗ್ಗೆ ಆಲ್ ಇಂಡಿಯ ಕೋ-ಆಪರೇಟಿವ್ ವೀಕ್ ಅಬ್ಸರ್ವ್ ಆದಾಗ ಅದರಲ್ಲಿ ವಿ.ಎಲ್. ಮೆಹ್ತಾ ಅವರ ಬಗ್ಗೆ ಬರೆಯುತ್ತಾ ಅವರು ಹೇಳಿದಂಥ ವಾಕ್ಯಗಳನ್ನು ಉದ್ಧರಿಸಿ ಹೇಳಿದ್ದಾರೆ. ಅದು ಈ ರೀತಿ ಇದೆ,

> "The law, the co-operative law should not contain any provision which tantamount to conforming on the Registrer such authority to interefere with the international administration of the society."

ಇದು ಹೊಸದೇನು ಹೇಳಲಿಲ್ಲ. ಇದು ಮೊದಲೂ ಇದ್ದದ್ದೆ. ಕೋ-ಆಪರೇಟೀವ್ ಮೂವ್‌ಮೆಂಟ್‌ನಲ್ಲಿ ಯಾರು ಅದನ್ನು ಚನ್ನಾಗಿ ನಡೆಸಿಕೊಂಡು ಬಂದಿದ್ದಾರೆ ಅವರು ಏನು ಹೇಳುತ್ತಾರೆಂದರೆ,

> "Registrar shall be a philosopher, friend and guide. He shall never act as a prosecutor between the Government on the one hand and the society on the other hand. He must act as an arbitrator."

He can act as a philosopher, he can act as a guide. ಆದರೆ ಇವತ್ತು ವಸ್ತುಸ್ಥಿತಿ ಏನಾಗಿದೆ ಎಂಬುದನ್ನು ನಾವು ನೋಡಬೇಕು ಈಗ ನಾವು ಕೋ-ಆಪರೇಟೀವ್ ಮೂವ್‌ಮೆಂಟಿನಲ್ಲಿ ಹಿಂದಕ್ಕೆ ಅಥವಾ ಮುಂದಕ್ಕೆ ಹೋಗುತ್ತಿದ್ದೇವೆಯೋ ಎಂಬುದನ್ನು ಗಮನಿಸಬೇಕು. ಈ

ಮಾತನ್ನು ಮಾನ್ಯ ಜಾಲಪ್ಪನವರ ಬಗ್ಗೆ ಹೇಳುತ್ತಿದ್ದೇನೆಂದು ಅಲ್ಲ. ನಾವಿದ್ದಾಗಲೂ ಅದೇ ನಡೆದಿದೆ, ಈಗಲೂ ನಡೆಯುತ್ತಿದೆ. ಮುಂದೆ ಸಹ ಹೀಗೆ ನಡೆದರೆ ಹಿಂದಕ್ಕೆ ಹೋಗುವುದಕ್ಕೆ ಹತ್ತಿದ್ದೇವೆಂದು ನನ್ನ ಮನಸ್ಸಿಗೆ ಬರುತ್ತಿದೆ. ಆಲ್ ಇಂಡಿಯ ಕೋ-ಆಪರೇಟೀವ್ ವೀಕ್‌ನಲ್ಲಿ ಏನು ಹೇಳಿದ್ದಾರೆಂದರೆ,

"The Registrar should function absolutely objectively in which case his powers shouid not be used unnecessarily for interference." ಎಂದು,

ಇದಕ್ಕಿಂತ ಮುಂದೆ ಇನ್ನೂ ಹೆಚ್ಚು ಹೇಳಿದ್ದಾರೆ. ಅದನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಸಹಕಾರ ಚಳುವಳಿ ಬ್ರಿಟಿಷರ ಕಾಲದಿಂದ ಬಂತು, ಬಂದದ್ದನ್ನು ನಾವು ಹೆಚ್ಚು ಕಡಿಮೆ ಮಾಡಿದ್ದೇವೆಂದು ಅಲ್ಲ. ನನಗೂ ಅದೇ ಅಭಿಪ್ರಾಯ ಇತ್ತು. ೧೯೦೪ರಲ್ಲೇ ಈ ಸಹಕಾರ ಚಳುವಳಿ ಪ್ರಾರಂಭವಾಗಿದೆ. ಅದೂ ಕೂಡ ನಮ್ಮ ತಾಲ್ಲೂಕಿನಲ್ಲೇ ಆಗಿದೆ ಎಂದು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಆದರೆ ಇವತ್ತು ನಮ್ಮ ಸಹಕಾರ ಚಳುವಳಿ ಮೂರ್ತ ಸ್ವರೂಪದಲ್ಲಿ ಇಲ್ಲದಿದ್ದರೂ ಕಾನೂನುಬದ್ಧವಾಗಿ ಕೌಟಿಲ್ಯನ ಕಾಲದಿಂದಲೂ ಇದೆ. ಇದರಲ್ಲಿ ಮರ್ಕೆಂಟೈಲ್ ಜನ ಹೆಚ್ಚು ತೊಂದರೆ ಕೊಡುವುದಕ್ಕೆ ಹತ್ತಿದಾಗ ಕಾನೂನು ಮಾಡಿದರು. ಏನು ಕಾನೂನು ಮಾಡಿದ್ದಾರೆಂದರೆ,

"Merchants who conspire either to prevent sale or merchandise or sale, purchase commodities at higher prices shall be fined with 1,000 pannas."

ಪನಾಸ್ ಎಂದರೆ ವರ ಅಥವಾ ಪೌಂಡ್ ಇರಬಹುದು. ಅದು ಆಗಿನ ಕಾಲದ ನಾಣ್ಯ. ಅಷ್ಟು ದಂಡ ವಿಧಿಸುವ ಶಕ್ತಿ ಇತ್ತು. ವ್ಯಾಪಾರಸ್ಥರ ಮಧ್ಯೆ ಜನರು ಬಂದಾಗ ಯಾವ ರೀತಿ ವರ್ತಿಸಬೇಕು, ಹೇಗೆ ಶಿಕ್ಷೆ ಕೊಡಬೇಕೆಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅಂದೇ ರೂಪುರೇಷೆ ಮಾಡಿದ್ದಾರೆ. ಅದನ್ನು ಅನುಸರಿಸಿಕೊಂಡು ಬಂದು ಇಂದಿಗೆ ಸಾವಿರಾರು ವರ್ಷಗಳು ಗತಿಸಿದರೂ ಭಾರತ ದೇಶದಲ್ಲಿ ಸಹಕಾರ ಚಳುವಳಿ ರೂಢಿಗೆ ಬಂದಿಲ್ಲ. ನಾನು ಮಾನ್ಯ ಜಾಲಪ್ಪನವರಿಗೆ ಹೇಳಬಯಸುವುದೇನೆಂದರೆ, ಧಾರವಾಢದಲ್ಲಾಗಲಿ, ಗುಲ್ಬರ್ಗದಲ್ಲಾಗಲಿ ಏನೇ ನಡೆಯಲಿ, ಸಹಕಾರಿ ಮಂತ್ರಿಗಳಾದವರು ಯಾವುದೇ ಪಕ್ಷಕ್ಕೆ ಅಂಟಿಕೊಳ್ಳಬಾರದು. ಸಹಕಾರಿಯಾಗಿ ಅವರು ಕೆಲಸ ಮಾಡಬೇಕು ನಾನು ಸಹಕಾರಿ ಎಂಬ ಭಾವನೆ ಬೆಳೆದು ಬರಬೇಕು. ಕೇಂದ್ರ ಸರ್ಕಾರದ ತಪ್ಪಿದ್ದರೆ ಅವರು, ರಾಜ್ಯ ಸರ್ಕಾರದ ತಪ್ಪಿದ್ದರೆ ಇವರು ತಿದ್ದಿಕೊಳ್ಳಲೇಬೇಕು. ಇದು ಆದಾಗ ಮಾತ್ರ ಸಹಕಾರ ಚಳುವಳಿ ನಿಜವಾದ ಸ್ವರೂಪವನ್ನು ಕಾಣುವುದಕ್ಕೆ ಸಾಧ್ಯವಿದೆ. ಇವತ್ತಿನ ದಿವಸ ನಮಗೆ ಸಹಕಾರ ಇಲಾಖೆ ಮತ್ತು ರೂರಲ್ ಡೆವಲಪ್‌ಮೆಂಟ್ ಇಲಾಖೆಗಳ ಬೇಡಿಕೆಗಳಿಗೆ ಸಂಬಂಧಪಟ್ಟ ಮಾಹಿತಿಗಳಿರುವ ಪುಸ್ತಕಗಳನ್ನು ನಮಗೆ ಮೊದಲೇ ಕೊಟ್ಟಿಲ್ಲ. ಅವು ನಮಗೆ ಈಗ ಭಾಷಣ ಮಾಡುತ್ತಿರುವ ಸಂದರ್ಭದಲ್ಲಿ ಬಂದಿವೆ. ಮಾನ್ಯ ಜಾಲಪ್ಪನವರು ಮತ್ತು ಮಾನ್ಯ ನಜೀರ್‌ಸಾಬ ರವರು ಮಂತ್ರಿಗಳಾಗಿರುವಾಗ ಅವರಿಬ್ಬರ ಕೈಯಲ್ಲಿ ದಕ್ಷ ಕಾರ್ಯದರ್ಶಿಗಳು ಇರುವಾಗ ಏತಕ್ಕೆ ಹೀಗಾಗಿದೆ ಎಂದು ನನಗೆ ಗೊತ್ತಿಲ್ಲ. ಕೆಲವು ದಿನಗಳ ಮೊದಲಾದರೂ ಇವು ಸಿಕ್ಕಿದ್ದರೆ ನಾವು ಸ್ವಲ್ಪ ಅಭ್ಯಾಸ ಮಾಡಿ ನೀವು ಯಾವುದರಲ್ಲಿ ಪ್ರಗತಿ ಹೊಂದಿದ್ದೀರಿ ಅದಕ್ಕೆ ಅಭಿನಂದನೆ ಸಲ್ಲಿಸಬಹುದಾಗಿತ್ತು ಹಾಗೂ ಯಾವುದರಲ್ಲಿ ಪ್ರಗತಿ ಹೊಂದಿಲ್ಲ ಅದರ ಬಗ್ಗೆ ಉಪದೇಶದ ಮಾತನ್ನು ಹೇಳಬಹುದಾಗಿತ್ತು. ದುರ್ದೈವದಿಂದ ನಾನು ಭಾಷಣ ಪ್ರಾರಂಭ ಮಾಡುವ ವೇಳೆಗೆ ಇವು ನನ್ನ ಕೈಗೆ ಬಂದಿವೆ. ಈ ಪುಸ್ತಕಗಳನ್ನು ಸ್ವಲ್ಪವಾದರೂ ಓದಿ ನೋಡಿದರೆ ನಮಗೆ ಏನು ಅನ್ನಿಸುತ್ತದೆಂದರೆ, ೧೯೦೪ರಲ್ಲಿ ಸಹಕಾರ ಚಳುವಳಿ ಪ್ರಾರಂಭವಾಗಿ ೮೦ ವರ್ಷಗಳನ್ನು ದಾಟಿದ್ದೇವೆ ಎಂದು. ೮೧ನೇ ವರ್ಷದಲ್ಲಿ ಸಹಕಾರ ಚಳುವಳಿ ಎಷ್ಟರಮಟ್ಟಿಗೆ ಸುಧಾರಣೆಯಾಗಿದೆ ಎಂಬುದನ್ನು ನೋಡಬೇಕಾಗಿದೆ. ನಾವು ಈ ದಿಸೆಯಲ್ಲಿ ಮುಂದುವರಿದಿದ್ದೇವೆಯೇ ಎಂದರೆ ೯೭ ಲಕ್ಷ ಜನರನ್ನು ಸದಸ್ಯರನ್ನಾಗಿ ಮಾಡಿದ್ದೇವೆಂದು ಹೇಳಬಹುದು. ಆಗ ಸದಸ್ಯರು ಇರಲಿಲ್ಲ. ಇದು ಪ್ರಗತಿಯನ್ನು ತೋರಿಸುವುದಿಲ್ಲವೇ ಎಂದು ಕೇಳಬಹುದು. ಸಹಕಾರ ಸಂಘಗಳ ರಿಜಿಸ್ಟ್ರೇಷನ್ ನೋಡಿದಾಗ ಬಹಳಷ್ಟು ಕಾಣಬಹುದು, ಆದರೆ ಯಾವ ಉದ್ದೇಶಕ್ಕೆ ಸಹಕಾರ ಸಂಘಗಳು ಬಂದವು ? ಅವು ಬಂದದ್ದು ಜನತೆಯ ಸಾಂಪತ್ತಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ, ಹಾಗೂ

ಜನತೆಯ ಅಭಿವೃದ್ಧಿಯನ್ನು ಹೆಚ್ಚುಗೊಳಿಸುವುದಕ್ಕಾಗಿ, ವ್ಯವಸಾಯ ಮಾಡುವಂಥ ವ್ಯವಸಾಯಗಾರರ ಪರ್ ಕ್ಯಾಪಿಟಾ ಇನ್‌ಕಂ ಹೆಚ್ಚಿಸಿ, ಅವರಲ್ಲಿ ಹಣ ಶೇಖರಣೆಯ ಒಂದು ಅಭಿರುಚಿಯನ್ನು ಹೆಚ್ಚು ಮಾಡಿ ಠೇವಣಿ ಸಂಗ್ರಹಣೆಯನ್ನು ಹೆಚ್ಚು ಮಾಡಬೇಕಾಗುತ್ತದೆ. ಆದರೆ ಆ ರೀತಿ ತಾವು ಮಾಡಿರುವುದಿಲ್ಲ, ಇದರ ಮೇಲೆ ನಾನು ಮಾತನಾಡುವಾಗ ಪ್ರತಿಯೊಂದರಲ್ಲೂ ನನ್ನನ್ನೇ ನಾನು ಅಳವಡಿಸಿಕೊಂಡು ಮಾತನಾಡುತ್ತಿದ್ದೇನೆಯೋ ಹೊರತು ಕೇವಲ ಮಂತ್ರಿಗಳನ್ನು ಟೀಕೆ ಮಾಡುವುದಕ್ಕಾಗಿ ಮಾತನಾಡುತ್ತಿಲ್ಲ ಹಾಗೂ ಸರ್ಕಾರವನ್ನು ಟೀಕೆ ಮಾಡುವುದಕ್ಕಾಗಿ ಮಾತನಾಡುತ್ತಿಲ್ಲ. ನಾನು ಒಬ್ಬ ಸಹಕಾರಿ ಆಗಿ ಸರ್ಕಾರಿ ಲೋಪದೋಷಗಳ ಹಿನ್ನೆಲೆಯಲ್ಲಿ ನಾನು ಪ್ರತಿಯೊಂದು ವಿಚಾರದಲ್ಲೂ ಮಾತನಾಡುತ್ತೇನೆಂದು ಈ ಸಂದರ್ಭದಲ್ಲಿ ತಮ್ಮ ಎದುರಿಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಉಪಾಧ್ಯಕ್ಷರೇ, ಇವತ್ತಿನ ದಿವಸ ಸಹಕಾರಿ ಸಂಘದಲ್ಲಿ ಠೇವಣಿ ಸಂಗ್ರಹಣೆ ಬಗ್ಗೆ ಹೋದರೆ ತಲೆ ಕೆಳಗು ಮಾಡಬೇಕಾಗುತ್ತದೆ. ಒಬ್ಬ ವ್ಯಕ್ತಿ ಪ್ರಾರಂಭ ಮಾಡಿದಂಥ ಬ್ಯಾಂಕುಗಳೂ ಸಹಾ ಇವತ್ತು ಉನ್ನತ ಮಟ್ಟಕ್ಕೆ ಹೋಗವೆ. ರಾಷ್ಟ್ರೀಕರಣದ ಮಟ್ಟಕ್ಕೂ ಹೋಗಿವೆ, ಕೆಲವು ಹೋಗುವ ಹಂತದಲ್ಲಿವೆ. ಆದರೆ ಕೆಲವು ಸಹಕಾರಿಗಳು ಏನು ಮಾಡಿದ್ದಾರೆ ಎಂದರೆ, ಹೋದ ವರ್ಷಕ್ಕಿಂತ ಇಪ್ಪತ್ತು ಪರ್‌ಸೆಂಟ್ ಹಣವನ್ನು ಜಾಸ್ತಿ ಕೊಡುವುದು ಎಂದು ಮಾಡಿದ್ದಾರೆ ಎಂದು ಹೇಳುತ್ತಾರೆ. ಆದರೆ ಹೋದವರ್ಷಕ್ಕಿಂತ ಎಷ್ಟು ಜನಸಂಖ್ಯೆಯಲ್ಲಿ ಠೇವಣಿ ಅಭಿರುಚಿಯನ್ನು ಉಂಟು ಮಾಡಿದ್ದಾರೆ ಎಂದು ಹೇಳಲಿ. ಅದು ಸಾಧ್ಯವಾಗಿಲ್ಲ. ಈ ವರದಿಯಲ್ಲಿ ಕೊಟ್ಟಂತಹ ಅಂಕಿಸಂಖ್ಯೆಗಳು ಸಹಾ ಅಪೆಕ್ಸ್ ಬ್ಯಾಂಕ್‌ನಲ್ಲಿ ಠೇವಣಿ ಸಂಗ್ರಹಣೆಯನ್ನು ಒಳಗೊಂಡ ಅಥವಾ ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕ್‌ಗಳಲ್ಲಿ ಠೇವಣಿ ಸಂಗ್ರಹಣೆಯನ್ನು ಒಳಗೊಂಡ ಅಂಕಿಸಂಖ್ಯೆಗಳು ಏನು ಇವೆ ಇವು ಸರಿಯಲ್ಲ. ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕ್‌ಗಳಲ್ಲಿ ಯುನಿವರ್ಸಿಟಿ ಅಥವಾ ಅನೇಕ ಸಂಘಗಳ ಸಂಸ್ಥೆಗಳ ಹಣವನ್ನು ಇಟ್ಟಿರುವುದರಿಂದ ಈ ಠೇವಣಿ ಹೆಚ್ಚಾಗಿದೆ. ಅಪೆಕ್ಸ್ ಬ್ಯಾಂಕ್‌ನಲ್ಲಿ ಒಮ್ಮೊಮ್ಮೆ ಸರ್ಕಾರದ ಯಾವುದಾದರೂ ಹಣವನ್ನು ಕೇಂದ್ರದಿಂದ ಬಂದಂಥ ಹಣವನ್ನೂ ಸಹಾ ಇಡುತ್ತಾರೆ. ಇಡಬಾರದೆಂದು ನನ್ನ ಪ್ರಶ್ನೆ ಅಲ್ಲ. ಆದರೆ ಠೇವಣಿ ಇಹ ಜಾಸ್ತಿ ಆದಾಗ ಬಹಳ ಪ್ರಗತಿಯನ್ನು ಸಾಧಿಸಿದ್ದೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಹಳ್ಳಿ ಹಾಗೂ ಊರುಗಳಿಗೆ ಹೋದಾಗ, ಅಲ್ಲಿನ ಠೇವಣಿ ಸಂಗ್ರಹಣೆಯನ್ನು ಪರೀಕ್ಷಿಸಿದರೆ ಜನತೆಯಿಂದ ಠೇವಣಿಯನ್ನು ಸಂಗ್ರಹಿಸಲು ಏನೂ ಪ್ರಯತ್ನ ಮಾಡಿಲ್ಲ. ಅವರು ಇಡದೇ ಹೋದರೆ ನಾವೇನು ಮಾಡಬೇಕು ? ಎಂದು ಕೇಳಬಹುದು. ಆದರೆ ಈ ಸಹಕಾರ ಚಳುವಳಿ ಬೆಳೆದುಬಂದ ದೃಷ್ಟಿಯಲ್ಲಿ ಜನರಿಗೆ ಪ್ರಚೋದನೆ ಆಗುವ ರೀತಿಯಲ್ಲಿ ನಿಮ್ಮ ಕಾರ್ಯಕ್ರಮಗಳು ಇರಬೇಕು. ಅನೇಕ ವರ್ಷಗಳಲ್ಲಿ ಬೇರೆ ಬೇರೆ ಸಮಿತಿಗಳನ್ನು ನೇಮಿಸಿದ್ದಾರೆ. ಮೆಂಹ್ತಾ ಸಮಿತಿ, ಕರ್ವೆ ಸಮಿತಿ ಎಂದು ಯಾವ ಯಾವ ಕಾಲದಲ್ಲೋ ಸಮಿತಿಗಳನ್ನು ನೇಮಿಸಿದ್ದಾರೆ. ಈ ಎಲ್ಲಾ ಸಮಿತಿಗಳು ಸಹಾ ಒಂದಲ್ಲ ಒಂದು ರೀತಿಯಿಂದ ಸರ್ಕಾರದ ಧೋರಣೆ, ಮಾರ್ಕೆಟಿಂಗ್ ಧೋರಣೆಯಲ್ಲಿ ಹೊಂದಾಣಿಕೆಯಾಗಬೇಕೆಂದು ಹೇಳಿವೆ. ಇವತ್ತಿನ ದಿವಸ ರಿಸರ್ವ್ ಬ್ಯಾಂಕಿನಲ್ಲಿ ಕಡಿಮೆ ಬಡ್ಡಿ ದರದಲ್ಲಿ ಅಂದರೆ ೧೨½ ಪರ್‌ಸೆಂಟ್ ಬಡ್ಡಿ ದರದಲ್ಲಿ ಸಾಲ ಕೊಡುತ್ತೇವೆ ಎಂದು ಹೇಳಿದರೂ ಕೂಡ ಸಾಲ ತೆಗೆದುಕೊಳ್ಳುವುದಕ್ಕೆ ಯಾರೂ ಮುಂದೆ ಬರುವುದಿಲ್ಲ. ಮಾರ್ಕೆಟಿಂಗ್ ಸೊಸೈಟಿಯವರು ಹದಿನೆಂಟೂವರೆ ಪರ್‌ಸೆಂಟ್ ಬಡ್ಡಿಯ ಮೇಲೆ ಹೋಗುತ್ತಾರೆಯೋ ಹೊರತು ಹನ್ನೆರಡೂವರೆ ಪರ್‌ಸೆಂಟ್‌ಗೆ ಅವರೂ ಬರುವುದಿಲ್ಲ. ಹನ್ನೆರಡೂವರೆ ಪರ್‌ಸೆಂಟ್‌ಗೆ ಹೋದರೆ ತೊಂದರೆಯಾದೀತು ಎಂದು ಹದಿನೆಂಟೂವರೆ ಪರ್‌ಸೆಂಟ್‌ಗೆ ಬಡ್ಡಿಗೇ ಹೋಗುತ್ತಾರೆ. ರೈತರ ಮಾಲನ್ನು ಪಡೆದು ಮಾರಾಟ ಮಾಡಬೇಕಾಗುತ್ತದೆ. ಇದು ಜವಾಬ್ದಾರಿಯುತವಾದುದು. ಅವರಿಗೆ ಕೈಲಾಗದ ದೃಷ್ಟಿಯಿಂದ ಈ ಕೆಲಸವನ್ನು ಬಿಟ್ಟಿದ್ದಾರೆ ಮಾರ್ಕೆಟಿಂಗ್ ಸೊಸೈಟಿಗಳು ಪೂರ್ತಿಯಾಗಿ ತದ್ವಿರುದ್ಧವಾದ ವರ್ತನೆಯಲ್ಲಿವೆ. ಇವುಗಳನ್ನು ಮಾರ್ಕೆಟಿಂಗ್ ಸೊಸೈಟಿಗಳು ಎಂದು ಹೆಸರಿಗೆ ಮಾತ್ರ ಕರೆಯಬಹುದು. ನಾವು ಕೊಡತಕ್ಕಂಥ ಸಕ್ಕರೆ, ಗೊಬ್ಬರ ಇನ್ನಿತರ ನಿಯಂತ್ರಿತ ಬೆಲೆಯ ಕಬ್ಬಿಣ ಮೊದಲಾದ ಮಾಲುಗಳನ್ನು ಮಾರಾಟ ಮಾಡಿದರೆ ಮಾರ್ಕೆಟಿಂಗ್ ಸೊಸೈಟಿ ಏತಕ್ಕೆ ಬೇಕೆಂದು ನಾನು ಪ್ರಶ್ನೆ ಮಾಡುತ್ತೇನೆ ? ನಾನು ಎಲ್ಲಾ ಭಾಗಗಳಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಹೋಗಿ ನೋಡಿದ್ದೇನೆ. ಈ ಮಾತನ್ನು ಬಹಳ ವಿಷಾದದಿಂದ ಹೇಳುತ್ತೇನೆ. ಎಲ್ಲಿ ಹೆಚ್ಚು ಪ್ರಗತಿಯಾಗಿ ನಡೆಯುತ್ತಿದೆ ? ವಿಶ್ವೇಶ್ವರಯ್ಯನವರು ಸಕ್ಕರೆ ಕಾರ್ಖಾನೆಯನ್ನು ಎಲ್ಲಿ ಪ್ರಾರಂಭ ಮಾಡಿದರೋ ಅಂಥ ಪ್ರದೇಶದಲ್ಲಿ ಅಂದರೆ ಹಳೆಯ ಮೈಸೂರು ಏರಿಯಾದಲ್ಲಿ ಬಹಳವಾಗಿ ಮಾರ್ಕೆಟಿಂಗ್ ಸೊಸೈಟಿಯು ಪ್ರಗತಿಯನ್ನು

ಸಾಧಿಸಬೇಕಾಗಿದೆ. ಆದರೆ ಆ ಪ್ರಗತಿಯನ್ನು ಸಾಧಿಸಿಲ್ಲ. ಮಾನ್ಯ ಚಾಲಪ್ಪನವರು ಬೇಕಾದಷ್ಟು ಸಂಘಗಳಿಗೆ ಹೋಗಿ ನೋಡಲಿ. ಮಾರ್ಕೆಟಿಂಗ್ ಸೊಸೈಟಿ ಎಂದರೆ ಏನರ್ಥ ? ಸದಸ್ಯರ ಮಾಲನ್ನು ಸಂಗ್ರಹಿಸಿ ಅದನ್ನು ಗ್ರೇಡ್‌ವಾರ್ ಮಾಡಿ ಆಯಾ ಗ್ರೇಡಿಗೆ ತಕ್ಕಂತೆ ಉತ್ತಮವಾದಂಥ, ಬೆಲೆ ಬರುವಂಥ ಕ್ರಮಗಳನ್ನು ಕೈಗೊಳ್ಳಬೇಕು. ಆದರೆ ಅಲ್ಲಿ ಯಾವ ಕಾರ್ಯಕ್ರಮಗಳೂ ನಡೆದಿಲ್ಲ. ದಯವಿಟ್ಟು ಇನ್ನು ಮೇಲಾದರೂ ಪ್ರಯತ್ನ ಮಾಡಬೇಕು. ಅನೇಕ ಜಿಲ್ಲೆಗಳಲ್ಲಿ ಬೇರೆ ಬೇರೆ ಜಿಲ್ಲಾ ಮಂತ್ರಿಗಳಾಗಿದ್ದರು. ಹಾಸನ ಜಿಲ್ಲೆಯವರು ಸಹಕಾರ ಸಚಿವರಾಗಿದ್ದರು. ಕೋಲಾರ ಜಿಲ್ಲೆಯವರೂ ಸಹಾ ಸಹಕಾರ ಸಚಿವರಾಗಿದ್ದರು. ಮುಖ್ಯಮಂತ್ರಿಗಳೂ ಸಹಾ ಆಗಿ ಹೋದರು. ಇವರೆಲ್ಲಾ ವ್ಯವಸಾಯಗಾರರು ಬೆಳೆದಂಥ ಬೆಳೆಗೆ, ಮಾಲಿಗೆ ನಿರ್ಧಿಷ್ಟವಾದ ಬೆಲೆಗೆ ಏನು ಪ್ರಯತ್ನ ಮಾಡಿದ್ದಾರೆ? ಅದರ ಬಗ್ಗೆ ನಾವು ತಲೆ ಕೆಳಗು ಮಾಡುವ ಸ್ಥಿತಿ ಬಂದಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕ ರಾಜ್ಯ ಹೇಗಿದೆ ಎನ್ನುವುದನ್ನು ನಮ್ಮ ರೂರಲ್ ಡೆವಲಪ್‌ಮೆಂಟ್ ಮಂತ್ರಿಯವರು ಬಹಳ ಸೊಗಸಾಗಿ ವಿವರಿಸಿದ್ದಾರೆ ನಿಜ. ನ್ಯಾಚುರಲ್ ರಿಸೋರ್ಸನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ? ಹಾಸನದಲ್ಲಿ ಉತ್ತಮವಾದ ಪೊಟಾಟೊ ಬೆಳೆಯುತ್ತಿದ್ದಾರೆ. ಪೊಟಾಟೊವನ್ನು ಸಂಗ್ರಹಿಸಿ ಇಡಲಿಕ್ಕೆ ವೇರ್‌ಹೌಸ್‌ಗಳನ್ನು ಇಟ್ಟಿದ್ದಾರೆ. ಆದರೆ ಅಲ್ಲಿ ಇವತ್ತು ಅದನ್ನು ನಾಟಕದ ಮನೆಯನ್ನು ಮಾಡಲಿಕ್ಕೆ ಹತ್ತಿದ್ದಾರೆ. ಬರೀ ಗೋಡೌನ್ ಕಟ್ಟಿದರೆ ಆಗುವುದಿಲ್ಲ. ಎನ್.ಸಿ.ಡಿ.ಸಿ. ಹಣ ಸಿಗುತ್ತದೆ ಎಂದು ಗೋಡೌನ್‌ಗಳನ್ನು ಕಟ್ಟಿದರೆ ಸಾಲದು. ಮಳಿಗೆಗಳಲ್ಲಿ ರೈತರಿಗೆ ಹಣ ಕೊಡುವಂಥ ವ್ಯವಸ್ಥೆಯನ್ನು ನೀವು ಏನಾದರೂ ಮಾಡಿದ್ದೀರಾ ? ವೇರ್‌ಹೌಸಿಂಗ್ ಕಾರ್ಪೋರೇಷನ್‌ಗೆ ಹೇಗೆ ನಿರ್ಧಾಕ್ಷಿಣ್ಯವಾಗಿ ಜನರಿಗೆ ಬೇಕಾದಂಥ ಸಹಾಯವನ್ನು ಕೊಡುತ್ತಿದ್ದಾರೆ. ಆ ರೀತಿಯ ವ್ಯವಸ್ಥೆ ನಮ್ಮಲ್ಲಿ ಬರಬೇಕು. ಕೇವಲ ಕಾಗದದ ರೂಪದಲ್ಲಿ ಬಂದರೆ ಸಾಲದು. ಹಾಸನ ದಲ್ಲಿ ಬೆಳೆಯತಕ್ಕಂಥ ಪೊಟಾಟೋ ಬಾಂಬೆಯವರು, ಮದ್ರಾಸಿನವರು ಒಯ್ಯುತ್ತಿದ್ದಾರೆ. ಅವರು ಅದನ್ನು ಚಿಪ್ಸ್ ಮಾಡಿ ನಮಗೇ ಕಳುಹಿಸುತ್ತಿದ್ದಾರೆ, ನಾವುಗಳು ಚಿಪ್ಸನ್ನು ತೆಗೆದುಕೊಳ್ಳುವಂಥ ಕರ್ತವ್ಯವನ್ನು ಮಾಡುತ್ತಿದ್ದೇವೆ. ಸುಮಾರು ಒಂದು ರೂಪಾಯಿ ಬೆಲೆ ಬಾಳುವ ಈ ಪೊಟಾಟೋ ಹತ್ತು ರೂಪಾಯಿ ಬೆಲೆ ಬಾಳುವಂಥ ಚಿಪ್ಸ್ ಆಗಿ ಪರಿವರ್ತನೆಯಾಗುವ ವಸ್ತು ಆಗುತ್ತಿದೆ. ಅದರ ಲಾಭ ನಮ್ಮ ರೈತರಿಗೆ ಸಿಗುತ್ತಿಲ್ಲ. ಮುಂಬೈನವರಿಗೂ, ಮದ್ರಾಸಿನವರಿಗೂ ಇದರ ಲಾಭ ಕೊಟ್ಟು, ಅವರು ಅಂತಸ್ತಿನ ಮೇಲೆ ಅಂತಸ್ತು ಮನೆ ಕಟ್ಟಿಕೊಳ್ಳುತ್ತಿದ್ದಾರೆ ಕರ್ನಾಟಕದ ಜನತೆ ಭಿಕಾರಿಗಳಾಗುವ ಪರಿಸ್ಥಿತಿಗೆ ಬಂದಿದ್ದಾರೆ ಎಂದು ಬಹಳ ವಿಷಾದದಿಂದ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಕೋಲಾರದಲ್ಲಿ ಬೆಳೆಯತಕ್ಕಂಥ ಟೊಮೆಟೊ ಬೆಳೆ ಒಮ್ಮೊಮ್ಮೆ ಅತ್ಯಂತ ಹೆಚ್ಚಿನ ಬೆಲೆಯಾದಾಗ ಅದರ ಬೆಲೆ ಎಷ್ಟು ಎಂದು ತಮಗೆ ಗೊತ್ತೇ ಉಪಾಧ್ಯಕ್ಷರೇ ? ಕೇವಲ ಕೆ.ಜಿ.ಗೆ ನಲವತ್ತು ಪೈಸೆ ಬೆಲೆಯಾಗುತ್ತದೆ. ಅದೇ ಟೊಮೆಟೋವನ್ನು ನಾವು ನೀವು ತೆಗೆದುಕೊಳ್ಳಲಿಕ್ಕೆ ಹೋದರೆ ೫ ರೂಪಾಯಿ ಬೆಲೆ ಯಾಗುತ್ತದೆ. ಹೀಗಾದರೆ ಇದರ ಅಂತರದ ಲಾಭವನ್ನು ನಡುಮಧ್ಯದ ವ್ಯಾಪಾರಸ್ಥರು ಪಡೆಯುತ್ತಿದ್ದಾರೆ. ಆ ವ್ಯಾಪಾರಸ್ಥರನ್ನು ತಡೆಗಟ್ಟುವಂಥ ಶಕ್ತಿ ನಿಮ್ಮಲ್ಲಿಲಿಲ್ಲ. ಮಾನ್ಯ ಸಚಿವರು ಈಗ ಧೈರ್ಯ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಆದರೆ ನಾವು ಬರೀ ರೆಗ್ಯುಲೇಷನ್ ಮಾಡಿದರೆ ಆಗುವುದಿಲ್ಲ, ರೆಗ್ಯುಲೇಷನ್ ವ್ಯವಹಾರಕ್ಕೆ ಬೇಕಾದಂಥ ಹಣದ ವಿಚಾರಣೆಯೂ ಬೇಕು. ಹಣದ ವಿತರಣೆ ಮಾಡಬೇಕಾದರೆ ಸೆಂಟ್ರಲ್ ಬ್ಯಾಂಕುಗಳು ಇದ್ದಾವೆ. ಅಫೆಕ್ಸ್ ಬ್ಯಾಂಕುಗಳು ಇದ್ದಾವೆ. ಬರೀ ಅಫೆಕ್ಸ್ ಬ್ಯಾಂಕುಗಳು ಇದ್ದರೆ ಸಾಲದು. ಅಫೆಕ್ಸ್ ಗುಣಬೇಕು ಸಹಕಾರಿಗಳು ಸಹಕಾರದಿಂದ ಸಹಕಾರ ಮನೋವೃತ್ತಿ ಅನುಕರಿಸುವುದೇ ಇಲ್ಲ. ನಾಳಿನ ಭವಿಷ್ಯವನ್ನು ಕಾಣುವಂಥ ಶಕ್ತಿಯು ಇವರಲ್ಲಿ ಬರಬೇಕು. ಕಾಫಿ ಎಕ್ಸ್‌ಪೋರ್ಟ್ ಆಗುತ್ತಿದೆ. ಟೀ ಎಕ್ಸ್‌ಪೋರ್ಟ್ ಆಗುತ್ತಿದೆ. ನಮ್ಮಲ್ಲಿ ಬೆಳೆಯುವ ಅನೇಕ ಹಣ್ಣುಗಳನ್ನು ಪ್ರೋಸೆಸ್ ಮಾಡಿ ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ. ಈ ಎಕ್ಸ್‌ಪೋರ್ಟ್‌ಗೆ ಬೇಕಾದಂಥ ಬ್ಯಾಂಕ್‌ಗ್ರೌಂಡು ನಮಗೆ ಏನು ಇದೆ ಅದಕ್ಕೆ ಬೇಕಾದ ಬ್ಯಾಂಕ್‌ಗ್ರೌಂಡ್ ಸರಿಯಾಗಿಲ್ಲ. ಎಂ. ಎಸ್. ಐ ಎಲ್. ಇದೆ, ಅದರ ಸಹಕಾರದೊಡನೆ ಒಟ್ಟುಗೂಡಿ ಎಕ್ಸ್‌ಪೋರ್ಟ್ ಮಾಡುತ್ತೇವೆ. ಎಂದು ಹೇಳುವ ಪರಿಸ್ಥಿತಿ ಇಲ್ಲ. ನಮ್ಮಲ್ಲಿ ಕೋ ಆರ್ಡಿನೇಷನ್ ಇಲ್ಲ. ಅದು ಇದ್ದಿದ್ದರೆ ಕೋಲಾರ ಬರ ಬೀಳುವ ಅವಕಾಶ ಇರುತ್ತಿರಲಿಲ್ಲ. ಹಾಸನದ ರೈತರು ಬಳಲಬೇಕಾದಂಥ ಅವಕಾಶ ಇರುತ್ತಿರಲಿಲ್ಲ. ಶಿವಮೊಗ್ಗದಲ್ಲಿ ಭತ್ತವನ್ನು ಹೇರಳವಾಗಿ ಬೆಳೆಯುತ್ತಾರೆ ಅಲ್ಲಿರುವ ಗೋಡೌನುಗಳು ಸರ್ಕಾರಕ್ಕೆ ಸಾಲದಾಗಿದೆ. ಅಲ್ಲಿರುವ

ರೈಸ್ ಮಿಲ್‌ನಲ್ಲಿ ಎಣ್ಣೆ ತೆಗೆಯುವ ಕಾರ್ಯಕ್ರಮ ಹಾಕಿದರೆ ಪ್ರಯೋಜನವಾಗುವುದಿಲ್ಲ. ಕೋಲಾರದಲ್ಲಿ ಹತ್ತಿ ಗಿರಣಿ ಹಾಕಿದರೆ ಪ್ರಯೋಜನ ಆಗುವುದಿಲ್ಲ, ಎಲ್ಲಿ ಹತ್ತಿ ಬೆಳೆಯುತ್ತಾರೆ ಅಲ್ಲಿ ಹತ್ತಿ ಗಿರಣಿಯನ್ನು ಹಾಕಬೇಕು. ಪ್ಯಾಡಿ ಎಲ್ಲಿ ಬೆಳೆಯುತ್ತಾರೆ. ಅಲ್ಲಿ ಪ್ಯಾಡಿ ಗಿರಣಿ ಹಾಕಬೇಕು. ಮಂಗಳೂರಿನಲ್ಲಿ ಹತ್ತಿ ಗಿರಣಿ ಹಾಕಿದರೆ ಆಗುವುದಿಲ್ಲ. ಅಲ್ಲಿ ಗೋಡಂಬಿ ಪ್ರೋಸೆಸ್ ಕಾರ್ಖಾನೆಗಳನ್ನು ಹಾಕಬೇಕು.

೪–೦೦ ಪಿ.ಎಂ.

ನಮ್ಮ ರಾಜ್ಯದಲ್ಲಿರುವ ೧೭೫ ತಾಲ್ಲೂಕುಗಳಲ್ಲಿರುವ ರೈತರು ೧೭೫ ವಿಶಿಷ್ಟ ತರಹದ ಬೆಳೆಗಳನ್ನು ಬೆಳೆಯುತ್ತಾರೆ. ಅಂಥ ಬೆಳೆಗಳನ್ನು ರೈತರಿಂದ ಖರೀದಿ ಮಾಡಿ ಅವುಗಳನ್ನು ವಿತರಣೆ ಮಾಡುವ ದಿಸೆಯಲ್ಲಿ ಸರ್ಕಾರ ಮುಂದುವರೆದರೆ ಸಹಕಾರಕ್ಕೆ ಮೆರುಗು ಬರುತ್ತದೆ. ಇಂತಹ ಪ್ರಯತ್ನವನ್ನು ನಾನಿದ್ದಾಗಲೂ ಮಾಡಿದ್ದೆ. ನಾನು ಸಹಕಾರ ಸಚಿವನಾಗಿರಲಿಲ್ಲ. ನಾನು ವ್ಯವಸಾಯ ಸಚಿವನಾಗಿದ್ದೆ. ಆದರೂ ಕೂಡ ಆಗ ಸಹಕಾರ ಸಚಿವರಾಗಿದ್ದ ಶ್ರೀ ಶಂಕರ ಆಳ್ವ ಅವರಿಗೆ ವಿಶೇಷವಾಗಿ ಪ್ರಾರ್ಥನೆ ಮಾಡಿ ಕೊಂಡು ಈ ಕೆಲಸ ಹೆಚ್ಚಾಗಿ ಆಗಬೇಕೆಂದು ಹೇಳಿದ್ದೆ. ನ್ಯಾಷನಲ್ ಕೋ–ಆಪರೇಟೀವ್ ಡೆವಲಪ್ಮೆಂಟ್ ಕಾರ್ಪೊರೇಷನ್ನಿನವರು ಅನೇಕ ವಿಧವಾಗಿ ಹಣ ಕೊಡುತ್ತಿದ್ದಾರೆ. ನಮಗೆ ಹೆಚ್ಚು ಹಣ ಕೊಡುವುದಕ್ಕೆ ಅವರು ಮುಂದೆ ಬರುತ್ತಿದ್ದಾರೆ. ಆದರೆ ತೆಗೆದುಕೊಳ್ಳುವ ಶಕ್ತಿ ನಮ್ಮಲ್ಲಿಲ್ಲ. ಅನೇಕ ಸಂದರ್ಭದಲ್ಲಿ ಜನರು ಸಹ ಮುಂದೆ ಬರುವುದಿಲ್ಲ. ಈ ಬಗ್ಗೆ ಪೂರ್ತಿಯಾಗಿ ನಾನು ಇಲಾಖೆಯ ಮೇಲೇ ಜವಾಬ್ದಾರಿ ಹಾಕುವುದಿಲ್ಲ. ಜನ ಕೂಡ ಮುಂದೆ ಬರಲು ತಯಾರಾಗಿಲ್ಲ. ಆದ್ದರಿಂದ ಅವರು ಮುಂದೆ ಬರುವಂತೆ ತಯಾರು ಮಾಡುವ ಭಾರ ಸರ್ಕಾರದ್ದು. ೧೯೦೫ನೇ ಇಸವಿಯಲ್ಲಿ ಸಹಕಾರ ಸಂಘ ಪ್ರಾರಂಭ ಮಾಡ ಬೇಕಾದರೆ ಯಾರೂ ಸಹ ರಿಜಿಸ್ಟ್ರಾರ್ ಅವರ ಹತ್ತಿರಕ್ಕೆ ಅರ್ಜಿ ಹಾಕಿಕೊಳ್ಳುತ್ತಿರಲಿಲ್ಲ. ಈ ಬಗ್ಗೆ ಮನೆ ಮನೆಗೆ ಹೋಗಿ ಹೇಳುವ ಸಲುವಾಗಿ ಆನರರಿ ಆರ್ಗನೈಸರ್ಸ್ ಎಂದು ಇದ್ದರು. ಸಹಕಾರ ಎಂದರೆ ಹೀಗಿದೆ ನೀನು ಸಹಿ ಮಾಡು ಎಂದು ಹೇಳಿ, ಷೇರು ಹಣಕ್ಕೆ ೫ ರೂಪಾಯಿ ಅವನ ಹತ್ತಿರ ಇಲ್ಲದಿದ್ದರೆ ತಾವೇ ಅವನ ಹೆಸರಿನಲ್ಲಿ ಕೊಟ್ಟು ಸಹಕಾರ ಸಂಘಗಳನ್ನು ನೋಂದಾಯಿಸುತ್ತಿದ್ದರು. ಗದಗ್‌ನಲ್ಲಿ ಕೋ–ಆಪರೇಟೀವ್ ಕಾಟನ್ ಸೊಸೈಟಿ ಎಂದು ೧೯೧೭ರಲ್ಲಿ ಪ್ರಾರಂಭವಾಯಿತು. ಯು. ಬ್ಯಾಂಕ್ ಎಂಬುವವರು ಅದನ್ನು ರಿಜಿಸ್ಟರ್ ಮಾಡಿದರು. ಅದು ಪ್ರಾರಂಭವಾದ ಸ್ಪಿರಿಟ್ ನೋಡಿ ಎಲ್ಲ ಟ್ರೇಡರ್ಸ್ ಬಾಯ್‌ಕಾಟ್ ಮಾಡಿದರು. ರಿಜಿಸ್ಟ್ರಾರ್ ಆಫೀಸಿನಲ್ಲಿ ಒಬ್ಬ ಪರ್ಸನಲ್ ಅಸಿಸ್ಟೆಂಟ್ ಇದ್ದ. ಈಗೆಲ್ಲಾ ಜಾಯಿಂಟ್ ರಿಜಿಸ್ಟ್ರಾರ್, ಅಡಿಷನಲ್ ರಿಜಿಸ್ಟ್ರಾರ್ ಎಂದು ಇದ್ದಾರೆ. ಆಗ ಈ ರೀತಿ ಇರಲಿಲ್ಲ. ಅವರು ನಾನು ಪ್ರಾರಂಭಿಸಿದ ಸಂಸ್ಥೆಗೆ ಯಾರು ಕೊಡಲಿಪೆಟ್ಟು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಅದನ್ನು ಪ್ರಬಲವಾಗಿ ವಿರೋಧ ಮಾಡಿ ಅದನ್ನು ಹತ್ತಿಕ್ಕುತ್ತೇನೆ, ಆ ಸಂಸ್ಥೆಯನ್ನು ಬೆಳೆಸುತ್ತೇನೆ ಎಂದು ಬಹಿರಂಗವಾಗಿ ಹೇಳಿದರು. ಹಾಗೆ ಈಗ ಯಾರಾದರೂ ಹೇಳಿದ್ದಾರಾ ? ಯಾವುದೇ ದೃಷ್ಟಿ ಯಿಂದ ಇಂತಹ ವ್ಯವಸ್ಥೆ ಮಾಡುವಾಗ ಬರೀ ಸರ್ಕಾರ ಮಂತ್ರಿಗಳಾಗಲೀ, ಸರ್ಕಾರದವರಾಗಲೀ ಹೇಳಿದರೆ ಆಗುವುದಿಲ್ಲ. ಅವರು ಕೈ ಬಲಪಡಿಸುವುದಕ್ಕೆ ಸಮರ್ಥ ರೀತಿಯಿಂದ ಆರ್ಥಿಕ ಇಲಾಖೆ ಬರಬೇಕು. ಇವತ್ತಿನ ದಿವಸ ಆರ್ಥಿಕ ಇಲಾಖೆ ಆ ರೀತಿ ಇದೆಯೆ ? ಅದರ ಬಗೆ ಆಮೇಲೆ ಹೇಳುತ್ತೇನೆ ಸಮರ್ಥ ರೀತಿಯಿಂದ ಕೆಲಸ ಮಾಡದೆ ಸಹಕಾರ ಎಂದು ಕೂತರೆ 'one for all--all for none ಎಂದು ಹೇಳಿದರೆ ಏನು ನಡೆಯುತ್ತದೆ ? ಇವತ್ತು one for all--all for one ಎಂಬ ತತ್ವಕ್ಕೆ ಅನೇಕ ಕುಟುಂಬಗಳು ವಿರೋಧ ಮಾಡುವುದಕ್ಕೆ ಹತ್ತಿವೆ. ಹೊಂದಾಣಿಕೆ ಇರುವ ಅಣ್ಣತಮ್ಮಂದಿರು ಬೇರೆ ಆಗುತ್ತಿದ್ದಾರೆ. ಅದಕ್ಕೇ ಜಾಯಿಂಟ್ ಫಾರ್ಮಿಂಗ್ ಆಗಿಲ್ಲ. ಈ ರೀತಿ ಆದರೆ ಸಹಕಾರ ಯಾವ ದೃಷ್ಟಿಯಿಂದ ಬೆಳೆಯಬೇಕು ? ಹೊರಗಡೆ ಇರುವುದಕ್ಕಿಂತ ಇಲ್ಲಿ ಸಹಕಾರ ಸಿಗುತ್ತದೆ, ಅನುಕೂಲ ವಾಗುತ್ತದೆ ಎಂದು ಮನವರಿಕೆ ಮಾಡಿದರೆ ಜನ ಸಹಕಾರಕ್ಕೆ ಇಳಿಯಬಹುದು. ಆದರೆ ಇದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಇವತ್ತು ಐದಾರು ಮಂದಿ ಜಾಯಿಂಟ್ ರಿಜಿಸ್ಟ್ರಾರ್‌ಗಳು, ನಾಲ್ಕೈದು ಮಂದಿ ಅಡಿಷನಲ್ ರಿಜಿಸ್ಟ್ರಾರ್‌ಗಳು ಇದ್ದಾರೆ ಎಂದು ಹೇಳಬಹುದು. ಅವರೆಲ್ಲಾ ಏತಕ್ಕಿದ್ದಾರೆ ? ಒಂದು ದಿನದಲ್ಲಿ ಮಾಡುವ ಕೆಲಸವನ್ನು ೧೦ ದಿವಸಗಳಲ್ಲಿ ಮಾಡುವುದಕ್ಕೆ ಅವರಿದ್ದಾರೆಯೇ ಹೊರತು, ಅವರಿಂದ ಬೇರೆ ಉಪಯೋಗ ಇಲ್ಲ. ತಮ್ಮ ತಮ್ಮ ಹುದ್ದೆಗಳನ್ನು ನಿಭಾಯಿಸಿಕೊಂಡು ಯಾವುದೂ ಕೆಲಸ ಮಾಡದೆ ಕೇವಲ ಕೊಕ್ಕೆ ಹಾಕುವ ಕೆಲಸ ಮಾಡುವುದಕ್ಕೆ ಅವರಿದ್ದಾರೆ. ಒಬ್ಬೊಬ್ಬ ಅಡಿಷನಲ್ ರಿಜಿಸ್ಟ್ರಾರನ್ನು ಒಂದೊಂದು ಸೊಸೈಟಿಗೆ ಹಾಕಿ, ಅನುಭವ ಆಗಲಿ. ಕಷ್ಟ ಅನುಭವಿಸಲಿ, ಆಗ ಅವನಿಗೆ ಗೊತ್ತಾಗುತ್ತದೆ ನಾನು ಇಲ್ಲಿ ಕೂತು ಮಾಡಿದ್ದು ತಪ್ಪು ಎಂದು. ಒಮ್ಮೆಲೇ ಅವನು ಬಂದ ಕೂಡಲೇ

ಮೇಲೆ ಕೂರಿಸುತ್ತೀರಿ. ಇದರಿಂದ ಅವನಿಗೆ ಏನೂ ತಿಳಿಯುವುದಿಲ್ಲ. ಅವನು ಆಕಾಶದಲ್ಲಿರುತ್ತಾನೆ. ಕೆಳಗಿನ ಜನರ ಕಷ್ಟನಷ್ಟಗಳು ಗೊತ್ತಾಗುವುದಿಲ್ಲ. ತಾವು ಒಮ್ಮೆಲೇ ಆಕಾಶದಲ್ಲಿ ಕೂರಿಸುವ ಬದಲು ಕೆಳಗಿನ ದರ್ಜೆಯಲ್ಲಿ ಕೂರಿಸುವುದನ್ನು ಕಲಿಯಿರಿ. ಏನಾದರೂ ಹೊಣೆಗಾರಿಕೆ ಕೊಡಿ. ಒಮ್ಮೆ ಸೂಪರ್‌ಸೆಷನ್ ಆದಮೇಲೆ ಅವರು ಮತ್ತೆ ಸರಿಯಾಗಿ ಕೆಲಸ ಮಾಡುವುದಿಲ್ಲ. ಯಾವುದಾದರೂ ಒಂದು ಸಂಸ್ಥೆ ಕರ್ನಾಟಕ ರಾಜ್ಯದಲ್ಲಿ ಸಸ್ಪೆಂಡ್ ಮಾಡಿದ ಮೇಲೆ ಅಧಿಕಾರಸ್ಥರು ಭಲೋ ಕೆಲಸ ಮಾಡುವಂತೆ ನೋಡಿಕೊಂಡಿರುವ ಉದಾಹರಣೆ ಇದೆಯೇ ? ಈಗ ಜನತಾ ಪಕ್ಷದವರು ಅಧಿಕಾರದಲ್ಲಿದ್ದಾರೆ, ಕಾಂಗ್ರೆಸ್ (ಐ)ನಲ್ಲಿ ನಾನಿದ್ದೇನೆ ಎಂದು ನಾನು ಮಾತನಾಡುವುದಿಲ್ಲ, ನಾನೂ ಒಬ್ಬ ಸಹಕಾರಿ ಎಂಬ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ಇವತ್ತು ಒಬ್ಬ ಮಂತ್ರಿಯಾಗಿರಬಹುದು, ನಾಳೆ ಸಹಕಾರಿಯಾಗಬಹುದು ಎಂದು ನನ್ನಷ್ಟಕ್ಕೆ ನಾನೇ ವಿವೇಚನೆ ಮಾಡಿದ್ದೇನೆ. ಯಾವ ಅಧಿಕಾರಿ ಕೂಡ ಸಹಕಾರ ಸಂಘವನ್ನು ಸುಗಮವಾಗಿ ನಡೆಸಿ ಸರಿಯಾಗಿದೆ ಎಂದು ಹೇಳುವುದಿಲ್ಲ. ಇವೊತ್ತು ಈ ರಂಗದಲ್ಲಿ ಪ್ರಾಮಾಣಿಕರಾದವರು ಸಿಗುವುದಿಲ್ಲ. ಪ್ರಾಮಾಣಿಕರು ಅಲ್ಲಿ ಹೋಗುವುದೇ ಇಲ್ಲ ಅಪ್ರಮಾಣಿಕರನ್ನು ತಾವು ಕಳುಹಿಸುತ್ತೀರಿ. ಅಂತಹವರ ನೇತೃತ್ವದಲ್ಲಿ ಸಹಕಾರ ಸಂಘದವರು ಕೆಲಸ ಮಾಡಬೇಕು. ಅವರು ಯಾವ ರೀತಿ ಇದ್ದರೂ ನಮಸ್ಕಾರ ಮಾಡಬೇಕು. ಅಂತಹವರೂ ಸೆರೆ ಕುಡಿದರೂ ದುಡ್ಡು ತಿಂದರೂ ನಮಸ್ಕಾರ ಮಾಡಬೇಕು. ಗಂಡಾರ ಗುಂಬಳಿ ಮಾರಾಟ ಮಾಡಿದರೂ ನಮಸ್ಕಾರ ಮಾಡಬೇಕು. ಈ ದುರ್ದೆಸೆಯನ್ನು ತೆಗೆದುಹಾಕುವುದಕ್ಕೆ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಬೇಕು. ಮಾನ್ಯ ಮಂತ್ರಿಗಳು ಸಹಕಾರಿಗಳು. ಅವರ ಕೈಕೆಳಗೆ ಪ್ರಾಮಾಣಿಕರಾದ ಸೆಕ್ರೆಟರಿ ಇದ್ದಾರೆ. ಅವರನ್ನಿಟ್ಟುಕೊಂಡು ಇವರು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ನಿಜವಾಗಿಯೂ ಉಪಯುಕ್ತತೆಯನ್ನು ಸಾಧನೆ ಮಾಡುವುದಕ್ಕೆ ಸಾಧ್ಯ. ಆ ದೃಷ್ಟಿಯಿಂದ ಇವತ್ತಾದರೂ ಪ್ರಯತ್ನ ಮಾಡಿ. ಈ ಸಹಕಾರ ಚಳುವಳಿಯಲ್ಲಿ ಅನೇಕ ವಿಧವಾದ ನಡವಳಿಕೆಯಿಂದ ಜನರ ಕಲ್ಯಾಣ ಸಾಧಿಸುವುದಕ್ಕೆ ಸಾಧ್ಯವಿದೆ. ಕ್ರೆಡಿಟ್ ಸೊಸೈಟಿಗಳಿಂದ ಯಾವ ಬಡ್ಡಿಯಿಂದ ಸಾಲ ಕೊಡುತ್ತೀರಿ ಅದು ಮಹತ್ವವಲ್ಲ. ಆದರೆ ಜನರಿಗೆ ವೇಳೆಗೆ ಸರಿಯಾಗಿ ಕೊಡುವುದು ಮಹತ್ವದ್ದು. ಡಿ.ಸಿ.ಸಿ. ಬ್ಯಾಂಕುಗಳು ಇವತ್ತು ಎಷ್ಟು ಸುವ್ಯವಸ್ಥೆಯಲ್ಲಿವೆ ? ಯಾವುದಾದರೂ ಬ್ಯಾಂಕಿನಲ್ಲಿ ಬಹುಸಂಖ್ಯಾತ ಜನ ಸಾಲ ಕೊಡದಿದ್ದರೆ ಅಲ್ಲಿ ಬೇರೆಯವರಿಗೆ ಸಿಗತಕ್ಕ ಸಾಲವನ್ನು ಅಪೆಕ್ಸ್ ಬ್ಯಾಂಕಿನವರು ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ರಿಸರ್ವ್ ಬ್ಯಾಂಕ್ ರೆಗ್ಯುಲೇಷನ್, ಕಂಡೀಷನ್ಸ್ ಯಾವ ರೀತಿ ಇದೆ ಎಂಬುದನ್ನು ನೋಡುತ್ತಿದ್ದೇವೆ. ಏರ್ ಕಂಡೀಷನ್ ರೂಮಿನಲ್ಲಿ ಕೊಡತಕ್ಕ ರಿಸರ್ವ್ ಬ್ಯಾಂಕ್ ಅಧಿಕಾರಿಗಳು ಹೇಳಿದಂತೆ ನಾವು ಕೇಳಬೇಕು. ಜನರ ಕಷ್ಟ ಏನು ಎಂಬುದು ರಿಸರ್ವ್ ಬ್ಯಾಂಕ್‌ನವರಿಗೆ ಗೊತ್ತಿರುವುದಿಲ್ಲ. ನಮಗೆ ರಿಸರ್ವ್ ಬ್ಯಾಂಕಿನವರು ಗೊತ್ತಿರುವುದಿಲ್ಲ. ನಮಗೆ ಸಹಕಾರಿ ಮಂತ್ರಿಗಳು ಗೊತ್ತು. ನಾವು ನಿಮ್ಮನ್ನು ಕೇಳಬೇಕು. ಅವ್ಯಾವಹಾರಿಕವಾಗಿ ರಿಸರ್ವ್ ಬ್ಯಾಂಕಿನವರು ಆಥರೈಸೇಷನ್ ಕೊಡುತ್ತಾರೆ. ಕೇಂದ್ರ ಸರ್ಕಾರದ ಒಂದು ಭಾಗವಾದ ಯಾವುದಾದರೂ ವಿತರಣೆ ಮಾಡುವ ಸಂಸ್ಥೆ ತೆಗೆದುಕೊಳ್ಳಿ. ಆ ಸಂಸ್ಥೆಗೆ ಸಾಲ ಮಂಜೂರು ಮಾಡುತ್ತಾರೆ. ಆಗ ೧೦೦ಕ್ಕೆ ೭೦ರಷ್ಟು ಮಾರ್ಜಿನ್ ಇಡಬೇಕು ಎಂದು ಹೇಳುತ್ತಾರೆ. ನಂತರ ೪೦ಕ್ಕೆ ಇಳಿಸುತ್ತಾರೆ. ಅದಕ್ಕೆ ನಾವು ಒಪ್ಪುತ್ತೇವೆ. ಆದ್ದರಿಂದ ನಾನು ಹೇಳುವುದು ಇಂಟೆಲಿಜೆನ್ಸ್ ಸೆಲ್ ಒಂದನ್ನು ನಾವು ತಯಾರು ಮಾಡಬೇಕು. ಏನೇನು ಅಡಚಣೆ ಬರುತ್ತದೆ ಎಂಬುದನ್ನು ನೋಡುವಂಥ ಸೆಲ್ ನಮ್ಮಲ್ಲಿರಬೇಕು. ಈ ರೀತಿಯಾಗಿ ಇಂಟೆಲಿಜೆನ್ಸ್ ಸೆಲ್ ರಚನೆ ಮಾಡುವುದಾದರೆ, ಅದರ ಸಹಕಾರದಿಂದ ರಿಸರ್ವ್ ಬ್ಯಾಂಕಿಗೆ, ಕೇಂದ್ರ ಸರ್ಕಾರಕ್ಕೆ ಯಾವ ರೀತಿಯಿಂದ ಒತ್ತಾಯ ಮಾಡಬೇಕು ಎಂಬುದನ್ನು ನೋಡಬಹುದು. ಇಲ್ಲಿ ಬಂದ್ ಗಿಂದ್ ಮಾಡಿ ಸತ್ಯಾಗ್ರಹ ಮಾಡುವ ಬದಲು ಆ ಬಗ್ಗೆ ಸತ್ಯಾಗ್ರಹ ಮಾಡಿದರೆ ಜನ ನಿಮ್ಮನ್ನು ನೆನೆಸುತ್ತಾರೆ. ತಾವು ಕೀರ್ತಿವಂತರಾಗುತ್ತೀರಿ ಇಂಥ ಕೆಲಸಕ್ಕೆ ನಾವು ಮುಂದಾಗೋಣ. ಇವತ್ತಿನ ದಿವಸ ನಮಗೆ ನಬಾರ್ಡ್‌ನವರು ಸಾಲ ಕೊಡುತ್ತಾರೆ. ನಮ್ಮ ಮುಖ್ಯಮಂತ್ರಿಗಳು ಕಳಕಳಿಯನ್ನು ವ್ಯಕ್ತ ಮಾಡಿ ನಬಾರ್ಡ್‌ಗಿಂತ ೩ ಪರ್ಸೆಂಟ್ ಕಡಿಮೆ ಬಡ್ಡಿಗೆ ಸಾಲ ಕೊಡುತ್ತೇವೆ ಎಂದು ಹೇಳಿದ್ದಾರೆ. ಈ ಬಗ್ಗೆ ಜನರಿಗೆ ಒಂದು ಶಾಶ್ವತವಾದ ಭರವಸೆ ಬೇಕು. ಗೆಜೆಟ್ ನೋಟಿಫಿಕೇಷನ್‌ನಿಂದ ಕೊಡುತ್ತೇವೆಂದು ಹೇಳಿದರೆ ಪ್ರಯೋಜನವಾಗುವುದಿಲ್ಲ. ನಾಳೆ ಮುಂಜಾನೆ ಇಲ್ಲ ಎಂದು ಹೇಳಬಹುದು. ನಾನು ಮೊದಲೇ ಹೇಳಿದಂತೆ ಸಹಕಾರಿ ಕಾಯಿದೆಯಲ್ಲಿ ಆ ರೀತಿ ತಿದ್ದುಪಡಿ ಮಾಡಿ. ನಿಯಮಿತ ಕಾಲಕ್ಕೆ ಯಾರು ಸಾಲ ವಾಪಸ್ ಮಾಡುತ್ತಾರೆ ಆ ಮನುಷ್ಯನಿಗೆ ನಬಾರ್ಡ್‌ನವರಿಗೆ ಕೊಡುವಷ್ಟು ಹಣವನ್ನೇ ವಸೂಲು ಮಾಡುತ್ತೇವೆ, ಹೆಚ್ಚಿನ ಹಣವನ್ನು ಸಹಾಯಧನವಾಗಿ ಸರ್ಕಾರ ಕೊಡುತ್ತದೆ ಎಂದು ಹೇಳಿ. ಅದನ್ನು

ಬಿಟ್ಟು ಬೇರೆ ರೀತಿ ಸಹಾಯ ಮಾಡುತ್ತೇವೆ ಎಂದು ಹೋಗುತ್ತೀರಿ. ಬೇರೆ ಅನೇಕ ಸಹಾಯಧನಗಳನ್ನು ಕೊಡುತ್ತೇವೆ ಎಂದು ಹೋಗಿ ಮುಖ್ಯವಾದ ಸಹಾಯಧನವನ್ನು ತಪ್ಪಿಸುತ್ತೀರಿ. ಅವರು ಸರ್ಕ್ಯುಲರ್ ಕೊಟ್ಟರೆ ನಮಗೆ ರೂಪಾಯಿ ಬರುವುದಿಲ್ಲ, ಬ್ಯಾಂಕ್ ಬಂದ್ ಆಗುತ್ತದೆ ಎಂದು ಹೇಳುತ್ತಾರೆ. ಇದು ಆಗಬಾರದು.

ವೇಳೆಗೆ ಸರಿಯಾಗಿ ಸಾಲದ ವಿತರಣೆಯ ವ್ಯವಸ್ಥೆ ಆಗಬೇಕು. ಅದನ್ನು ನಾನು ಅಪೇಕ್ಷೆ ಮಾಡುತ್ತೇನೆ. ಇವತ್ತು ಸರಿಯಾಗಿ ಸಹಕಾರಿ ಕ್ಷೇತ್ರ ಸಫಲ ಆಗಬೇಕಾದರೆ ರೈತರಿಗೆ ಸಕಾಲದಲ್ಲಿ ಸಾಲ ಕೊಡಬೇಕಾಗುತ್ತದೆ. ಇವತ್ತು ಕೇರಳದಲ್ಲಿ ಸಾಲ ನೂರಕ್ಕೆ ನೂರು ವಸೂಲು ಆಗುತ್ತಾ ಇದೆ. ಅವರು ಸಾಲ ಪಡೆದು ಅಮೇರಿಕಾ, ರಷ್ಯಾ, ಜರ್ಮನಿಗಳಿಗೆ ಹೋಗಿದ್ದಾರೆ. ಇವತ್ತು ಅಲ್ಲಿ ಒಬ್ಬ ಸಾಲ ತೆಗೆದುಕೊಂಡಿದ್ದರೆ ಆತನ ತಮ್ಮ ಸಾಲವನ್ನು ತೀರಿಸುತ್ತಾನೆ. ಆತನ ಅಣ್ಣ ಕಾಕ ಎಲ್ಲಾ ಸೇರಿ ಬರುವ ಪಗಾರದಲ್ಲಿ ಸಾಲವನ್ನು ತೀರಿಸುತ್ತಾರೆ. ಆ ರೀತಿ ನಮ್ಮಲ್ಲಿ ಇಲ್ಲ. ಆದರೆ ನಮ್ಮಲ್ಲಿ ಹುಟ್ಟಿದ ಬೆಳೆ ಮೇಲೆ ಸಾಲ ತೀರಿಸಬೇಕು. ಬೆಲೆ ಏನಾದರು ಸ್ವಲ್ಪ ಅಸ್ತವ್ಯಸ್ತವಾದರೂ ಆತ ಡಿಫಾಲ್ಟ್ ಆಗುತ್ತಾನೆ. ಆತ ಮುಂದೆ ಸಾಗುವುದಿಲ್ಲ ಹಿಂದೆ ಬರುವುದಿಲ್ಲ. ಹಾಗೇ ಅತೋನಾಥ್ ತಾತೋನಾಥ್ ಆಗುತ್ತಾನೆ. ಇವತ್ತು ಹಳ್ಳಿಗಳಲ್ಲಿ ರೂರಲ್ ಗೋಡೌನ್ಸ್ ಎಂದು ಇವೆ. ಇದಕ್ಕೆ ಕೇಂದ್ರ ಸರ್ಕಾರದವರಾಗಲೀ, ಎನ್.ಸಿ.ಡಿ.ಸಿ.ಯವರಾಗಲೀ, ವಿಶ್ವ ಬ್ಯಾಂಕಿನವರಾಗಲೀ ಸಾಲವನ್ನು ಕೊಡುತ್ತಾರೆ. ಇದರಿಂದ ಸಾಕಷ್ಟು ಗೋಡೌನ್‌ಗಳನ್ನು ಕಟ್ಟುವುದಕ್ಕೆ ಅವಕಾಶ ಇದೆ. ಗೋಡೌನ್‌ಗಳನ್ನು ಕಟ್ಟುತ್ತಾರೆ. ಆದರೆ ಅವುಗಳ ಒಳಗೆ ಇರತಕ್ಕ ಮಾಲಿಗೆ ಸಾಲ ಕೊಡುವವರು ಯಾರು ? ಇದಕ್ಕೆ ಸಾಲ ಕೊಡದೇ ಇದ್ದರೆ ಏನು ಪ್ರಯೋಜನ ? ಇದನ್ನು ನೀವು ಆಲೋಚನೆ ಮಾಡಬೇಕು. ಇವತ್ತು ೧ ಸಾವಿರ ರೂಪಾಯಿ ಸಾಲ ಕೊಟ್ಟರೆ ೨ ಸಾವಿರ ರೂಪಾಯಿ ಮಾಲು ಗೋಡೌನ್‌ನಲ್ಲಿ ಇರುತ್ತದೆ. ಆದ್ದರಿಂದ ಈ ಬಗ್ಗೆ ಸಾಲ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ, ಇದೆಲ್ಲಾ ಸ್ಕೀಮ್ ಮಾಡುವವರ ಮೇಲೆ ಇರುತ್ತದೆ. ಇದನ್ನೆಲ್ಲಾ ಅಮಲಿನಲ್ಲಿ ತರುವವರು ತಂದೇ ತರುತ್ತಾರೆ. ಇದು ಸರಿ ಇರಲಿ ಅಥವಾ ಇಲ್ಲದಿರಲಿ, ಹೊಂದಿಕೆ ಇರಲಿ ಅಥವಾ ಹೊಂದಿಕೆ ಆಗದಿರಲಿ ಎಲ್ಲವನ್ನೂ ಅಮಲಿನಲ್ಲಿ ತರುವ ದೃಷ್ಟಿಯಿಂದ ಹಾಕುತ್ತಿದ್ದಾರೆ. ಇದರಿಂದ ನಾವು ಪೇಚಿಗೆ ಬೀಳುತ್ತೇವೆ, ಇದರಿಂದ ನಿಜವಾಗಿಯೂ ಉದ್ದೇಶ ಸಫಲವಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ನಾವು ದೀರ್ಘವಾಗಿ ಆಲೋಚನೆ ಇವತ್ತು ಕಟ್ಟತಕ್ಕ ಗೋಡೌನ್‌ಗಳು ಸದುಪಯೋಗ ಆಗಬೇಕು. ಇವತ್ತು ಕೆಲವು ಕಡೆ ಗೋಡೌನ್‌ಗಳನ್ನು ನಾಟಕ ಮಾಡುವುದಕ್ಕೆ ಉಪಯೋಗ ಮಾಡುತ್ತಿದ್ದಾರೆಂಬ ಮಾತನ್ನು ಬಹಳ ವಿಷಾದದಿಂದ ಹೇಳುತ್ತೇನೆ.

ಉಪಾಧ್ಯಕ್ಷರು.—ಅವನ್ನು ಶಾಲೆಗಳಿಗೆ ಕೊಡಬಹುದಲ್ಲ ?

ಶ್ರೀ ಕೆ. ಎಚ್. ಪಾಟೀಲ್.—ಭಲೋ ಜನ ಮುಂದೆ ಬಂದರೆ ಶಾಲೆಗಳನ್ನು ನಡೆಸುವುದಕ್ಕೆ ಕೊಡುತ್ತಾರೆ. ಅಲ್ಲಿ ಈಗ ದೊಡ ದೊಡ್ಡ ನಾಟಕಗಳನ್ನು ಆಡುವುದಕ್ಕೂ ಜಾಗ ಕೊಡುತ್ತಿದ್ದಾರೆ. ಇವತ್ತಿನ ದಿವಸ ಪ್ರತಿಯೊಂದು ಹಳ್ಳಿಗಳಲ್ಲೂ ಸೊಸೈಟಿ ಸೆಕ್ರೆಟರಿಗಳನ್ನು ವೇರ್ ಹೌಸಿಂಗ್ ಟ್ರೇನಿಂಗ್‌ಗೆ ಕಳುಹಿಸಬೇಕು. ಇವತ್ತು ಅಪೆಕ್ಸ್ ಬ್ಯಾಂಕಿನರಿಗೆ ಟ್ರೈನಿಂಗ್ ಕೊಟ್ಟರೆ ಏನು ಪ್ರಯೋಜನ ? ಇವತ್ತು ಹಳ್ಳಿಯನ್ನು ಉದ್ಧಾರ ಮಾಡತಕ್ಕ ಜನರಿಗೆ ಟ್ರೈನಿಂಗ್ ಕೊಡುವುದು ಅಗತ್ಯ ಇದೆ. ಯಾವ ರೀತಿ ಅದನ್ನು ನೋಡಿಕೊಳ್ಳಬೇಕು, ಯಾವ ರೀತಿ ರಸೀದಿ ನೀಡಬೇಕು ಯಾವ ರೀತಿ ಇನ್‌ಷೂರೆನ್ಸ್ ಮಾಡಬೇಕು ಹಾಗೂ ಹೇಗೆ ಹಣವನ್ನು ಕ್ಲೈಮ್ ಮಾಡಬೇಕು ಎನ್ನುವ ಬಗ್ಗೆ ಟೆಂಪರರಿಯಾಗಿ ಟ್ರೈನಿಂಗ್ ಕೊಡುವ ವ್ಯವಸ್ಥೆಯಾಗಬೇಕು.

ಒಬ್ಬ ಮಾನ್ಯ ಸದಸ್ಯರು.—ಗೋಡೌನ್‌ಗಳ ಬಗ್ಗೆ ಪ್ರೈಮರಿ ಸೊಸೈಟಿಗಳ ಸೆಕ್ರೆಟರಿಯವರಿಗೇ ಟ್ರೈನಿಂಗ್ ಕೊಡುತ್ತಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಅದಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಅದು ಸಾಲದು. ಆದರೆ ಯಾರು ಯಾರಿಗೆ ಕೊಟ್ಟದ್ದಾರೆಂದು ಗೊತ್ತಿಲ್ಲ. ನಾನು ಹೋಡಿದ ಅನೇಕ ಸಂಸ್ಥೆಗಳಲ್ಲಿ ಇವನ್ನು ಹೇಗೆ ನೋಡಿಕೊಳ್ಳಬೇಕು, ಹೇಗೆ ಇನ್‌ಷೂರೆನ್ಸ್ ಮಾಡಬೇಕು ಎಂಬುದೇ ಗೊತ್ತಿಲ್ಲ. ಇದಕ್ಕೆಲ್ಲಾ ಸುಸಜ್ಜಿತವಾದಂತಹ ಟ್ರೈನಿಂಗ್ ಕೊಟ್ಟರೆ ತಮಗೆ ಒಳ್ಳೆಯ ಕೀರ್ತಿ ಬರುತ್ತದೆಂದು ಹೇಳುತ್ತೇನೆ.

ಇನ್ನು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳ ಬಗ್ಗೆ ಹೇಳಬೇಕಾಗುತ್ತದೆ. ಎಲ್ಲಿಯವರೆಗೆ ನಮ್ಮ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳು ನಿಜವಾಗಿ ಪ್ರಗತಿಯನ್ನು ಸಾಧಿಸುವುದಿಲ್ಲವೋ ಅಲ್ಲಿಯವರೆಗೆ ಜನರಿಗೆ ಏನೂ ಪ್ರಯೋಜನವಾಗುವುದಿಲ್ಲ. ಕ್ರೆಡಿಟ್ ಆರ್ಗನೈಸೇಷನ್ಸ್ ಬರೀ ಸಾಲವನ್ನು ಹೆಚ್ಚು ಮಾಡುವ ಸಲುವಾಗಿ ಉಪಯೋಗವಾಗುತ್ತಿದೆಯೇ ಹೊರತು ಇನ್ನೇನೂ ಆಗುತ್ತಾ ಇಲ್ಲ. ಈ ಮಾರ್ಕೆಟಿಂಗ್ ಸೊಸೈಟಿಗಳಿಂದ ಏನು ಉಪಯೋಗ ? ಇವತ್ತಿನ ದಿವಸ ರೆಗ್ಯುಲೇಟೆಡ್ ಮಾರ್ಕೆಟ್ ಆಗಿದೆ. ಇದರಿಂದ ಪ್ರತ್ಯಕ್ಷವಾಗಿ ಇವರಿಗೆ ಆಗತಕ್ಕ ಅನ್ಯಾಯ ತಪ್ಪುತ್ತದೆ. ಆದರೆ ಮಾಲ್ ಪ್ರಾಕ್ಟೀಸ್ ಅಂತೂ ನೂರಕ್ಕೆ ನಲವತ್ತರಷ್ಟು ಇದ್ದೇ ಇದೆ. ಎಷ್ಟು ಎಫೆಕ್ಟೀವಾಗಿ ಕೆಲಸ ಮಾಡಿದರೂ ಕೂಡಾ ೪೦ ಪರ್ಸೆಂಟ್ ಮಾರ್ಕೆಟಿಂಗ್ ಇನ್‌ಎಫಿಶಿಯನ್ಸಿ ಇದ್ದೇ ಇರುತ್ತದೆ. ಇವತ್ತಿನ ದಿವಸ ಸಹಕಾರ ಸಂಘಗಳಲ್ಲೂ ಕೂಡಾ ಲೋಪದೋಷ ಇದ್ದೇ ಇರುತ್ತದೆ. ಆದರಿಂದಲೇ ಎಲ್ಲಾ ಸಂಘಗಳು ಕೆಟ್ಟವು ಎಂದು ಹೇಳುವುದಕ್ಕಾಗುವುದಿಲ್ಲ. ಒಂದು ಸಂಘ ಇವತ್ತು ಡಿಫಾಲ್ಟ್ ಆದರೆ ಅದರ ಬಗ್ಗೆ ಎಲ್ಲಾ ಮಾತನಾಡುತ್ತಾರೆ. ನಾನು ಹಿಂದೆ ಕೂಡಾ ಹೇಳಿದ್ದೇನೆ. ಒಬ್ಬನಿಗೆ ೩ ಕೋಟಿ ರೂಪಾಯಿ ಇನ್ನೊಬ್ಬನಿಗೆ ೪ ಕೋಟಿ ರೂಪಾಯಿ ಬಡಿ ಇಲ್ಲದ ಸಾಲವನ್ನು ಕೊಟ್ಟರು. ಇದೇ ಹಣವನ್ನು ನಮ್ಮ ಜಾಲಪ್ಪನವರಿಗೆ ಕೊಟ್ಟಿದ್ದರೆ ಏನಾಗುತ್ತಿತ್ತು ? ಇವತ್ತು ಸಹಕಾರ ಸಂಘದ ಲೆಕ್ಕ ಪುಸ್ತಕದಲ್ಲಿ ಇರುತ್ತದೆ. ಇಲ್ಲಿ ಡಿಫಾಲ್ಟ್ ಆದರ ಗೊತ್ತಾಗುತ್ತದೆ. ಆದರೆ ಒಬ್ಬ ವ್ಯಕ್ತಿಗೆ ಕೊಟ್ಟ ಹಣ ಹೋದರೆ ಅದು ಹೊರಗೆ ಬರುವುದಿಲ್ಲ. ನಾನೂ ಕೂಡಾ ಸಹಕಾರಿ ಸಂಸ್ಥೆಗಳು ಡಿಫಾಲ್ಟ್ ಆದರೆ ಅದನ್ನು ಸಪೋರ್ಟ್ ಮಾಡಿ ಎಂದು ಹೇಳುವುದಿಲ್ಲ. ನಾನೂ ಕೂಡಾ ಸಣ್ಣವನಿದ್ದಾಗ ವಿ. ಎಲ್ ಮೆಹತಾ ಅವರ ಹತ್ತಿರ ಹಾಗೂ ಮುರಾರಜಿ ದೇಸಾಯಿಯವರ ಹತ್ತಿರ ಹೋಗಿದೆ. ಆಗಿನ ಕಾಲದಲ್ಲಿ ನಮ್ಮಲ್ಲಿದ್ದ ಛೇರ್ಮನ್ ಸುಮಾರು ೭-೮ ಲಕ್ಷ ರೂಪಾಯಿಗಳವರೆಗೆ ಬಡ್ಡಿ ಇಲ್ಲದ ಸಾಲವನ್ನು ತೆಗೆದುಕೊಂಡಿದ್ದ. ಆತ ಒಬ್ಬ ಹೊಲ್‌ಸೇಲ್ ಕ್ಲಾತ್ ಮರ್ಚೆಂಟ್ ಇದ್ದ. ಆ ಬಗ್ಗೆ ನಾವು ಮುರಾರಜಿ ದೇಸಾಯಿಯವರಿಗೆ ಹೇಳಿದಾಗ ಕೊ-ಆಪರೇಷನ್ ಮಿನಿಸ್ಟರನ್ನು ಮೀಟ್ ಮಾಡು ಎಂದು ಹೇಳಿದರು. ನಾನು ಕೊ-ಆಪರೇಷನ್ ಮಿನಿಸ್ಟರ್ ಹತ್ತಿರ ಹೋಗಿ ವಿಷಯವನ್ನು ಹೇಳಿದೆ. ನಿಜವಾಗಿಯೂ ಸಹಕಾರಿ ಚಳುವಳಿ ಬಗ್ಗೆ ಕಳಕಳಿ ಇದ್ದ ಜನ ಅವರು. ನಾನು ಅವರಿಗೆ ವಿವರವನ್ನು ಹೇಳಿದಮೇಲೆ ಅವರು said, we will see that lhe hand is changed, but we will not prosecute him. ಎಂದು ಹೇಳಿದರು. ಹಾಗೆ ಹೇಳಿದರೂ ಸಹಾ ರಿಜಿಸ್ಟ್ರಾರ್ ಅವರನ್ನು ತನಿಖೆಗೆ ಕಳುಹಿಸಿಕೊಟ್ಟರು. ಸೊಲ್ಲಾಪುರಕ್ಕೆ ಅವರೆಲ್ಲಾ ಬಂದು ನಮ್ಮನ್ನು ಕರೆಸಿದರು. ಆಗ ನಮ್ಮನ್ನು ಕುರಿತು ನಿಮ್ಮನ್ನು ಜೈಲಿಗೆ ಹಾಕಬೇಕು ಎಂದು ಹೇಳಿದರು. ಆಮೇಲೆ ಏನೋ ಆಯಿತು. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಅಂತಹವರಿಗೆ ಪ್ರೊಟಕ್ಷನ್ ಕೊಡದೇ ಇದ್ದರೂ ಕೂಡಾ ಅವರ ಬಗ್ಗೆ ಅಂಜಿಕೆ ಇರುತ್ತಿತ್ತು. ಖದೀಮರನ್ನು ಮಟ್ಟ ಹಾಕುತ್ತಿದ್ದರು. ಅಧಿಕಾರಿಗಳಲ್ಲಿ ಎಲ್ಲರೂ ಖದೀಮರು ಎನ್ನುವ ಭಾವನೆ ಹೋಗಬೇಕು. ಇಲ್ಲದಿದ್ದರೆ ಅಧಿಕಾರೇತರ ಬಗ್ಗೆ ತಪ್ಪು ಆಪಾದನೆ ಮಾಡಿದ ಹಾಗೆ ಆಗುತ್ತದೆ. ಉದಾಹರಣೆಗೆ ಚೌಗಳೆ ಎನ್ನುವ ಅಧಿಕಾರಿ ಇದ್ದರು. ಈಗ ಅವರನ್ನು ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕ್‌ಗೆ ನೇಮಿಸಿದ್ದೀರಿ. ಇದಕ್ಕಿಂತಾ ಮೊದಲು ಶುಗರ್ ಫ್ಯಾಕ್ಟರಿಗೆ ನೇಮಿಸಿದ್ದಿರಿ. ಹಿಂದೆ ಧಾರವಾಡ ಜಿಲ್ಲಾ ಕೊ-ಆಪರೇಟಿವ್ ಆಯಿಲ್ ಸೀಡ್‌ಗೆ ಜಾಯಿಂಟ್ ರಿಜಿಸ್ಟ್ರಾರರ್ ಆಗಿ ನೇಮಿಸಲಾಗಿತ್ತು. There was an impression that if he is a non-official it is to be presumed that he is honest and if he is an official it is to be presumed that he is honest in the co-operative movement. ಆ ದೃಷ್ಟಿಯಿಂದ ನೇಮಿಸಿದರು. ಇಂತಹವರದ್ದು ನೇಮಿಸಿದ ಮೇಲೆ ಎಷ್ಟು ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಜಾಲಪ್ಪನವರೇ ? ಇವರು ಏನು ಮಾಡಿದರು ಗೊತ್ತೇ ? ಅಮೇರಿಕಾ, ಕೆನಡಾ, ಸ್ವಿಡ್ಜರ್‌ಲೆಂಡ್‌ನಿಂದ ಉತ್ತಮವಾದ ಲ್ಯಾಬೋರೇಟರಿ ಎಕ್ವಿಪ್‌ಮೆಂಟ್ಸ್‌ನ್ನು ಆಗ ೨೦ ಸಾವಿರ ರೂಪಾಯಿಗೆ ತಂದಿದ್ದರು. ಅವುಗಳ ಬೆಲೆ ಈಗ ೨ ರಿಂದ ೩ ಲಕ್ಷ ರೂ. ಆಗುತ್ತದೆ. ಅದು ಬಂದ್ ಆದಾಗ ಒಂದೊಂದು ಎಕ್ವಿಪ್‌ಮೆಂಟ್ಸ್‌ನ್ನು ೧೧ರೂ. ೧೨ರೂ.ಗಳಿಗೆ ಮಾರಾಟ ಮಾಡಿದರು. ಮಾರಾಟ ಎಂದು ಹೇಳಿ ಅವನ್ನೆಲ್ಲಾ ಎಲ್ಲಿಗೆ ಎತ್ತಿಹಾಕಿದರೋ ಗೊತ್ತಿಲ್ಲ. ಇದನ್ನೆಲ್ಲಾ ಮಾಡಿದ್ದಾರೆ. ಇದಕ್ಕೆ ಬೋರ್ಡ್ ಸ್ಯಾಂಕ್ಷನ್ ಇಲ್ಲ. ಜನರಲ್ ಬಾಡಿ ಮೀಟಿಂಗ್‌ನಲ್ಲಿ ಇದಕ್ಕೆ ಸ್ಯಾಂಕ್ಷನ್ ಇಲ್ಲ. ಇಲಾಖೆಯ ರಿಜಿಸ್ಟ್ರಾರರ್‌ವರ ಸ್ಯಾಂಕ್ಷನ್ ಇಲ್ಲ. ಇಷ್ಟು ಬಹಿರಂಗವಾಗಿ ಇಂತಹ ಲೂಟಿ ಆಗಿದ್ದರೂ ಕೂಡಾ ಇಂತಹ ದರೋಡೆಕೋರರನ್ನು ಯಾಕೆ ಇಟ್ಟುಕೊಂಡಿದ್ದೀರಿ ? ಇಂತಹವರನ್ನು ಅಧಿಕಾರದಲ್ಲಿ ಮುಂದುವರಿಸುವುದು ಏಕೆ? ಇದರಿಂದ

ಉಳಿದವರಿಗೂ ಕೆಟ್ಟ ಹೆಸರು ಬರುವುದಿಲ್ಲವೇ ? ಈ ಬಗ್ಗೆ ಎನ್‌ಕ್ವಯರಿ ಆರ್ಡರ್ ಮಾಡಿ ೧೦ ವರ್ಷ ಆಯಿತು. ಎನ್‌ಕ್ವಯರಿ ಮಾಡಿ ಅವರನ್ನು ಮನೆಗೆ ಕಳುಹಿಸಿದ್ದೀರಾ ? ಸಂಘದ ಹಿತದೃಷ್ಟಿಯಿಂದ ನಾವು ಹೇಳಿದಾಗ ಇಂತಹ ಎಡರುತೊಡರು ಇರತಕ್ಕ ಜನ ಸ್ಪಷ್ಟವಾಗಿ ಲೂಟಿ ಮಾಡಿದ್ದರೂ ಕೂಡಾ ಇನ್ನೂ ಮುಂದುವರೆಸಿ ಅವರಿಗೆ ಪ್ರಮೋಷನ್ ಕೊಡುವುದೆಂದರೇನು ? ಅವರ ಮೇಲೆ ತಕರಾರು ಬಂದ ಮೇಲೆ ಪ್ರಮೋಷನ್ ಆಗಿದೆ.

ಇದು ತಮಗೆ ಗೊತ್ತಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಅವರಿಗೆ ಪ್ರೊಮೋಷನ್ ಆಗಿದೆ. ಅವರಿಗೆ ಏತಕ್ಕೆ ಪ್ರೊಮೋಷನ್ ಕೊಡಬೇಕಾಗಿತ್ತು? ನಾನು ಈ ಮಾತನ್ನು ಹೇಳುವಾಗ, ಇದಕ್ಕೆ ಕಾರಣ ರಾಮಕೃಷ್ಣ ಹೆಗಡೆಯವರು ಮಂತ್ರಿಮಂಡಲ, ಅಥವಾ ಮಾನ್ಯ ಜಾಲಪ್ಪನವರ ಮಂತ್ರಿಮಂಡಲ ಎಂದು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲರೂ ಇದರಲ್ಲಿ ಸಮಾನ ಹೊಣೆಗಾರರು ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಇದನ್ನು ಲೋಕಾಯುಕ್ತಕ್ಕೆ ಕಳುಹಿಸಿ ಎಂದು ಸರ್ಕಾರದವರು ಹೇಳಬಹುದು. ಇದನ್ನು ನಾನು ಲೋಕಾಯುಕ್ತಕ್ಕೆ ಕಳುಹಿಸುವುದಕ್ಕಾಗಿ ನಾನು ಇಲ್ಲಿ ಬಂದಿದ್ದೇನೆಯೇ? ಕೇವಲ ಇವರನ್ನು ಲೋಕಾಯುಕ್ತಕ್ಕೆ ಕಳುಹಿಸುವುದು ಅಲ್ಲ, ಇಂಥ ಖದೀಮರು ಮಾಡತಕ್ಕ ಕೆಟ್ಟ ಕೆಲಸವನ್ನೆಲ್ಲಾ ಬಯಲಿಗೆಳೆದು ಜೈಲಿಗೆ ಹಾಕಿಸಬೇಕು. ಇಂಥ ಕೆಟ್ಟ ಜನಗಳು ಇರುವುದರಿಂದ ಒಳ್ಳೆಯ ಜನರು ಯಾರಿದ್ದಾರೆ, ಅವರಿಗೆ ಒಳ್ಳೆಯ ಹೆಸರು ಬರುವುದಿಲ್ಲ. ಈಗ ಹಿಂದುಳಿದವರ್ಗದವರ, ಅಲ್ಪಸಂಖ್ಯಾತರ ಹಿತವನ್ನು ರಕ್ಷಣೆ ಮಾಡತಕ್ಕ ಮಂತ್ರಿಗಳು ಇದ್ದಾರೆ, ಆದರೆ ನಾನು ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ, ಏನೆಂದರೆ ಇದುವರೆಗೆ ಎಷ್ಟು ಜನ ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಇವರು ಐ.ಎ.ಎಸ್. ಹುದ್ದೆಗಳನ್ನು ಕೊಟ್ಟಿದ್ದಾರೆ? ನೀವು ಕೊಟ್ಟಿಲ್ಲವೆಂದು ನಮಗೆ ಹೇಳಬಹುದು. ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ನೀವು ಎಷ್ಟು ಜನರಿಗೆ ಕೊಟ್ಟಿದ್ದೀರಿ? ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ, ಷೆಡ್ಯೂಲ್ಡ್ ಕ್ಯಾಸ್ಟ್ ನವರಿಗೆ ಐ.ಎ.ಎಸ್. ಹುದ್ದೆಗಳನ್ನು ಕೊಡುವುದಕ್ಕೆ ನಿಮಗೆ ಕೈ ಹಿಂದೆ ಬೀಳುತ್ತದೆ. ನಿಮಗೆ ಮನಸ್ಸು ಬರುವುದಿಲ್ಲ. ಇದು ನಿಮಗೆ ನ್ಯಾಯವೇ? ಇದು ನಿಮಗೆ ಧರ್ಮವೇ? ಅವರಿಗೆ ನೀವು ಐ.ಎ.ಎಸ್. ಹುದ್ದೆಗಳನ್ನು ಕೊಟ್ಟಿದ್ದರೆ ಅವರೂ ಕೂಡ ಸಮಾಜದಲ್ಲಿ ಮೇಲೆ ಬರುವುದಕ್ಕೆ ಅನುಕೂಲವಾಗುತ್ತಿತ್ತು. ನೀವು ಮಲ್ಲಪ್ಪ, ಕಲ್ಲಪ್ಪ, ರಾಮಪ್ಪ ಎಂದು ಯಾರನ್ನು ಬೇಕಾದರೂ ಐ.ಎ.ಎಸ್. ಮಾಡಿ, ಆದರೆ ನಿಮ್ಮ ಕಾಲದಲ್ಲಿ ಈ ಹರಿಜನರಿಗೂ ಈ ಸ್ಥಾನಗಳನ್ನು ಕೊಟ್ಟಿದ್ದಿದ್ದರೆ ಅವರೂ ಕೂಡ ಮೇಲೆ ಬರುವುದಕ್ಕೆ ಅನುಕೂಲವಾಗುತ್ತಿತ್ತು. ಇದು ನಿಮ್ಮ ಮೇಲೆ ಇರತಕ್ಕ ಗುರುತರವಾದ ಹೊಣೆ.

ಇನ್ನು ಮಾರ್ಕೆಟಿಂಗ್ ಸೊಸೈಟಿಯ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳುತ್ತೇನೆ. ಈ ಸೊಸೈಟಿಗಳಲ್ಲಿ ಸಾಲವನ್ನು ಕೊಡಬೇಕಾಗುತ್ತದೆ. ಇವತ್ತು ಈ ಸಾಲದ ಯೋಜನೆ ಯಾವ ರೀತಿ ಇದೆ ಎಂದರೆ, ನಾನು ಸಾಲವನ್ನು ಕೋರಿ ಒಂದು ಅರ್ಜಿಯನ್ನು ಹಾಕಿದರೆ ಆ ಅರ್ಜಿ ಎಲ್ಲಾ ಕಡೆ ಸುತ್ತಾಡಿಕೊಂಡು ಮಂಜೂರಾಗಿ ನನಗೆ ಆ ಸಾಲ ಸಿಕ್ಕಬೇಕಾದರೆ ಸುಮಾರು ೨-೩ ತಿಂಗಳಾಗುತ್ತದೆ. ಇದು ಸರಿಯಲ್ಲ. ನೀವು ಬೊಂಬಾಯಿಗೆ ಹೋಗಿ ನೋಡಿ. ಅಲ್ಲಿ ಯಾರೇ ಒಬ್ಬ ವ್ಯಕ್ತಿ ತನಗೆ ಸಾಲ ಬೇಕೆಂದು ಒಂದು ಅರ್ಜಿಯನ್ನು ಮಾರ್ಕೆಟಿಂಗ್ ಸೊಸೈಟಿಗೆ ಹಾಕಿದರೆ ಕೇವಲ ೩ ದಿವಸದಲ್ಲೇ ಆ ಸಾಲ ಮಂಜೂರಾಗಿ ಬಂದು, ಅದನ್ನು ಡ್ರಾ ಮಾಡುತ್ತಾನೆ. ನಾನು ಇದನ್ನು ಹೋಗಿ ನೋಡಿಕೊಂಡು ಬಂದಿದ್ದೇನೆ. ಆ ರಾಜ್ಯದ ಮಾಹಿತಿಯನ್ನು ನೀವೂ ತೆಗೆದುಕೊಂಡು, ಅಲ್ಲಿ ಯಾವರೀತಿ ವ್ಯವಸ್ಥೆ ಇದೆ ಎಂಬುದನ್ನು ತಿಳಿದುಕೊಂಡು ಅದೇರೀತಿ ಇಲ್ಲೂ ಏತಕ್ಕೆ ವ್ಯವಸ್ಥೆ ಮಾಡಬಾರದು? ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇನ್ನು ಒಂದು ತಿಂಗಳು ಹೋದರೆ ನಮ್ಮಲ್ಲಿ ಹತ್ತಿಯ ಸೀಸನ್ ಮುಗಿದು ಹೋಗುತ್ತದೆ. ನನಗೆ ಅನಂತರ ಸಾಲ ಮಂಜೂರಾಗಿ ಬಂದರೆ ಅದನ್ನು ನಾನು ಏನು ಮಾಡಬೇಕು? ಯಾವುದಕ್ಕೆ ಉಪಯೋಗ ಮಾಡಿಕೊಳ್ಳಬೇಕು? ಕೇಂದ್ರದಿಂದ ಎನ್.ಸಿ.ಡಿ.ಸಿ ಯವರು ಅನೇಕರೀತಿಯ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ. ಇದರ ವ್ಯವಹಾರ ದೊಡ್ಡದಿರುವುದರಿಂದ ಈ ಎನ್.ಸಿ.ಡಿ.ಸಿ.ಯ ಸಲುವಾಗಿಯೇ ಒಂದು ಪ್ರತ್ಯೇಕವಾದ ಸೆಲ್‌ನ್ನು ಮಾಡಿ ಎಂದು ನಾನು ಕಳೆದಸಾರಿಯೇ ಹೇಳಿದ್ದೇನೆ. ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಒಬ್ಬ ಮಾಡತಕ್ಕ ಕೆಲಸಕ್ಕೆ ಹತ್ತು ಜನರನ್ನು ಹಾಕುತ್ತೀರಿ. ಇದಕ್ಕೆ ಬದಲಾಗಿ ಎನ್.ಸಿ.ಡಿ.ಸಿ.ಯಲ್ಲೂ ಕೆಲಸಮಾಡಲು ಈ ಜನರನ್ನು ಹಚ್ಚಿ. ನಮ್ಮ ದೇಶದಲ್ಲಿ ಪುರಸ್ಕಾರವನ್ನು ಪಡೆದ ಬಹಳಷ್ಟು ಸಂಸ್ಥೆಗಳು ಇವೆ. ಇವರು ಅಲ್ಲಿಗೂ ಹೋಗಿ ಕೆಲಸಮಾಡಲಿ.

ಸ್ವಾಮಿ, ಮಾತೆತ್ತಿದರೆ ಅಧಿಕಾರ ವಿಕೇಂದ್ರೀಕರಣವನ್ನು ಮಾಡಿದ್ದೇವೆ ಎಂದು ಇವರು ಹೇಳಿಕೊಳ್ಳುತ್ತಾರೆ. ಇವರು ಅದೇನು ಅಧಿಕಾರ ವಿಕೇಂದ್ರೀಕರಣ ಮಾಡಿದ್ದಾರೋ ಗೊತ್ತಿಲ್ಲ. ಏಕೆಂದರೆ, ಜಾಯಿಂಟ್ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್, ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೆ ಸಾಕಷ್ಟು ಅಧಿಕಾರವನ್ನು ಕೊಟ್ಟಿದ್ದೇವೆಂದು ಇವರು ಹೇಳಿಕೊಳ್ಳುತ್ತಾರೆ. ಆದರೆ ಅವರಿಗೆ ಯಾವ ಅಧಿಕಾರವೂ ಇಲ್ಲ. ಇಂಥ ಒಂದು ಪರಿಸ್ಥಿತಿ ಇದೆ. ಇದನ್ನು ನೀವು ಅರ್ಥಮಾಡಿಕೊಳ್ಳಬೇಕು. ಇದುವರೆಗೆ ನಾನು ಹೇಳಿರತಕ್ಕ ಸಲಹೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನೀವು ಒಬ್ಬೊಬ್ಬರಿಗೆ ಒಂದೊಂದು ಕೆಲಸವನ್ನು ವಹಿಸಿ ಕೊಡಿ. ನಾನು ತಮಗೆ ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಾನು ಒಂದು ಕಾರನ್ನು ಖರೀದಿಮಾಡಿ ಅದಕ್ಕೆ ಬೇಕಾದ ಸಾಲವನ್ನು ಕೋರಿ ನಾನು ಒಂದು ಅರ್ಜಿಯನ್ನು ಕೊಟ್ಟರೆ ಆ ಅರ್ಜಿ ಎಲ್ಲಾಕಡೆಯಲ್ಲೂ ಸುತ್ತಾಡಿಕೊಂಡು ಕೊನೆಗೆ ಸಾಲವನ್ನು ಕೊಡಬಹುದೆಂದು ಮಂಜೂರಾಗಿ ಬರುವ ಹೊತ್ತಿಗೆ ಎರಡುವರ್ಷಗಳಾಗಿರುತ್ತದೆ. ಅಷ್ಟು ಹೊತ್ತಿಗೆ ನಾನು ಆ ಕಾರನ್ನೇ ಮಾರಾಟ ಮಾಡಿರುತ್ತೇನೆ. ಅಂದರೆ ಆಡಳಿತದಲ್ಲಿ ಹೊಣೆಗಾರಿಕೆ, ಜವಾಬ್ದಾರಿ ಇಲ್ಲದಿರತಕ್ಕ ಅಧಿಕಾರಿಗಳು ಇರುವುದರಿಂದ ಇಂಥ ಪರಿಸ್ಥಿತಿ ಬರುವುದಕ್ಕೆ ಅವಕಾಶವಾಗಿದೆ. ಇವತ್ತು ಸಣ್ಣ ಸಣ್ಣ ವಿಷಯಗಳಲ್ಲೂ ಕೂಡ ನಾವು ತಪ್ಪುಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದಿಂದ ಬರತಕ್ಕ ಹಣವನ್ನು ತೆಗೆದುಕೊಂಡು ಮಾರ್ಕೆಟಿಂಗ್ ಸೊಸೈಟಿಗಳನ್ನು ಬಲಯುತವಾಗಿ ಮಾಡಬೇಕು. ಕೇಂದ್ರದಿಂದ ಬರತಕ್ಕ ಹಣವನ್ನು ಇಂಥಿಂಥ ಕಡೆಗಳಿಗೇ ಕೊಡಿ ಎಂದು ನಾನು ಹೇಳುವುದಿಲ್ಲ. ನೀವು ಅಧಿಕಾರದಲ್ಲಿರುವಾಗ ಈ ಮಾರ್ಕೆಟಿಂಗ್ ಸೊಸೈಟಿಗಳು ಬಲಯುತವಾಗಿ ಬೆಳೆಯದಿದ್ದರೆ ಬೇರೆ ಸಂದರ್ಭಗಳಲ್ಲಿ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಮಂಡ್ಯದಲ್ಲಿಯೂ ಕೂಡ ಸರಿಯಾದ ಮಾರ್ಕೆಟಿಂಗ್ ಸೊಸೈಟಿ ಇಲ್ಲ. ನಾನು ಮಂಡ್ಯಕ್ಕೂ ಕೂಡ ಹೋಗಿ ನೋಡಿಕೊಂಡು ಬಂದಿದ್ದೇನೆ. ನೀವು ಮಾರ್ಕೆಟಿಂಗ್ ಸೊಸೈಟಿಗಳನ್ನು ಮಾಡಿದರೂಕೂಡ ನಮಗೆ ಒಂದು ಕುತ್ತು ಇದೆ. ಸಹಕಾರ ಸಂಘಗಳಲ್ಲಿ ಮಾಲನ್ನು ಕೊಂಡುಕೊಳ್ಳುವಾಗ ಅಲ್ಲಿ ಮೋಸ ನಡೆಯುತ್ತದೆ. ಉತ್ತಮ ಮಾಲಿಗೆ ಒಳ್ಳೆಯ ಧಾರಣೆಯನ್ನು ಕೊಡುವುದಕ್ಕೆ ಅವರು ಒಪ್ಪುವುದಿಲ್ಲ, ಕಡಿಮೆ ಧಾರಣೆಯನ್ನು ತೆಗೆದುಕೊಳ್ಳಲು ರೈತರು ಒಪ್ಪುವುದಿಲ್ಲ. ಕ್ವಾಲಿಟಿ ಹತ್ತಿಯನ್ನು ಪರ್ಚೇಸಿಂಗ್ ಇನ್‌ಸ್ಟಿಟ್ಯೂಷನ್ ಮೂಲಕ ಖರೀದಿ ಮಾಡಿದರೆ, ಅವರು ನಮ್ಮ ಹತ್ತಿರ ಬಂದು ತೆಗೆದುಕೊಳ್ಳುತ್ತಾರೆ. ರೈತರಿಗೆ ಹೆಚ್ಚಿಗೆ ಹಣ ಸಿಕ್ಕುತ್ತದೆ. ನಾನೂ ಮತ್ತು ಮಾನ್ಯ ಎಂ. ಆರ್. ಪಾಟೀಲ್‌ರವರೂ ಹಾಗೂ ಈ ಕಾಟನ್ ಪರ್ಚೇಸ್ ಕಮಿಟಿಯವರೂ ಸೇರಿ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಆದರೆ ಈ ಮಾರ್ಕೆಟಿಂಗ್ ಸೊಸೈಟಿ ಸಾಲ ಸಿಕ್ಕುವುದಿಲ್ಲವೆಂದು ರಿಸರ್ವ್ ಬ್ಯಾಂಕಿನವರು ಹೇಳುತ್ತಿದ್ದಾರೆ. ಏಕೆಂದರೆ ಇದು ಪ್ಲಾನ್‌ನಲ್ಲಿ ಇಲ್ಲ. ಇದು ಸ್ಟೇಟ್‌ವೈಸ್ ಯೋಜನೆ. ಇದಕ್ಕೆ ನೀವಾದರೂ ಸಾಲವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೇ? ಇದನ್ನು ನೀವು ಮಾಡುವುದಿಲ್ಲವೆಂದು ಇದುವರೆಗೂ ಈ ವಿಚಾರವನ್ನು ನಿಮ್ಮ ನಜರಿಗೆ ತಂದಿರಲಿಲ್ಲ. ಈಗಲಾದರೂ ಇದಕ್ಕೆ ಹಣವನ್ನೊದಗಿಸಲು ನೀವು ಕೆಲವು ಯೋಜನೆಗಳನ್ನು ರೂಪಿಸಿಕೊಳ್ಳಬೇಕು. ನಮ್ಮ ಭಾಗದ ಹತ್ತಿ ಬಹಳ ಉತ್ತಮವಾದ ಹತ್ತಿ. ಇದು ತುಂಬಾ ಬೆಲೆಬಾಳುತ್ತದೆಂದು ಮಾರ್ಕೆಟಿಂಗ್ ಮತ್ತು ಪ್ರೋಸೆಸಿಂಗ್‌ಗೆ ಸಂಬಂಧಪಟ್ಟ ಮಂತ್ರಿಯವರು ಹೇಳಿದರು. ಅದು ನಿಜ. ಹಿಂದೆ ೩೦ ಲಕ್ಷ ಬೇಲ್ ಹತ್ತಿಯನ್ನು ಬೆಳೆಯುತ್ತಿದ್ದುದು, ಇವತ್ತು ಅದು ೮೨ ಲಕ್ಷ ಬೇಲ್‌ಗೆ ಹೋಗಿದೆ. ನಮ್ಮ ಕರ್ನಾಟಕದಲ್ಲಿ ೩-೪ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹತ್ತಿಯನ್ನು ಬೆಳೆಯುತ್ತಿದ್ದೇವೆ. ಟೆಕ್ಸ್‌ಟೈಲ್ ಮಿಲ್‌ಗಳನ್ನು ಹೊಸದಾಗಿ ತೆರೆಯುತ್ತಿದ್ದೇವೆಂದು ತಾವು ಹೇಳಿದ್ದೀರಿ. ಆದರೆ ಇದುವರೆಗೆ ನೀವು ಎಷ್ಟು ಟೆಕ್ಸ್‌ಟೈಲ್ ಮಿಲ್‌ಗಳನ್ನು ತೆರೆದಿದ್ದೀರಿ? ಅವುಗಳ ಪೈಕಿ ಎಷ್ಟು ಮಿಲ್‌ಗಳು ಅಧಿಕೃತವಾಗಿ ನಡೆಯುತ್ತಿವೆ? ಅವುಗಳಿಗೆ ಮಾರ್ಕೆಟ್ ಏನಾದರೂ ಇದೆಯೇ? ಮಾರ್ಕೆಟ್ ಇಲ್ಲದಿದ್ದರೆ ನಿಮ್ಮ ಅಧಿಕಾರಿಗಳಿಗೆ ಹೇಳಿ ಕಲ್ಕತ್ತಾ, ಬೊಂಬಾಯಿಗಳಲ್ಲಿ ಡಿಪೋಗಳನ್ನು ತೆರೆದು ಮಾರಾಟ ಮಾಡುವಂತೆ ಅವರಿಗೆ ತಿಳಿಸಿ. ಆದರೆ ಇದನ್ನು ನೀವು ಮಾಡುವುದಿಲ್ಲ. ನಮ್ಮಲ್ಲಿ ಹತ್ತಿ ಧಾರಣೆ ಹೆಚ್ಚಿಗೆ ಇದೆ, ನೀವು ಇದನ್ನು ತೆಗೆದುಕೊಳ್ಳಿ ಎಂದು ಸಿ.ಸಿ.ಐ.ನವರನ್ನು ಕೇಳಿದರೆ, ನಮಗೆ ಬೇಡ, ನಾವು ಕೊಂಡುಕೊಳ್ಳುವುದಿಲ್ಲವೆಂದು ಅವರು ಹೇಳಿದ್ದಾರೆ.

೪-೩೦ ಪಿ. ಎಂ.

ಆಮೇಲೆ ಅಗ್ರಿಕಲ್ಚರಲ್ ಸೆಕ್ರೆಟರಿ ಶ್ರೀ ಸುಬ್ರಮಣ್ಯಂರವರಿಗೆ ಹೇಳಿದ ಮೇಲೆ ಅವರು ಎಲ್ಲಿ ಸಹಕಾರಿ ಮಿಲ್ಲುಗಳಿವೆ ಅಲ್ಲಿ ದಯವಿಟ್ಟು ಹಣ ಬಂದಾಗ ಪಡೆದುಕೊಳ್ಳಬೇಕೆಂದು ರೈತರು ಹತ್ತಿಯನ್ನು ಅಲ್ಲಿ

ತಂದು ಇಟ್ಟು ಹಣ ಬಂದಾಗ ಪಡೆದುಕೊಳ್ಳಬೇಕೆಂದು ಹೇಳಿದ್ದಾರೆ. ಈಗ ನಾನು ಮಾಡತಕ್ಕಂಥ ಕೆಲಸವನ್ನು ನಿಮ್ಮ ಡಿಪಾರ್ಟ್‌ಮೆಂಟಿನವರು ಮಾಡಲಿಕ್ಕೆ ಆಗುವುದಿಲ್ಲವೇ? ಇದಕ್ಕಾಗಿಯೇ ಒಬ್ಬರನ್ನು ನೇಮಿಸಿಬಿಟ್ಟರೆ ಜನರ ಕಲ್ಯಾಣವಾಗುವುದಿಲ್ಲವೇ? ಅವರು ಮಾರ್ಕೆಟ್ ಎಲ್ಲಾ ಸ್ಟಡಿ ಮಾಡಿಕೊಂಡು, ಇಂಥಿಂಥ ಕಡೆ ಇಂಥಿಂಥ ನೂಲು ಹೋಗುತ್ತದೆ, ಅದನ್ನು ಮಾರಾಟ ಮಾಡಿರಿ ಎಂದರೆ ಎಷ್ಟು ಕಲ್ಯಾಣ ವಾಗುತ್ತದೆ? ಮತ್ತೆ ನಮಗೆ ಈಗಿರತಕ್ಕಂಥ ಮಿತಿಗಳು ಸಾಕು, ಈಗ ೮-೧೦ ಮಿಲ್‌ಗಳು ಇವೆ. ಇವು ಗಳ ಸಲುವಾಗಿಯಾದರೂ ಏನಾದರೂ ಯೋಜನೆಯನ್ನು ಹಾಕಿದ್ದೀರಾ? ಬಡ್ಜೆಟ್‌ನೊಳಗೆ ಈಗ ೨-೩ ಮಿಲ್‌ಗಳಿಗೆ ಹಣ ಸಹಾಯ ಕೊಟ್ಟಿದ್ದೀರಿ. ಅದು ನಾವಿದ್ದಾಗಲೇ ಸ್ಯಾಂಕ್ಷನ್ ಆದುದು ಎಂದು ಹೇಳಲೂ ಬಹುದು. ಆದರೆ ನೀವು ಏತಕ್ಕೆ ಆ ಅಮೌಂಟನ್ನು ಕೂಡಲೇ ರಿಲೀಸ್ ಮಾಡಿ ಮುಂದೆ ಬಳಸಿಕೊಳ್ಳಲಿಲ್ಲ? ನಿಮ್ಮ ಟ್ರಜರಿಯೊಳಗಿದ್ದ ಹಣ ಅಪೆಕ್ಸ್ ಬ್ಯಾಂಕಿಗೆ ಹೋಯಿತೇ ವಿನ: ಯಾವ ಪ್ರಗತಿ ಯಾಗಲಿಲ್ಲ. ಎರಡು ವರ್ಷದಿಂದ ಮೂರು ನಾಲ್ಕು ಮಿಲ್‌ಗಳಿಗೆ ೧೨-೧೨ ಸಾವಿರ ಹಣವನ್ನು ಹಂಚಿ ಕೊಟ್ಟಿದ್ದರೆ. ನಿಜವಾಗಿಯೂ ಅವರು ಕಾರ್ಯಾರಂಭ ಮಾಡುತ್ತಿದ್ದರು. ಅದರಲ್ಲಿ ಬರತಕ್ಕಂಥ ಉತ್ಪಾದನೆಯಿಂದ ಹೆಚ್ಚು ಹಣವನ್ನು ಬೇರೆಯವರಿಗೆ ಕೊಡಲಿಕ್ಕೆ ಸಾಧ್ಯವಾಗುತ್ತಿತ್ತು. ಸುಮಾರು ಒಂದೊಂದು ಬೇಲಿಗೆ ನೀವು ೨೫ ರೂಪಾಯಿ ಟ್ಯಾಕ್ಸ್ ಹಾಕಿದ್ದರೂ ಸಹಿತ ಆ ಹಣವನ್ನು ಕೊಡಲಿಕ್ಕೆ ರೈತರು ತಯಾರಾಗಿದ್ದರು, ಯಾವ ರೈತರೂ ವಿರೋಧ ಮಾಡುತ್ತಿರಲಿಲ್ಲ. ಆದರೆ ನೀವು ಆ ರೀತಿ ಯೋಜನೆಯನ್ನು ಮಾಡಲು ಪ್ರಯತ್ನ ಮಾಡಲಿಲ್ಲ. ಅದನ್ನು ಇನ್ನಾದರೂ ಮಾಡಿ. ಈವತ್ತು ಟೆಕ್ಸ್‌ಟೈಲ್ ಮಿಲ್‌ಗಳೇ ಆಗಲಿ ಮತ್ತಿತರ ಮಿಲ್‌ಗಳಿಗೆ ಆಗಲಿ, ಪ್ರಾರಂಭ ಮಾಡುವಾಗ ಅವು ಮುಂದು ವರಿಯುವಾಗ ಅವುಗಳಿಗೆ ಇರುವಂಥ ಡೆಮಾಕ್ರಸಿ ನಾರ್ಮ್ಸ್‌ಗಳು ಕರ್‌ಟೈಲ್ ಆಗಿವೆ. ಅಲ್ಲಿರತಕ್ಕಂಥ ವರೇನು ಅಯೋಗ್ಯರೆಂದು ತಿಳಿದುಕೊಂಡಿದ್ದೀರಾ? ಏನು ಕರ್‌ಟೈಲ್ ಆಗಿದೆ ಎಂದರೆ, ಎಸ್‌ಎಲ್‌ಸಿ ಎಂದು ಒಂದು ಕಮಿಟಿಯನ್ನು ಮಾಡಿದ್ದೀರಿ. ಆ ಎಸ್‌ಎಲ್‌ಸಿ ಕಮಿಟಿ ಮಾಡಿರುವುದರಿಂದ ನನ್ನ ದೇನು ಅಭ್ಯಂತರವಿಲ್ಲ. ಸೆಕ್ರೆಟರಿ ಇರುತ್ತಾರೆ. ನಿಜವಾಗಿಯೂ ಅಲ್ಲಿ ಉತ್ತಮವಾಗಿ ವಿಚಾರವನ್ನು ಮಾಡತಕ್ಕಂಥ ವ್ಯಕ್ತಿಗಳಾಗಿದ್ದಾರೆ. ಆದರೆ ನಾನು ಕೇಳುತ್ತೇನೆ, ಜವಾಬ್ದಾರಿಯನ್ನು ನೀವು ಏತಕ್ಕೆ ತೆಗೆದುಕೊಂಡಿರಿ? ನಾಳೆ ಅವರ ಪರ ಆದರೆ ನೇರವಾಗಿ ಸರ್ಕಾರವನ್ನು ಆಪಾದನೆ ಗುರಿ ಮಾಡಬೇಕಾಗು ತ್ತದೆ. ಎಸ್‌ಎಲ್‌ಸಿ ಮಾಡುವುದರ ಬದಲಾಗಿ ನೀವೇ ನಿಯಂತ್ರಣವನ್ನು ಇಟ್ಟುಕೊಂಡು ಹಣವನ್ನು ಹೆಚ್ಚಿಗೆ ನೀವೇ ನೀಡಿ. ಈವತ್ತು ಆಲ್ ಇಂಡಿಯಾ ಫೆಡರೇಷನ್‌ರವರು ನಿಗದಿ ಮಾಡುವಂಥಹ ರೇಟನ್ನು ತರಿಸಿಕೊಂಡು ನೀವು ರೇಟ್ ಪ್ರಿಸ್‌ಕ್ರೈಬ್ ಮಾಡಿ. ಈ ಒಂದು ರೇಟ್‌ಗಿಂತ ಹೆಚ್ಚು ರೇಟ್ ಯಾರು ಕೊಡತಕ್ಕಂಥದ್ದು ಇಲ್ಲ ಎನ್ನುವಂತೆ ಮಾಡಿ. ಅವರಿಗೆ ಬೇಕಾದ ಮಾಲುಗಳನ್ನು ಕೊಡಿಸುವು ದಾದರೆ ಸರಿಹೋಗುತ್ತದೆ. ಒಮ್ಮೊಮ್ಮೆ ಒಬ್ಬರಿಗೆ ಒಂದೊಂದು ವರ್ಗ ಇದ್ದರೆ ಹೇಗೆ ಸಾಧ್ಯವಾಗುತ್ತದೆ? ಇದರಿಂದ "ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆದಂತಾಗುತ್ತದೆ." ಒಬ್ಬರಿಗೇನೇ ಕೊಡುವಂತೆ ಮಾಡಿದರೆ ಬಹಳ ಸಂತೋಷವಾಗುತ್ತದೆ, ಈ ದೃಷ್ಟಿಯಿಂದ ನಾವು ಇದರಲ್ಲಿ ಯಾರು ಯಾರು ಬೇರೆ ಬೇರೆ ಕಾರಣಕರ್ತರು ಇದ್ದಾರೆ ಅವರನ್ನು ಸಂಸ್ಥೆಯ ಮ್ಯಾನೇಜ್‌ಮೆಂಟ್ ಡೈರೆಕ್ಟರಾಗಿ ಕಳುಹಿಸಿ. ಏತಕ್ಕೆಂದರೆ ಮ್ಯಾನೇಜ್‌ಮೆಂಟ್ ಡೈರೆಕ್ಟರಾದರೆ ಹೊಣೆ ಬೀಳುತ್ತದೆ. ಕೆಲಸದ ಅನುಭವ ಬರುತ್ತದೆ. ಅಲ್ಲಿರ ತಕ್ಕಂಥ ಕಾರ್ಯಕರ್ತರಿಗೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ವ್ಯವಸ್ಥೆ ಮಾಡಬೇಕು. ಮತ್ತೆ ಶ್ರೀಮಾನ್ ಕೊಲ್ಲೂರ್ ಅವರದೊಂದು ಟೆಕ್ಸ್‌ಟೈಲ್ ಮಿಲ್ ಇದೆ. ಆ ಟೆಕ್ಸ್‌ಟೈಲ್ ಮಿಲ್‌ಗೆ ಏತಕ್ಕೆ ಗ್ರಾಂಟ್ ಕೊಡಲಿಲ್ಲ ೨ ಮಿಲ್ ಸರಿಯಾಗಿದ್ದರೂ ಅದಕ್ಕೆ ಹೆಚ್ಚು ಹಣವನ್ನು ಕೊಡಿಸಿದ್ದರೂ ಸಹ ಹಾಗೂ ೨೮ ಪರ್ಸೆಂಟ್ ಹರಿಜನರಿಗೆ ಪ್ರಾಶಸ್ತ್ಯವನ್ನು ಕೊಟ್ಟಿದ್ದರೂ ಅದಕ್ಕೆ ಗ್ರಾಂಟ್ ಕೊಟ್ಟಿಲ್ಲ, ಹರಿಜನರು ಇರತಕ್ಕಂಥ ಸಂಸ್ಥೆ ಅವರಿಗೆ ಹಣ ಕೊಟ್ಟರೆ, ನಿಮಗೆ ಓಟ್ ಹಾಕಲಿಕ್ಕೆ ಬರುವುದಿಲ್ಲ ಎನ್ನುವ ಕಾರಣಕ್ಕಾಗಿ ಕೊಡಲಿಲ್ಲವೇ? ಏತರಸಲುವಾಗಿ ಕೊಡಲಿಲ್ಲ? ಎಲ್ಲಾ ದೃಷ್ಟಿಯಿಂದಲೂ ಸಮರ್ಪಕವಾಗಿ ಇರುವಾಗ ಹಾಗೂ ಎಲ್ಲರನ್ನು ಸಮಾನತೆಯಿಂದ ನೋಡಬೇಕಾದ ನೀವು ಈಗಲಾದರೂ ಎಲ್ಲ ಸೌಲಭ್ಯಗಳನ್ನು ಅವರಿಗೆ ಕೊಡಿ. ಇದರಿಂದ ಅವರು ಕೆಲಸವನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲವಾಗು ತ್ತದೆ. ಅವರಿಗೆ ಯೋಗ್ಯ ಪುರಸ್ಕಾರ ಕೊಡಿ. ನೀವು ಯಾವು ಯಾವುದೋ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಟ್ಟಿರುತ್ತೀರಿ. ಮಾನ್ಯ ಯಾವಗಲ್‌ರವರು ಒಂದು ಸೊಸೈಟಿಯನ್ನು ಪ್ರಾರಂಭ ಮಾಡಿದ್ದಾರೆ. ಅವರಿಗೆ ಪ್ರೋತ್ಸಾಹ ಕೊಡಲಿ, ಬೇಡವೆಂದು ಹೇಳುವುದಿಲ್ಲ. ನವಲಗುಂದ ಅಣ್ಣಿಗೇರಿಯವರು ಒಂದು ಮಿಲ್ ಮಾಡಿದ್ದಾರೆ, ಅವರಿಗೆ ಪುರಸ್ಕಾರ ಕೊಡಿ. ನಮ್ಮಲ್ಲಿ ಏನಾಗಿದೆ ಎಂದರೆ, ಕೂಪ ಮಂಡೂಕದಂತೆ ಆಗಿದ್ದೇವೆ. ಅದೇ ಮಹಾರಾಷ್ಟ್ರದವರನ್ನು ತುಲನೆ ಮಾಡಿ ನೋಡಿದಾಗ ಅಲ್ಲಿ ಅನೇಕ ಪಕ್ಷಗಳಿದ್ದರೂ

ಸಹ ಡೆವಲಪ್‌ಮೆಂಟ್ ವರ್ಕ್ಸ್ ಮಾಡುವ ಬಗ್ಗೆ ಎಲ್ಲರೂ ತೀವ್ರವಾದ ರೀತಿಯಲ್ಲಿ ಒಂದಾಗುತ್ತಾರೆ. ಆದರೆ ಇಲ್ಲಿ ಅನೇಕ ಸಮಸ್ಯೆಗಳು ಬರುತ್ತವೆ. ಕೇಂದ್ರ ಸರ್ಕಾರದ ಬಂಡವಾಳ ಮುಂಗಿಯಿತು ಅಂದರೆ, ೧೦೦ ಪರ್ಸೆಂಟ್ ಎಕ್ಸ್‌ಪೋರ್ಟ್ ಓರಿಯಂಟ್ ಇನ್‌ಸ್ಟಿಟ್ಯೂಷನ್ ಮಾಡುತ್ತೇವೆಂದು ಹೇಳಿದರೂ ಅಲ್ಲೂ ಕೂಡ ಅವರಿಗೆ ಪಾಲು. ಏತಕ್ಕೆಂದರೆ ಸರ್ಕಾರ ಮೂಕ ಮನಸ್ಸಿನಿಂದ ಎಲ್ಲರಿಗೂ ಸಹಾಯಮಾಡುತ್ತಾ ಇದೆ. ಕೆ. ಎಚ್. ಪಾಟೀಲರು ಒಂದು ಮಿಲ್ ಮಾಡುವುದರೊಳಗೆ ಬೇರೆಯವರು ೧೦ ಮಿಲ್‌ಗಳನ್ನು ಮಾಡುವವರು ಇದ್ದಾರೆ. ಯಾರು ಮುಂದೆ ಬರುತ್ತಾರೆ. ಅವರಿಗೆ ಅಡೆತಡೆಯಾಗದಂತೆ ನಿಮ್ಮ ಸರ್ಕಾರ ಏತಕ್ಕೆ ಸಹಾಯ ಮಾಡಬಾರದೆಂದು ಕೇಳಲಿಕ್ಕೆ ಇಚ್ಛೆಪಡುತ್ತೇನೆ.

ಇದಲ್ಲದೆ ಹತ್ತಿಯ ಕಾರ್ಖಾನೆಯ ಬಗ್ಗೆ ಹೇಳುವುದಾದರೆ, ಮಾನ್ಯ ಉಪಾಧ್ಯಕ್ಷರೇ ಈವತ್ತಿನ ದಿವಸ ಹತ್ತಿಯ ಕಾರ್ಖಾನೆಗಳ ಸ್ಥಿತಿ ಚಿಂತಾಜನಕವಾಗಿದೆ. ಬಿಜಾಪುರ ಹತ್ತಿ ಟೆಕ್ಸ್‌ಟೈಲ್ ಮಿಲ್‌ಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಕೊಟ್ಟರೆ ಸಂತೋಷ. ಬೇಡವೆಂದು ಹೇಳುವುದಿಲ್ಲ. ಬಂದವರಿಗೆ ಸೌಜನ್ಯ ತೋರಿಸಿದ್ದೀರಿ. ಆದರೆ ಏತಕ್ಕೆ ಬಂದಿದ್ದರು ಎನ್ನುವುದನ್ನು ನೋಡಿದ್ದೀರಾ. ಅಲ್ಲಿ ಬಂಡವಾಳಸ್ಥ ವ್ಯಾಪಾರಸ್ಥರನ್ನು ಚೇರ್‌ಮನ್ ಮಾಡಿದ್ದೀರಿ. ಅವರು ಹತ್ತಿಯನ್ನು ಖರೀದಿ ಮಾಡಿರುತ್ತಾರೆಯೋ ಇಲ್ಲವೇ ಎನ್ನುವುದನ್ನು ತಿಳಿದಿದ್ದೀರಾ? ಈವತ್ತಿನದಿವಸ ಎಷ್ಟೋ ಮಿಲ್‌ಗಳು ಕಷ್ಟದಲ್ಲಿವೆ. ಕಷ್ಟದಲ್ಲಿರುವವರಿಗೆ ಹಣವನ್ನು ಕೊಡಿ. ಯೋಗ್ಯರೀತಿಯಲ್ಲಿ ಅವುಗಳನ್ನು ನಡೆಸಲು ಅನುಕೂಲ ಮಾಡಿಕೊಡಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ-ಪೀಠವನ್ನು ಅಲಂಕರಿಸಿದರು)

ಇನ್ನು ನೇಕಾರರ ಸಲುವಾಗಿ ಕೆ. ಎಸ್. ಟಿ. ಡಿ. ಸಿ. ಮಾಡಿದ್ದೀರಿ. ಇದು ಅವರಿಗೆ ಎಷ್ಟೇ ಉತ್ತಮವಾಗಿದ್ದರೂ ಸಹಿತ, ಅವರು ಯಾರಾದರೂ ಮಾಲು ತೆಗೆದುಕೊಳ್ಳಬೇಕಾದಾಗ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿರುವ ಒಬ್ಬ ಕ್ಲಾರ್ಕ್ ಕೊಕ್ಕೆ ಹಾಕಿದರೆ ಹಣ ಸ್ಯಾಂಕ್ಷನ್ ಆಗಿರುವುದು ಬಿಡುಗಡೆ ಆಗುವುದಿಲ್ಲ, ಮಾನ್ಯ ದೇಶಪಾಂಡೆಯವರು ವೈಯುಕ್ತಿಕವಾಗಿ ಮಿಲ್‌ನವರಿಗೆ ಒಂದು ಕೋಟಿ ಉದ್ರಿ ಕೊಟ್ಟಿದ್ದಾರೆ. ಅದರಲ್ಲಿ ನಿಮ್ಮ ಹಸ್ತಕ್ಷೇಪವಿಲ್ಲವೇ? ಮಾನ್ಯ ರಾಮಕೃಷ್ಣ ಹೆಗಡೆಯವರೂ ಕೂಡ ಹಿಂದೆ ಸಹಕಾರಿ ಮಂತ್ರಿಗಳಾಗಿದ್ದರು. ಬಡ್ಜೆಟ್‌ನಲ್ಲಿ ಏನು ಹಣ ಕೊಟ್ಟಿರುತ್ತಾರೋ ಅದನ್ನು ವಿತರಣೆ ಮಾಡತಕ್ಕಂಥ ಶಕ್ತಿ ನಿಮಗೆ ಇರಬೇಕು. ಯಾವುದೋ ಫೈನಾನ್ಸ್ ಸಕ್ರೆಟರಿಗೆ ಅಧಿಕಾರ ಇರಬಾರದು ಎನ್ನುವ ಮಾತನ್ನು ಹೇಳುತ್ತೇನೆ. ಅನೇಕ ವರ್ಷಗಳಿಂದ ಯಾರೋ ಏನೋ ಮಾಡಿದರೆಂದು ನೀವು ಮಾಡಬಾರದು. ಫೆಡರೇಷನ್‌ನವರು ಮುಂದೆ ಬಂದು ಹತ್ತಿಯನ್ನು ಕೊಂಡುಕೊಳ್ಳುವಂತೆ ಸಹಾಯ ಮಾಡಿದ್ದೀರಿ. ಅದೇರೀತಿಯಲ್ಲಿ ಸಕ್ಕರೆ ಕಾರ್ಖಾನೆಯವರಿಗೂ ಯೋಗ್ಯರೀತಿಯ ಸಹಾಯವನ್ನು ಮಾಡಬೇಕು. ನಂದಿ ಶುಗರ್ ಫ್ಯಾಕ್ಟರಿಯವರು ಲೈಸನ್ ತೆಗೆದುಕೊಂಡರು. ಆದರೆ ಅವರು ಹಣ ಕೂಡಿಸಬೇಕಾದರೆ ಅನೇಕ ತೊಂದರೆಗಳನ್ನು ಪಡಬೇಕಾಯಿತು. ನಬಾರ್ಡ್‌ನವರಿಂದ ಹಣ ಕೂಡಿಸಬೇಕು ಅಪೆಕ್ಸ್‌ಬ್ಯಾಂಕ್‌ನವರಿಂದ ಹಣ ಕೊಡಿಸಲಿಕ್ಕೆ ಮುಂದೆ ಬರಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ತರಬೇಕು. ಯಾರು ಮನೆಯಲ್ಲಿ ಕುಳಿತುಕೊಂಡರೆ ಹಣವನ್ನು ಕೊಡುವುದಿಲ್ಲ. ರೈತಾಪಿ ಜನ ಹಣವನ್ನು ತೊಡಗಿಸಲು ಬೇಕಾದಂಥ ಅನೇಕ ಯೋಜನೆಗಳನ್ನು ಹಾಕಿಕೊಂಡು ಮೂರ್ತಸ್ವರೂಪಕ್ಕೆ ತರಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ.

ಇನ್ನು ತಮಗೆ ಗೊತ್ತಿರುವ ಹಾಗೆ ಈವತ್ತು ಸಹಕಾರಿ ಸಂಘಗಳು ಎಂದರೆ ಎರಡು ಹಸ್ತಗಳಿದ್ದಂತೆ. ಒಂದು ಹಸ್ತ ಸಹಕಾರಿಸಂಘವಾದರೆ, ಇನ್ನೊಂದು ಹಸ್ತ ವ್ಯವಸಾಯ. ಎರಡು ಹಸ್ತಗಳ ಕೂಡಿದರೆ ಹೇಗೆ ಚಪ್ಪಾಳೆಯಾಗುತ್ತದೋ ಹಾಗೆ, ನಮ್ಮ ಸಹಕಾರಿ ಉದ್ದೇಶ ನಿಜವಾಗಿಯೂ ಸಫಲವಾಗುವುದಕ್ಕೆ ಯೋಗ್ಯವಾದ ಯೋಜನೆಗಳನ್ನು ಹಾಕಿ ಕೊಳ್ಳಬೇಕು. ನಮಗೆ ಈವತ್ತಿನದಿವಸ ಏನಾಗಿದೆ ಎಂದರೆ, ಅಗ್ರಿಕಲ್ಚರ್ ರೀಸರ್ಚ್ ರೈತಾಪಿಜನರಿಗೆ ಮುಟ್ಟಲು ಅನೇಕ ತೊಂದರೆಗಳಿವೆ. ಆ ತೊಂದರೆಗಳನ್ನು ನಿವಾರಣೆ ಮಾಡಲು ಸಹಕಾರಿ ಸಂಘಗಳು ಮುಂದಾಗಬೇಕು ಈವತ್ತಿನದಿವಸ ಒಬ್ಬ ಸಹಕಾರಿ ಬೆಂಗಳೂರಿಗೆ ಬಂದರೆ ಇಳಿದುಕೊಳ್ಳಲು ಅವಕಾಶವಿಲ್ಲ. ಆತನು ಲೆಜಿಸ್ಲೇಚರ್ ಹೋಮ್‌ಗೆ ಬಂದರೆ ಹೊರಗೆ ಹಾಕುತ್ತಾರೆ. ಏತಕ್ಕೆಂದರೆ ಅವನು ಹರಕಲು ಅಂಗಿಯನ್ನು ಹಾಕಿಕೊಂಡು ಹೊಲಸಾಗಿರುತ್ತಾನೆ. ಅವನನ್ನು ಒಳಗೆ ಯಾರೂ ಕರೆದುಕೊಳ್ಳುವುದಿಲ್ಲ, ಹೋಟೆಲಿಗೆ ಹೋಗಬೇಕೆಂದರೆ ಬಾಡಿಗೆ ವಿಪರೀತವಾಗಿದೆ, ಅಪೆಕ್ಸ್ ಬ್ಯಾಂಕ್ ಗೆಸ್ಟ್‌ಹೌಸ್ ಬೇರೆಯವರಿಗೆ ರಿಸರ್ವ್ ಆಗಿರುತ್ತದೆ. ಆದ್ದರಿಂದ

ಇನ್ನು ರೈತ ಎಲ್ಲಿಗೆ ಹೋಗಬೇಕು. ಅದಕ್ಕೋಸ್ಕರವಾಗಿ ಅವರ ಸಲುವಾಗಿ ಒಂದು ರೈತ ಭವನವನ್ನು ಕಟ್ಟಿಸಬೇಕೆಂದು ಹೇಳುತ್ತೇನೆ.

ಒಂದು ಕಡೆ ರೈತ ಭವನ ನಿರ್ಮಾಣಮಾಡಲು ಹಾಗೂ ಅಪೇಕ್ಸ್ ಬ್ಯಾಂಕಿನಿಂದ ಪಡೆದ ೨೦ ಲಕ್ಷ ರೂಪಾಯಿಗಳಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ರೈತರಿಗಾಗಿ ಖರ್ಚು ಮಾಡಲು ನಿಮಗೆ ಧೈರ್ಯ ಬರಬೇಕು. ರೈತ ಭವನಕ್ಕೆ ಬೇಕಾದರೆ ಜಯಪ್ರಕಾಶ್ ನಾರಾಯಣರ ಹೆಸರಿಡಿ. ಚಂದ್ರಶೇಖರ್ ಅವರ ಹೆಸರು ಇಡಿ. ಜಾಲಪ್ಪನವರ ಹೆಸರು ಬೇಕಾದರೆ ಇಡಿ ಅಥವಾ ರಾಮಕೃಷ್ಣ ಹೆಗಡೆಯವರ ಹೆಸರಾದರೂ ಇಡಿ. ಒಟ್ಟಿನಲ್ಲಿ ರೈತರಿಗಾಗಿ ಒಂದು ತಂಗುವಮನೆಯನ್ನು ಕಟ್ಟಿಸುವ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿ ಮಾಡಿದರೆ ಉತ್ತಮ. ರೈತರು ಇಲ್ಲಿಗೆ ಬಂದರೆ ಪುಕ್ಕಟೆಯಾಗಿ ಕೊಡುವ ವ್ಯವಸ್ಥೆ ಮಾಡಿ. ಇಲ್ಲದಿದ್ದರೆ ನಾಮಿನಲ್ ರೇಟ್ ಎಂದು ಒಂದು ರೂಪಾಯಿ ಇರಬಹುದು, ಮಾನ್ಯ ಅಧ್ಯಕ್ಷರೇ, ನಾವು ನೀವು ಕೂಡಿ ಈ ಕೆಲಸ ಮಾಡಿದರೂ ಪ್ರಯೋಜನ ಆಗಲಿಲ್ಲ. ನಾನು ಇಲ್ಲಿ ಬಂದರೆ, ನೀವು ಅಲ್ಲಿಗೆ ಹೋದಿರಿ. ಈಗ ಕೀರ್ತಿ ಬರತಕ್ಕಂಥ ಕಾಲ ಮಾನ್ಯ ಜಾಲಪ್ಪನವರಿಗೆ ಬಂದಿದೆ. ಅವರಾದರೂ ಇದನ್ನು ಮಾಡುತ್ತಾರೋ ಏನೋ ನೋಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈಗ ಕಾಲ ಬಂದಿದೆ. ನೀವು ಇವರೂ ಕೂಡಿ ಈ ಕೆಲಸ ಮಾಡಬಹುದು.

ಶ್ರೀ ಕೆ.ಎಚ್. ಪಾಟೀಲ್.—ನಮ್ಮ ಅವರ ಪಕ್ಷ ಬೇರೆಬೇರೆ ಇರಬಹುದು. ಭೇದಭಾವ ಇರಬಹುದು, ಆದರೆ ನಮ್ಮ ಅಭಿಪ್ರಾಯವನ್ನು ಬೇರೆಯವರಿಗೆ ಹೇಳಬೇಕು. ಅಧ್ಯಕ್ಷರನ್ನು ಬಿಟ್ಟು ನಾನಿಲ್ಲ. ನನ್ನನ್ನು ಬಿಟ್ಟು ಅಧ್ಯಕ್ಷರು ಇಲ್ಲ. ಎಲ್ಲರೂ ಕರ್ನಾಟಕದವರೇ ಇದ್ದೇವೆ. ಮಾನ್ಯ ಸಭಾಧ್ಯಕ್ಷರೇ, ನಾನು ಇನ್ನೂ ಅನೇಕ ವಿಷಯಗಳನ್ನು ಹೇಳಬೇಕೂಂತ ಇದ್ದೆ. ಆದರೆ ಕಾಲವಕಾಶ ತುಂಬಾ ಕಡಿಮೆ ಇದೆ. ಇವತ್ತು ಗ್ರೌಂಡ್‌ನೆಟ್ ಸಲುವಾಗಿ ಒಂದು ಸಂಸ್ಥೆಯನ್ನು ಮಾಡಿದ್ದಾರೆ. ಎಣ್ಣೆಕಾಳು ಅಭಿವೃದ್ಧಿ ಸಂಸ್ಥೆಯನ್ನು ಏನು ಮಾಡಿದ್ದಾರೆ, ಅದರಿಂದ ನಮಗೇನೂ ಪ್ರಯೋಜನ ಇಲ್ಲ. ನಮಗೆ ಹಿತ್ತಲ ಗಿಡ ಔಷಧಿಗೆ ಬರುವುದಿಲ್ಲ. ಆರು ಕೋಟಿ ರೂಪಾಯಿ ಶೇಂಗಾ ಖರೀದಿ ಮಾಡಿ ವಿತರಣೆ ಮಾಡಿದ ಬಿಂಕದಕಟ್ಟೆ ಸೊಸೈಟಿ ಬಗ್ಗೆ ವಿವರಣೆಯೇ ಇಲ್ಲ. ಇವತ್ತು ಆಯಿಲ್ ಸೀಡ್ ಡೆವಲಪ್‌ಮೆಂಟ್‌ಗೆ ಕೇಂದ್ರದಿಂದ ಬರತಕ್ಕಂಥ ಕೋಟ್ಯಾಂತರ ರೂಪಾಯಿಗಳನ್ನು ವಿನಿಯೋಗ ಮಾಡುವುದಕ್ಕೆ ಇವರಿಗೆ ಆಗಲಿಲ್ಲ. ಶ್ರೀ ಪ್ರಕಾಶ್‌ರವರು ಮತ್ತು ಶ್ರೀ ಜಾಲಪ್ಪನವರು ಕೂಡಿಯೇ ಈ ಕೆಲಸ ಮಾಡಬೇಕಾಗುತ್ತದೆ. ಇಬ್ಬರೂ ಕೂಡಿಯೇ ಈ ಕೆಲಸ ಮಾಡಬೇಕು, ಇಲ್ಲದಿದ್ದರೆ ಅವರು ಕೊಟ್ಟರೂ ಕೂಡ ನಾವು ತೆಗೆದುಕೊಳ್ಳದ ಹಾಗೆ ಆಗುತ್ತದೆ. ಇವತ್ತು ಸೆಂಟ್ರಲ್ ಸೆಕ್ಟರ್‌ನಿಂದ ಹಣ ಲ್ಯಾಪ್ಸ್ ಆಗಿದೆ. ಇದಕ್ಕೆ ನೀವು ಸಂಬಂಧ ಅಲ್ಲ, ನಾವೂ ಸಂಬಂಧ ಅಲ್ಲ. ಆದರೆ ಇದನ್ನು ಹುಡುಕುವ ಕೆಲಸವನ್ನು ನೀವು ಮಾಡಬೇಕಾಗಿದೆ. ನೀವು ಮಾಡದಿದ್ದರೆ ನಾವು ಮಾಡುತ್ತೇವೆ, ಇನ್ನಾದರೂ ನಿಮಗೆ ಕೀರ್ತಿ ಬರುವ ರೀತಿಯಲ್ಲಿ ಕೇಂದ್ರದವರು ಕೊಡುವ ಹಣವನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕು. ಕಾಟನ್ ಡೆವಲಪ್‌ಮೆಂಟ್ ಸ್ಕೀಮ್, ಆಯಿಲ್ ಡೆವಲಪ್‌ಮೆಂಟ್ ಸ್ಕೀಮ್ ಅಂತ ಇದೆ. ಅವರು ಕೊಡುವ ಸ್ಪೆಶಲ್ ಕಾಂಪೊನೆಂಟ್ಸ್‌ನ್ನು ಯಾವುದೋ ಫ್ಯಾಕ್ಟರಿಯವರು ತೆಗೆದು ಕೊಳ್ಳುತ್ತಾರೆ. ನೀವು ವಿಚಾರ ಮಾಡಿರಿ. ಪಾಮಆಯಿಲ್ ಬೆಲೆ ಆರುವರೆ ಸಾವಿರ ಇಲ್ಲವೇ ಏಳೂವರೆ ಸಾವಿರ ಟನ್‌ಗೆ ಇರುತ್ತದೆ. ಅದನ್ನು ಒಂದು ಟನ್‌ಗೆ ಎಂಟುಸಾವಿರ ಅಂತ ಸೋಪ್ ಫ್ಯಾಕ್ಟರಿಗೆ ಮಾರಾಟ ಮಾಡುತ್ತಾರೆ. ಅದನ್ನು ಕೊಟ್ಟಿದ್ದು ಸೋಪ್‌ಫ್ಯಾಕ್ಟರಿಗೆ ಕೊಡುವುದಕ್ಕಲ್ಲ, ಜನರಿಗೆ ಹಂಚಲಿಕ್ಕೆ, ಸಹಕಾರಿಗಳೂ ಈ ಚಳುವಳಿ ಬಗ್ಗೆ ನಂಬಿಕೆ ಇಟ್ಟುಕೊಂಡಿರುವ ಜಾಲಪ್ಪನವರು ಇದರ ಬಗ್ಗೆ ಆಲೋಚನೆಯನ್ನು ಮಾಡಬಾರದಾ ? ಆಮೇಲೆ ಸಹಕಾರಿ ರಿಫೈನರಿ ಇನ್‌ಸ್ಟಿಟ್ಯೂಶನ್‌ಗಳಲ್ಲಿ ರಿಫೈನ್ ಮಾಡಿ ಕನ್‌ಸ್ಯೂಮ್‌ಗೆ ಕೊಡಬೇಕು ಅಂತ ನಿಯಮ ಇದೆ. ಆದರೆ ಆಗುತ್ತಿರುವುದಾದರೂ ಏನು ? ಕೋಆಪರೇಟಿವ್ ಮೂವ್‌ಮೆಂಟ್ ಬಗ್ಗೆ ಹೇಳಬೇಕೆಂದರೆ, ಮಾನ್ಯ ಅಧ್ಯಕ್ಷರೇ, ಇವತ್ತು ಯಾವ ಕೋ ಆಪರೇಟಿವ್ ಸೊಸೈಟಿಯೂ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅಲ್ಲಿ ಆಡಳಿತ ನಡೆಸತಕ್ಕ ಎಲ್ಲರೂ ಅಧಿಕಾರಿಗಳೇ. ಎಲ್ಲರೂ ಅವರವರೇ ಬೇರೆಯವರನ್ನು ಒಂದಿಬ್ಬರನ್ನು ನಾಮಕಾವಸ್ಥೆಗೆ ತೆಗೆದುಕೊಂಡಿರುತ್ತಾರೆ. ಹುಬ್ಬಳ್ಳಿಯ ಒಂದು ಕೋಆಪರೇಟಿವ್ ಸೊಸೈಟಿಗೆ ಶ್ರೀ ಬೊಮ್ಮಾಯಿಯವರು ಚೇರ್ಮನ್ ಆಗಿದ್ದಾರೆ. ಅದು ಯಾವ ಸ್ಥಿತಿಗೆ ಬಂತು ? ನಾನು ಆವಾಗಲೂ ನೋಡಿದ್ದೇನೆ. ಈಗಲೂ ಕೂಡ ನೋಡಿದ್ದೇನೆ.

ಜಾಲಪ್ಪನವರು ನನ್ನ ಮನಸ್ಸಿನ ವೇದನೆಯನ್ನು ಅರ್ಥಮಾಡಿಕೊಂಡು ಅದನ್ನು ಸುಧಾರಣೆ ಮಾಡಲಿಕ್ಕೆ ಏನಾದರೂ ಪ್ರಯತ್ನ ಮಾಡಲಿ ಎಂದು ನಾನು ಹೇಳ ಬಯಸುತ್ತೇನೆ. ಇನ್ನೊಂದು ಮುಖ್ಯ ವಿಷಯವೇಂದರೆ, ಇವತ್ತು ಸ್ಟೇನ್‌ಲೆಸ್ ಸ್ಟೀಟ್, ಲಿಪ್‌ಸ್ಟಿಕ್, ಸ್ನೋ ಇತ್ಯಾದಿಗಳನ್ನು ಕೋಆಪರೇಟಿವ್ ಸೊಸೈಟಿಗಳಲ್ಲಿ ಮಾರಾಟ ಮಾಡುತ್ತಿದ್ದರೆ, ಇದನ್ನು ಕೋಆಪರೇಟಿವ್ ಸೊಸೈಟಿ ಅಂತ ಕರೆಯುತ್ತಾರಾ? ರೈತಾಪಿ ಜನರಿಗೆ ಬೇಕಾದ ಸಾಮಗ್ರಿಗಳನ್ನು. ಶ್ರೀಮಾನ್ ರಘುಪತಿಯವರಿಗೆ ಬೇಕಾದ ವಸ್ತುಗಳನ್ನು ಖರೀದಿ ಮಾಡಿ ಮಾರಾಟ ಮಾಡಿರಿ. ಇಂತಹ ಕೆಲಸಗಳನ್ನು ಮಾಡುವುದರ ಬದಲು ನಿರುಪಯುಕ್ತ ವಸ್ತುಗಳನ್ನು ಮಾರಾಟ ಮಾಡಿ ಸಹಕಾರ ಚಳುವಳಿಗೆ ಕೆಟ್ಟ ಹೆಸರನ್ನು ತರುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ ತಾವು ಕೂಡ ಸಹಕಾರಿಗಳು ಇರುವುದರಿಂದ, ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ ಈ ಸಹಕಾರ ಚಳುವಳಿಗೆ ಕಳಂಕ ಬಾರದಹಾಗೆ ನೋಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಷ್ಟು ಮಾತುಗನನ್ನು ಹೇಳಿ ಔಪಚಾರಿಕವಾಗಿ ಈ ಎರಡೂ ಡಿಮ್ಯಾಂಡ್‌ಗಳ ಮೇಲೆ ಮಾತನಾಡಲು ಮಾನ್ಯ ನಾಯಕರು ಹೇಳಿರುವುದರಿಂದ. ನಾನು ಸಮಯದ ಮಿತಿಗೆ ಒಳಪಟ್ಟು ಒಂದೆರಡು ಮಾತುಗಳನ್ನು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ. ನಾನು ಸಾಕಷ್ಟು ಮಾತನಾಡುವುದಕ್ಕೆ ವಿಷಯಗಳು ಇದ್ದರೂ ಸಹಿತ, ಮಾನ್ಯ ಅಧ್ಯಕ್ಷರು ಹೇಳಿದಂತೆ ಸಮಯ ಅಭಾವವನ್ನು ಮನ್ನಿಸಿ ನಾನು ಸಹಕಾರವನ್ನು ಇಷ್ಟಕ್ಕೇ ಬಿಟ್ಟು ಬೇರೆ ವಿಷಯಕ್ಕೆ ಬರುತ್ತೇನೆ. ಮಾನ್ಯ ಸಚಿವರಾದ ಶ್ರೀ ನಜೀರ್‌ಸಾಬ್ ಅವರು ಇಲ್ಲಿಲ್ಲ, ಆದರೆ ರಾಜ್ಯಸಚಿವರಾದ ಶ್ರೀ ಯಾವಗಲ್ ಅವರು ಇದ್ದಾರೆ. ಇಲ್ಲಿ ರೂರಲ್ ಡೆವಲಪ್‌ಮೆಂಟ್ ಮತ್ತು ಪಂಚಾಯತ್‌ರಾಜ್ ಬೇಡಿಕೆಗಳನ್ನು ಚರ್ಚೆಗೆ ಇಟ್ಟಿದ್ದಾರೆ, ಮಾನ್ಯ ಸಭಾಧ್ಯಕ್ಷರೇ, ಈ ರೂರಲ್ ಡೆವಲಪ್‌ಮೆಂಟ್ ಏನಿದೆ, ಇದರೊಳಗೆ ಇಂಟಿಗ್ರೇಡ್ ರೂರಲ್ ಡೆವಲಪ್‌ಮೆಂಟ್ ಥ್ರೂ ಕೋಆಪರೇಟಿವ್ಸ್ ಬಗ್ಗೆ ಗೈಡ್‌ಲೈನ್ಸ್‌ನ್ನು ಅಡಾಪ್ಟೆಡ್ ವಿಲೇಜ್‌ಗಳ ಸಲುವಾಗಿ ಕೊಟ್ಟಿದ್ದಾರೆ. ಶ್ರೀಮಾನ್ ಯಾವಗಲ್ ಅವರು ಹೊಸಬರಾಗಿರುವುದರಿಂದ ಈ ದಿಸೆಯಲ್ಲಿ ಈ ಇಲಾಖೆ ಎಷ್ಟು ಮುಂದಿದೆ ಎಂದು ಪರಿಶೀಲನೆ ಮಾಡ ಬೇಕಾಗಿದೆ, ಇದನ್ನು ನಾನು ಓದುತ್ತೇನೆ.

I quote from the Guidelines for Adoption of villages given in Integrated Rural Development through Co-operative.

> "In order to find out the extent of impact of the activities in the adopted village, it is necessary that the programme should be evaluated. The nature of the evaluation will depend on the nature of the activities. Therefore, there may be two types of evaluation. (i) Internal evaluation which will be of continuous nature carried out for various activities from time to time, (ii) total evaluation which may be conducted after lapse of the prescribed period for which the village has been adopted, Ordinarily the period of adoption may be 3 to 5 years. Such evaluation may also be entrusted to an external agency."

For Monitoringthe development programme in the adopted village. the adopting organisation should create a monitoring cell. The monitoriug cell should be suitably staffed, It may consist of the following personnel.—

i) Manager/Director who will be overall Incharge of the Cell.

ii) Development Officer (Agricultural)
iii) Development Officer (Non-land based activities)
iv) Development Officer (Women and Youth Programme)
v) Field Workers and Research Analysist
vi) L.D.C. Cum Typist
vii) Stenographer

It is also suggested to form the following Co-ordinatian Committee.—

1) President and Managing Director of Central (District) Co-Operative Bank.
2) District Collector/Dy. Commissioner of the concerned district.
3) Assistant Registrars. Co-operative Societies, Milk and Industrial Societies.
4) B D O and Panchayat Officer
5) Represetative from P L D Bank
6) Representative from District cpnsumer Co-operative stores
7) President District Co-operation Union/Federation
8) Representative from DRDA etc,
9) District Medical Officer
10) Executive Officer of P W D
11) District Officer of Khadi and Village Industries
12) District Public Relations Officer
13) Representative of other social organisation of the area
14) President of adopted village co-operative society
15) A youth leader of the village
16) Sarpach of the village
17) District Welfare Officer
18) Head Master of the village School
19) Manager of Commercial Bank of Area
20) Representative of Marketing Society

ಇದನ್ನೆಲ್ಲಾ ಸರಿಯಾಗಿ ಅಡಾಪ್ಟ್ ಮಾಡಿದರೆ ನಿಮ್ಮ ಮೇಲೆ ಹೇಗೆ ಅಪಾದನೆ ಬರುತ್ತದೆ ? ಆದರೆ ನಿಮಗೆ ಇದನ್ನೆಲ್ಲಾ ಮಾಡುವುದಕ್ಕೆ ಆಗುವುದಿಲ್ಲ, ಏಕೆಂದರೆ ನಿಮಗೆ ಅಳರಸರ ಅಂಜಿಕೆ ಇಲ್ಲ, ಪ್ರಧಾನಿಯ ಭೀತಿಯಿಲ್ಲ. ಈದು ನಿಮಗೆ ಹೊಂದಿಕೆಯಾಗುವುದಿಲ್ಲ. ಇಂದಿನಿಂದ ಅದರೂ ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡಿ, ಈ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳಿಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಪಾಟೀಲರು, ಯಾವ ವರದಿಯ ಭಾಗವನ್ನು ಹೇಳುತ್ತಿದ್ದಾರೆ ಎಂಬುದನ್ನು ತಿಳಿಸಬೇಕು ?

ಶ್ರೀ ಕೆ. ಎಚ್. ಪಾಟೀಲ್.—ನಾನು ಹೇಳಿದ್ದು ನ್ಯಾಷನಲ್ ಯೂನಿಯನ್ ಕೋ-ಆಪರೇಟಿವ್ಸ್ ಬಗ್ಗೆ. ರೂರಲ್ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ ಈ ಸ್ಕೀಮ್ ಸಲುವಾಗಿ ಒಂದು ಪ್ಲಾನ್ ಮಾಡಿದ್ದಾರೆ, ಅದನ್ನು ಕಳುಹಿಸಿಕೊಡುತ್ತೇನೆ. ನೀವು ಅದನ್ನು ಓದಿ ನನಗೆ ಕಳುಹಿಸಿಕೊಡಿ. ಇವತ್ತು ರೂರಲ್ ಡೆವಲಪ್‌ಮೆಂಟ್, ಪಂಚಾಯತ್ ರಾಜ್ ಇಲಾಖೆಗಳಲ್ಲಿ ಎಷ್ಟೋ ಕೆಲಸಗಳು ಬಾಕಿ ಇವೆ, ಇದನ್ನು ತಲುಲನೆ ಮಾಡುವುದಕ್ಕೆ ಅಸಾಧ್ಯ. ಕೇಂದ್ರ ಸರ್ಕಾರದ ಕೆಲವು ಸ್ಕೀಮ್‌ಗಳು ಇವೆ. ಸೆಂಟ್ರಲ್ ಸೆಕ್ಟರ್‌ನಿಂದ ಸಿಗತಕ್ಕ ಹಣವನ್ನು ದೊರಕಿಸಲಿಕ್ಕೆ ನೀವು ಪ್ರಯತ್ನವನ್ನು ಮಾಡಿಯೇ ಇಲ್ಲ, ಇವತ್ತು ಹರಿಜನರ ಡೆವಲಪ್‌ಮೆಂಟ್ ಸ್ಕೀಮ್ ಇರಬಹುದು, ಲ್ಯಾಂಡ್ ಗ್ರ್ಯಾಂಟ್ ಸ್ಕೀಮ್ ಇರಬಹುದು ಅಥವಾ ಡಿಪಿಎಪಿ ಸ್ಕೀಮ್ ಇರಬಹುದು. ಉದ್ಯೋಗ ಹೆಚ್ಚು ಮಾಡುವ ಸ್ಕೀಮ್ ಇರಬಹುದು ಅಥವಾ ಸೆಂಟ್ರಲ್ ಸೆಕ್ಟರ್ ಸ್ಕೀಮ್ ಇರಬಹುದು, ಈ ಎಲ್ಲಾ ಸೆಂಟ್ರಲ್ ಸೆಕ್ಟರ್ ಸ್ಕೀಮ್‌ಗಳಿಗೆ ಕೇಂದ್ರದವರು ಹಣ ಕೊಡುತ್ತಾರೆ. ಆದರೆ ನಾವು ಪೂರ್ತಿಯಾಗಿ ಅದರ ಪ್ರಯೋಜನ ತೆಗೆದುಕೊಂಡಿಲ್ಲ. ಈಗಲಾದರೂ ಈ ಬಗ್ಗೆ ಪ್ರಯತ್ನ ಮಾಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪೂರ್ಣ ಮಟ್ಟದಲ್ಲಿ ಈ ಬಗ್ಗೆ ನಮ್ಮ ರಾಜ್ಯ ಸಾಕಷ್ಟು ಪ್ರಯತ್ನ ಮಾಡಿದಿಯೇ ? ಇಲ್ಲ, ಏನು ಮಾಡಿಲ್ಲವೆಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಇವತ್ತು ರೈತರು ತೆಗೆದಂತಹ ಬಾವಿಗಳು ಬತ್ತಿ ಹೋಗಿವೆ. ಇದರಿಂದ ಒಂದು ಸರ್ವಜ್ಞ ವಚನ ನೆನಪಿಗೆ ಬರುತ್ತದೆ. ನಾವು ಬಿಸಿಲು ಕುದುರೆಯನ್ನು ಬೆನ್ನು ಹತ್ತಿದ ಹಾಗೆ, ಅದು ಮುಂದೆ ಮುಂದೆ ಹೋದಂತ ನಜೀರ್ ಸಾಬ್‌ರವರು ಬಾವಿಗಳನ್ನು ಅಗೆಯುತ್ತಾ ಹೋದ ಹಾಗೆ ನೀರು ಒಳಕ್ಕೆ ಹೋಯಿತು. ಇದು ನೈಸರ್ಗಿಕ ಕುತ್ತು, ಈ ಕುತ್ತನ್ನು ದೂರ ಮಾಡಲಿಕ್ಕೆ ನಾವು ಪ್ರಯತ್ನ ಮಾಡಬೇಕು, ಆಳವಾಗಿ ಹೋಗುವಂತಹ ಬೋರಿಂಗ್ ಮಿಷನ್‌ಗಳನ್ನು ಮತ್ತು ಎಲೆಕ್ಟ್ರಾನಿಕ್ ಹೈ ಸ್ಪೀಡ್ ಮಿಷನ್‌ಗಳನ್ನು ನೀವು ತೆಗೆದುಕೊಳ್ಳಬೇಕು, ಇದು ಹೆಚ್ಚು ಹೆಚ್ಚು ಆಳಕ್ಕೆ ಕೊರೆದುಕೊಂಡು ಹೋಗುತ್ತದೆ. ಇದರಿಂದ ಮತ್ತೆ ಹಣ ವ್ಯಯವಾದರೂ ಪರವಾಗಿಲ್ಲ. ಮನೆಯ ಮಾಲೀಕರನ್ನು ಉಳಿದವರನ್ನು ಬದುಕಿಸಿ. ಇದರಿಂದ ನಿಮ್ಮ ಸರ್ಕಾರ ಬದುಲಿಕ್ಕೆ ಸಾಧ್ಯವಾಗುತ್ತದೆಂದು ಹೇಳಿ ತಾವು ಈ ಪ್ರಮುಖ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದು ಮತ್ತೊಮ್ಮೆ ಕೇಳಿಕೊಂಡು, ಇದರ ಬಗ್ಗೆ ವಿಶೇಷವಾಗಿ ಮಾತನಾಡುವಂತಹ ಸಂದರ್ಭ ಇದ್ದರೂ ಸಮಯ ಇಲ್ಲದೆ ಇರುವುದರಿಂದ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗ).—ಸನ್ಮಾನ್ಯ ಅಧ್ಯಕ್ಷರೇ, ೧೯೮೬-೮೭ ನೇ ಸಾಲಿನ ಗ್ರಾಮೀಣ ಅಭಿವೃದ್ಧಿ ಮತ್ತು ಹಾಗೂ ಸಹಕಾರ ಇಲಾಖೆಗಳ ಅನುದಾನ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಕೆಲವೊಂದು ಸಲಹೆಗಳನ್ನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಈ ಗ್ರಾಮಾಭಿವೃದ್ಧಿ ಇಲಾಖೆ ಬರುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಗ್ರಾಮಾಭಿವೃದ್ಧಿ ಇಲಾಖೆ ಬಗ್ಗೆ ಮೊದಲ ಎರಡು ಮೂರು ವರ್ಷಗಳ ಕಾಲ ಶ್ರೀ ಅಬ್ದುಲ್ ನಜೀರ್ ಸಾಬ್‌ರವರು ಬಹಳ ಆಸಕ್ತಿಯಿಂದ ಕೆಲಸ ಮಾಡಿದರು. ಆದರೆ ಈಗ ಅಷ್ಟೊಂದು ಚೆನ್ನಾಗಿ ಮತ್ತು ಚುರುಕಾಗಿ ಕೆಲಸ ಮಾಡುತ್ತಿಲ್ಲ. ಏಕೆಂದರೆ ಈ ಇಲಾಖೆ ಬೇರೆಯವರ ಎರವಲು ಸೇವೆಗಳ ಮೇಲೆ ನಿಂತುಕೊಂಡು ಬಿಟ್ಟಿದೆ. ಇವತ್ತು ರೂರಲ್ ಡೆವಲಪ್‌ಮೆಂಟ್ ಇಲಾಖೆಯಲ್ಲಿ ಬಿ. ಡಿ. ಒ ಗಳು ಇದ್ದರೂ ಕೂಡ ಇವರು ಬೇರೆ ಇಲಾಖೆಯಿಂದ ಬಂದವರು, ಮತ್ತು ಪಿಎಚ್‌ಇ ಇಲಾಖೆಯಲ್ಲಿ ಪಿ. ಡಬ್ಲ್ಯೂ. ಡಿ. ಇಲಾಖೆಯಿಂದ ಬಂದವರು ಇದ್ದಾರೆ. ಈಗ ಉದಾಹರಣೆಗೆ ಬಿ. ಡಿ. ಓ. ಬಗ್ಗೆ ಒಂದು ವಿಷಯವನ್ನು ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ೧೭೫ ಬ್ಲಾಕ್‌ಗಳು ಇವೆ: ೬೮ ಜನಗಳನ್ನು ಅವರು

ಕೃಷಿ ಇಲಾಖೆಯಿಂದ ತೆಗೆದುಕೊಂಡಿದ್ದಾರೆ. ೭೬ ಜನಗಳನ್ನು ಕೆ. ಎ. ಎಸ್.ನಿಂದ ತೆಗೆದುಕೊಂಡಿದ್ದಾರೆ. ಒಟ್ಟಿನಲ್ಲಿ ಇಲ್ಲಿರುವ ಎಲ್ಲಾ ಜನರನ್ನು ಬೇರೆ ಬೇರೆ ಇಲಾಖೆಗಳಿಂದ ತೆಗೆದುಕೊಂಡಿದ್ದಾರೆ. ಇವತ್ತು ೧೭೫ ಬ್ಲಾಕ್‌ಗಳಲ್ಲಿ ಬಿಡಿಓಗಳು ಅಂತಾ ಏನು ನೇಮಕವಾಗಿದ್ದಾರೆ, ಈ ಬಗ್ಗೆ ನಾನು ಹೇಳುವುದೇನೆಂದರೆ, ಕೆ.ಪಿ.ಎಸ್.ಸಿ. ಮೂಲಕ ನೇರವಾಗಿ ಇವರನ್ನು ನೇಮಕ ಮಾಡಬೇಕು. ಅದರ ಜೊತೆಗೆ ಪ್ರತ್ಯೇಕವಾದ ಒಂದು ನಿರ್ದೇಶನಾಲಯವನ್ನು ರಚನೆ ಮಾಡಬೇಕೆಂದು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ. ತಮಗೆ ಗೊತ್ತಿರುವಂತೆ ಅರ್ಬನ್ ಡೆವಲಪ್‌ಮೆಂಟ್ ಇಲಾಖೆ ಈಗ ಪ್ರತ್ಯೇಕವಾದ ಒಂದು ನಿರ್ದೇಶನಾಲಯವನ್ನು ಹೊಂದಿದೆ ಆದರೆ ಈ ರಾಜ್ಯದಲ್ಲಿ ಸುಮಾರು ೧೦೦ಕ್ಕೆ ೭೦ ರಷ್ಟು ಜನರು ಹಳ್ಳಿಗಾಡಿನಲ್ಲಿದ್ದರೂ ಕೂಡ ಅವರಿಗೆ ಒಂದುಪ್ರತ್ಯೇಕವಾದ ನಿರ್ದೇಶನಾಲಯವನ್ನು ರಚನೆ ಮಾಡಿಲ್ಲದಿರುವುದು ನನಗೆ ತುಂಬಾ ಆಶ್ಚರ್ಯವಾಗಿದೆ. ಇನ್ನಾದರೂ ಕೂಡ ಬೇಗನೆ ಗ್ರಾಮಾಭಿವೃದ್ಧಿ ಇಲಾಖೆಗೆ ಒಂದು ಪ್ರತ್ಯೇಕವಾದ ನಿರ್ದೇಶನಾಲಯವನ್ನು ರಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅಧ್ಯಕ್ಷರೇ, ಈ ವರ್ಷದಿಂದ ಜಿಲ್ಲಾ ಪರಿಷತ್ ಹಾಗೂ ಮಂಡಲ್ ಪಂಚಾಯತ್‌ಗಳು ರಚನೆ ಆಗುತ್ತಿವೆ. ಆದ್ದರಿಂದ ಗ್ರಾಮಾಭಿವೃದ್ಧಿ ಇಲಾಖೆಗೆ ಪ್ರತ್ಯೇಕ ನಿರ್ದೇಶನಾಲಯವನ್ನು ರಚನೆ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಕೊಡುತ್ತೇನೆ. ಬಿಡಿಓಗಳನ್ನು ತಕ್ಷಣ ಕೆ.ಪಿ.ಎಸ್.ಸಿ. ಮುಖಾಂತರ ನೇಮಕ ಮಾಡಿಕೊಳ್ಳಬೇಕು. ಈಗಾಗಲೇ ಈ ಇಲಾಖೆ ಲಿಕ್ವಿಡೇಷನ್ ಆಗುತ್ತಾ ಇದೆ. ಆದ್ದರಿಂದ ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇನ್ನೊಂದು ಮುಖ್ಯವಾದ ವಿಷಯ ಏನೆಂದರೆ ಈಗ ಎಸ್.ಇ.ಓ.ಗಳಿಗೆ ಪ್ರಮೋಷನ್ ಕೊಟ್ಟು ಬಿಡಿಓಗಳು ಅಂತಾ ನೇಮಕ ಮಾಡುತ್ತಿದ್ದಾರೆ. ಇದು ಬಹಳ ಸಂತೋಷವಾದ ವಿಚಾರ ಈ ಇಲಾಖೆಯಲ್ಲಿ ಇಲ್ಲಿಯವರೆವಿಗೂ ಪ್ರಮೋಷನ್ ಅನ್ನುವುದೇ ಬಂದಿರಲಿಲ್ಲ. ತಮಗೆ ಗೊತ್ತಿರುವ ಹಾಗೆ ೧೯೭೦ರಲ್ಲಿ ಕೆ.ಪಿ.ಎಸ್.ಸಿ.ಯಿಂದ ನೇಮಕವಾದ ಒಬ್ಬ ಬಿಡಿಓ ಮತ್ತು ಒಬ್ಬ ತಹಶೀಲ್ದಾರರನ್ನು ಜಿಲ್ಲಾಧಿಕಾರಿಗಳಾಗಿ ನೇಮಕ ಮಾಡಿದ್ದಾರೆ. ಆದರೆ ಇವತ್ತು ಒಬ್ಬ ಬಿಡಿಓ ಅವರನ್ನು ಜಿಲ್ಲಾ ಅಭಿವೃದ್ಧಿ ಸಹಾಯಕರನ್ನಾಗಿ ಮಾಡಿದ್ದಾರೆ. ಇದರಿಂದ ಗ್ರಾಮಾಭಿವೃದ್ಧಿ ಇಲಾಖೆಯಲ್ಲಿ ಇಷ್ಟೊಂದು ಸೇವೆಯನ್ನು ಸಲ್ಲಿಸಿದಂತಹವರಿಗೆ ನಿರಾಶೆಯಾಗಿದೆ. ನೀವು ಡಿಡಿಓ ಅಂತಾ ಪೋಸ್ಟಿಂಗ್ ಮಾಡಿದ್ದೀರಿ. ಕೆಲವು ಸಾರಿ ಸ್ಪೆಷಲ್ ಡಿಸಿಗೆ, ಡಿಆರ್‌ಡಿಸಿ, ಹಾಗೆ ಪೋಸ್ಟಿಂಗ್ ಕೊಡಬಾರದು. ಈ ಸೀನಿಯರ್ ಡಿಡಿಓ ಏನು ಇದ್ದಾರೆ ಅವರಿಗೆ ಸ್ಪೇಷಲ್ ಡಿಸಿ ಅಥವಾ ಡಿಆರ್‌ಡಿಸಿ ಅಂತಾ ನೇಮಕ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಾಲ್ಲೂಕು ಅಭಿವೃದ್ಧಿ ಮಂಡಳಿಯಲ್ಲಿ ಜೂನಿಯರ್ ಇಂಜಿನಿಯರ್ ಇಲ್ಲ. ಅವರನ್ನು ಅಲ್ಲಿಗೆ ನೇಮಕ ಮಾಡಿಲ್ಲ. ನಾವು ಈಗ ಪಿ ಡಬ್ಲ್ಯುಯಿಂದ ಅಥವಾ ಬೇರೆ ಇಲಾಖೆಯಿಂದ ಎರವಲು ಸೇವೆಯನ್ನು ತೆಗೆದುಕೊಳ್ಳುತ್ತಾ ಇದ್ದೇವೆ. ಈ ಸಂದರ್ಭದಲ್ಲಿ ಒಂದು ಸೂಚನೆಯನ್ನು ಕೊಡುತ್ತೇನೆ, ರೂರಲ್ ಇಂಜಿನಿಯರಿಂಗ್ ಸರ್ವಿಸ್ ಅಂತಾ ನೇಮಕ ಮಾಡಿಕೊಂಡರೆ. ಇದು ಪಿ.ಎಚ್.ಇ.ಗೆ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗೆ ಪ್ರತ್ಯೇಕವಾದ ಸೇವೆಯನ್ನು ಪಡೆದಂತಾಗುತ್ತದೆ. ಮತ್ತು ಒಳ್ಳೆಯ ಕೆಲಸ ಮಾಡಿದಂತಾಗುತ್ತದೆ ಇಲ್ಲದಿದ್ದರೆ ಪಿ ಡಬ್ಲ್ಯೂ. ಡಿಯಲ್ಲಿ ಬೇಡವೆಂದ ಜನಗಳನ್ನು ಪಿ. ಎಚ್.ಇ.ಗೆ ಮತ್ತು ತಾಲ್ಲೂಕು ಅಭಿವೃದ್ಧಿಗೆ ಮಂಡಳಿಗೆ ತಂದು ಹಾಕುತ್ತಾರೆ. ಅಲ್ಲಿ ಬೇಡವಾದಂತವರನ್ನು ಇಲ್ಲಿಗೆ ತಂದು ಹಾಕುತ್ತಾರೆ. ಅದಕ್ಕಾಗಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಏನೆಂದರೆ ಈ ರೂರಲ್ ಇಂಜಿನಿಯರಿಂಗ್ ಸರ್ವಿಸ್‌ನ್ನು ತಕ್ಷಣ ಪ್ರಾರಂಭ ಮಾಡಬೇಕು ಎಂದು, ಕಳೆದ ಅಧಿವೇಶನದಲ್ಲಿ ನಾನು ಮಾತನಾಡಿದಾಗ ಸಚಿವರು ಒಂದು ಭರವಸೆಯನ್ನು ಕೊಟ್ಟಿದ್ದರು, ಅದನ್ನು ಈಗ ಅವರ ನೆನಪಿಗೆ ತರುವುದಕ್ಕೆ ಇಚ್ಛೆಪಡುತ್ತೇನೆ. ಏನೆಂದರೆ ರೂರಲ್ ಇಂಜಿನಿಯರಿಂಗ್ ಸರ್ವಿಸ್ ಪ್ರಾರಂಭ ಮಾಡುತ್ತೇವೆಂದು, ಆದರೆ ಅದರ ಬಗ್ಗೆ ಒಂದು ಚಕಾರವನ್ನು ಈ ಸಾರಿ ಎತ್ತಿಲ್ಲ. ದಯವಿಟ್ಟು ಈ ರೂರಲ್ ಇಂಜಿನಿಯರಿಂಗ್ ಸರ್ವಿಸ್‌ನ್ನು ಪ್ರಾರಂಭ ಕೊಡಬೇಕೆಂದು ಹೇಳುತ್ತೇನೆ. ಈಗ ಈ ಪಿ. ಎಚ್. ಇ. ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮ ಪಿ. ಹೆಚ್. ಇ. ಇಲಾಖೆಯಲ್ಲಿ ಇಂಜಿನಿಯರ್‌ರೊಬ್ಬರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಇವತ್ತು ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಪರಿಸ್ಥಿತಿ ಏನಾಗಿದೆ, ಎಂಬುದನ್ನು ನಾವು ಯೋಚನೆ ಮಾಡಬೇಕು. ಅಧ್ಯಕ್ಷರೇ ತಮಗೆ ಗೊತ್ತಿರುವ ಹಾಗೆ ಪಿ.ಎಚ್.ಇ ಇಲಾಖೆಯಲ್ಲಿ ಜಿಲ್ಲೆಗೊಬ್ಬರು ಎಕ್ಸ್‌ಕ್ಯೂಟಿವ್ ಇಂಜಿನಿಯರ್ ಇದ್ದಾರೆ. ೩ ತಾಲ್ಲೂಕುಗಳಿಗೆ ಒಬ್ಬ ಅಸಿಸ್ಟೆಂಟ್ ಎಕ್ಸ್‌ಕ್ಯೂಟಿವ್ ಇಂಜಿನಿಯರ್ ಇದ್ದಾರೆ. ಇದರಿಂದ ಸರಿಯಾಗಿ ಕೆಲಸ ನಿರ್ವಹಿಸಲು ಹೇಗೆ ಸಾಧ್ಯ

ವಾಗುತ್ತದೆ ? ಆದ್ದರಿಂದ ಕನಿಷ್ಟ ಪಕ್ಷ ಒಂದು ಜಿಲ್ಲೆಗೆ ಇಬ್ಬರು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಇರಬೇಕು. ಆ ರೀತಿ ಇದ್ದರೆ, ನೀರು ಸರಬರಾಜು ಕೆಲಸ ಸರಿಯಾಗಿ ನಡೆಯುತ್ತದೆ, ಬೋರ್‌-ವೆಲ್ ರಿಪೇರಿ ಸರಿಯಾಗಿ ನಡೆಯುತ್ತದೆ. ಆದ್ದರಿಂದ ಇದರ ಬಗ್ಗೆ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

೫-೦೦ ಪಿ. ಎಂ.

ಇದರ ಜೊತೆಗೆ ಪಿ.ಎಚ್‌.ಇ. ಇಲಾಖೆಗೆ ವಾಹನಗಳ ಸೌಕರ್ಯವನ್ನು ಕೊಟ್ಟಿಲ್ಲ. ಈ ಇಲಾಖೆಯ ಕೆಲಸಗಳ ಬಗ್ಗೆ ಡಿ.ಸಿ.ಯವರು ನಮಗೆ ವೀಕ್ಲಿ ರಿಪೋರ್ಟ್ ಕಳುಹಿಸಿಕೊಡುತ್ತಾರೆ. ಅದಕ್ಕಾಗಿ ನಾನು ಅವರಿಗೆ ನನ್ನ ಅಭಿನಂದನೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತೇನೆ. ಇದು ಒಂದು ಒಳ್ಳೆಯ ಸಂಪ್ರದಾಯ. ಅವರ ವರದಿಯಲ್ಲಿ ಸಹ ವಾಹನಗಳ ಸೌಕರ್ಯವಿಲ್ಲದ ಕಾರಣ ಕೆಟ್ಟಿರುವ ಪಂಪ್ ಸೆಟ್ಟುಗಳನ್ನು ಕೂಡಲೇ ರಿಪೇರಿ ಮಾಡಲು ಸಾಧ್ಯವಾಗುತ್ತಿಲ್ಲವೆಂದು ಹೇಳಿರುತ್ತಾರೆ. ಈ ಕಾರಣದಿಂದ ಈ ಇಲಾಖೆಗೆ ವಾಹನ ಸೌಕರ್ಯವನ್ನು ಮತ್ತು ವಾಹನಗಳ ಮೇನ್‌ಟೆನೆನ್ಸ್‌ಗೆ ಸಾಕಷ್ಟು ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚು ಕಪ್ಪುಭೂಮಿ ಪ್ರದೇಶವಿರುವುದರಿಂದ ಕುಡಿಯುವ ನೀರಿನ ಸಲುವಾಗಿ ರಿಗ್‌ಗಳನ್ನು ಹಾಕಿಸಿದರೂ ಸಹ ಸಿಹಿನೀರು ಸಿಗುವುದಿಲ್ಲ. ಕಹಿ ನೀರು ಸಿಗುತ್ತದೆ. ಈ ನೀರನ್ನು ಕುಡಿದರೆ ಜನರಿಗೆ ನಾನಾ ರೀತಿಯ ರೋಗಗಳು ಬರುತ್ತವೆ. ಆ ಭಾಗದಲ್ಲಿ ಸುಮಾರು ೬೦೦ ಹಳ್ಳಿಗಳು ಇವೆ. ಈ ಹಳ್ಳಿಗಳ ಜನರಿಗೆ ಶುದ್ಧವಾದ ನೀರು ಸಿಗುತ್ತಿಲ್ಲ. ಈ ಕಾರಣದಿಂದ "Drackish Zone Water Supply Board" ಎಂದು ಮಾಡಿ, ಆ ಬೋರ್ಡಿಗೆ ಇನ್ನೂರು ಕೋಟಿ ರೂಪಾಯಿಗಳನ್ನು ಒದಗಿಸಿದರೆ, ಎಲ್ಲ ೬೦೦ ಹಳ್ಳಿಗಳಿಗೂ ಶುದ್ಧವಾದ ಕುಡಿಯುವ ನೀರನ್ನು ಒದಗಿಸಬಹುದು. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಬೆಂಗಳೂರು ಸಿಟಿಗೆ ಕಾವೇರಿ ಮೂರನೇ ಹಂತದಿಂದ ನೀರನ್ನು ತರಲು ೨೫೦ ಕೋಟಿ ರೂಪಾಯಿಗಳನ್ನು ಒದಗಿಸುತ್ತಿರುವಾಗ, ಸುಮಾರು ೬೦೦ ಹಳ್ಳಿಗಳಿಗೆ ಶುದ್ಧವಾದ ಕುಡಿಯುವ ನೀರನ್ನು ಒದಗಿಸಲು ೨೦೦ ಕೋಟಿ ರೂಪಾಯಿಗಳನ್ನಾದರೂ ಒದಗಿಸಬೇಕೆಂದು ಕಳಕಳಿಯಿಂದ ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ೭ನೇ ವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಹಣ ಒದಗಿಸದಿರುವುದು ಸರಿಯಲ್ಲ. ಈ ಬಾಬಿಗೆ ಹಣ ಒದಗಿಸುವುದರ ಮೂಲಕ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಿಮಗೆ ಹಣದ ತೊಂದರೆ ಏನಾದರು ಇದ್ದರೆ, ವಿಶ್ವಬ್ಯಾಂಕ್‌ನಿಂದಲಾಗಲೀ, International Agencies ಮೂಲಕವಾಗಲೀ, ಇಲ್ಲವೇ DANIDA, UNICEF ಮುಖಾಂತರವಾಗಲೀ ಹಣದ ಸಹಾಯ ಪಡೆದು ಕೊಂಡು ಈ ಕೆಲಸವುಗಿಸಬೇಕೆಂದು ಸಲಹೆ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯಾವ್ಯಯ ಭಾಷಣದಲ್ಲಿ ೨ ಸಾವಿರ ಜನಸಂಖ್ಯೆ ಇರುವ ಎಲ್ಲ ಗ್ರಾಮಗಳಿಗೂ ಪೈಪ್‌ಗಳ ಮೂಲಕ ಕುಡಿಯುವ ನೀರನ್ನು ಒದಗಿಸುತ್ತೇವೆಂದು ಹೇಳಿರುವುದು ಸಂತೋಷದಾಯಕವಾದಂಥ ವಿಚಾರ. ಇದೊಂದು ಕ್ರಾಂತಿಕಾರಕವಾದಂಥ ಕೆಲಸ. ಆದರೆ ಈ ಕೆಲಸಕ್ಕಾಗಿ ೧೯೮೬-೮೭ನೇ ಸಾಲಿಗೆ ಕೇವಲ ೧೫ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಎಲ್ಲ ಹಳ್ಳಿಗಳಿಗೂ ನೀರನ್ನು ಒದಗಿಸಬೇಕಾದರೆ, ಇದು ಸಾಲುವುದಿಲ್ಲ. ಇನ್ನು ೫ ವರ್ಷಗಳಲ್ಲಿ ೨ ಸಾವಿರ ಜನಸಂಖ್ಯೆ ಇರುವ ಎಲ್ಲ ಹಳ್ಳಿಗಳಿಗೂ ಪೈಪ್‌ಗಳ ಮೂಲಕ ಕುಡಿಯುವ ನೀರನ್ನು ಒದಗಿಸಬೇಕಾದರೆ ನೂರು ಕೋಟಿ ರೂಪಾಯಿಗಳಾದರೂ ಬೇಕಾಗುತ್ತದೆ, ಆದ್ದರಿಂದ ೧೫ ಕೋಟಿ ರೂಪಾಯಿಗಳಿಗೆ ಬದಲು ನೂರು ಕೋಟಿ ರೂಪಾಯಿಗಳನ್ನು ಒದಗಿಸಲು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು NRWS ಮತ್ತು Mini water supply scheme ಗಳನ್ನು ತೆಗೆದುಕೊಂಡಿದ್ದೀರಿ. ಈ ಯೋಜನೆಗಳ ಪ್ರಕಾರ ಅನೇಕ ಕಡೆಗಳಲ್ಲಿ ಕೆಲಸಗಳಾಗಿವೆ ಪೈಪ್‌ಗಳನ್ನು ಸಹ ಹಾಕಿದ್ದಾರೆ. ಆದರೆ ಮೋಟಾರ್‌ಗಳ ಸಪ್ಲೈ ಮಾತ್ರ ಆಗಿಲ್ಲ. ಎಂತಹ ಮೋಟಾರ್‌ಗಳನ್ನು ಒದಗಿಸಬೇಕೆಂಬ ಬಗೆ ಪಿ.ಎಚ್‌.ಇ. ಇಲಾಖೆಯಲ್ಲಿ ಒಂದು ರೋಸ್ಟರ್ ಸಿಸ್ಟಮ್‌ನ್ನು ಇಟ್ಟುಕೊಂಡಿದ್ದಾರೆ, ರಾಧಾ, ಕಾವೇರಿ ಮತ್ತು ಅಮೀನಾ ಎಂಬ ಹೆಸರುಗಳ ಮೋಟಾರ್‌ಗಳನ್ನು ಈಗ ಸಪ್ಲೈ ಮಾಡುತ್ತಾರೆ. ಆದರೆ ಇವು ಹಾಕಿದ ಎರಡು ದಿವಸಗಳಲ್ಲಿಯೇ ಸುಟ್ಟು ಹೋಗುತ್ತಿವೆ. ಮೊನ್ನೆ ನಮ್ಮ ತಾಲ್ಲೂಕ್‌ಗೆ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ಬಂದು ಒಂದು ಮೋಟಾರ್‌ನ ಸ್ವಿಚ್‌ನ್ನು ಆನ್ ಮಾಡಿ ಬಂದರು,

ಆದರೆ ಅದರ ಮೂರನೇದಿವಸವೇ ಅದು ಕೆಟ್ಟುಹೋಯಿತು. ಆದ್ದರಿಂದ ಈ ಹೆಸರುಗಳ ಮೋಟಾರ್‌ಗಳಿಗೆ ಬದಲು Kolva Waterman, Atlanta ಎಂಬ ಹೆಸರುಗಳ ಮೋಟಾರ್‌ಗಳನ್ನು ಖರೀದಿ ಮಾಡಿದರೆ ಅವು ಹೆಚ್ಚಿನ ಕಾಲ ಬಾಳಿಕೆ ಬರುತ್ತವೆ, ಇದಕ್ಕೆ ಹೆಚ್ಚು ಹಣ ಖರ್ಚಾದರೂ ಸರಿಯೇ, ಇವುಗಳನ್ನೇ ಖರೀದಿ ಮಾಡಲು ಸರ್ಕಾರ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಎನ್.ಆರ್.ಇ.ಪಿ. ಮೂಲಕ ಹಳ್ಳಿಗಳಲ್ಲಿ ಏನು ಕೆಲಸಗಳನ್ನು ಮಾಡಿಸಲಾಗುತ್ತಿದೆ, ಆ ಕೆಲಸಗಳು ಬಹಳ ಕಳಪೆಯಿಂದ ಕೂಡಿವೆ. ಆದ್ಯತೆಮೇರೆಗೆ ತೆಗೆದುಕೊಳ್ಳುತ್ತಿರುವ ಈ ಕೆಲಸಗಳ ಬಗ್ಗೆ ಕ್ವಾಲಿಟಿ ಕಂಟ್ರೋಲ್ ಎಂಬುದು ಇಲ್ಲವಾಗಿದೆ. ಇನ್ನು ಮುಂದೆ ಈ ಕೆಲಸಗಳ ಕ್ವಾಲಿಟಿ ಕಂಟ್ರೋಲ್ ಬಗ್ಗೆ ಸಹ ಹೆಚ್ಚಿನ ಗಮನ ನೀಡಬೇಕೆಂದು ಸಲಹೆ ಮಾಡುತ್ತೇನೆ. ಈಗ ಈ ಕೆಲಸಗಳನ್ನು ನೋಡಿಕೊಳ್ಳಲು ಕೇವಲ ಒಬ್ಬರು ಮಾತ್ರ ಜೂನಿಯರ್ ಇಂಜಿನಿಯರ್ ಇದ್ದಾರೆ, ಇವರು ನೂರಾರು ಹಳ್ಳಿಗಳಿಗೆ ಹೋಗಿ ಕೆಲಸಗಳು ಸರಿಯಾಗಿ ನಡೆಯುತ್ತಿವೆಯೋ ಎಂದು ನೋಡುವುದಕ್ಕಾಗುವುದಿಲ್ಲ. ಆದ್ದರಿಂದ ಹೆಚ್ಚಿನ . ಸಂಖ್ಯೆಯಲ್ಲಿ ಜೂನಿಯರ್ ಇಂಜಿನಿಯರ್‌ಗಳನ್ನು ನೇಮಕ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಈಗ ಎನ್.ಆರ್.ಇ ಪಿ. ಮೂಲಕ ಪ್ರಾಥಮಿಕ ಶಾಲಾ ಕಟ್ಟಡಗಳ ಕೆಲಸಗಳನ್ನು ಸಹ ಮಾಡಿಸಲಾಗುತ್ತಿದೆ. ಒಂದು ಶಾಲಾ ಕೊಠಡಿಯ ಕೆಲಸ ಕೇವಲ ೨೦ ಸಾವಿರ ರೂಪಾಯಿಗಳಲ್ಲಿ ಮುಗಿಯಬೇಕೆಂದು ಸೀಲಿಂಗ್ ಫಿಕ್ಸ್ ಮಾಡಿದ್ದಾರೆ. ಬೇರೆ ಕೆಲಸಗಳಿಗಾದರೆ, ಅದರ ಎಸ್ಟಿಮೇಟ್‌ನಲ್ಲಿ ಹೇಳಿರುವಷ್ಟು ಹಣವನ್ನು ಒದಗಿಸುವಾಗ ಇದಕ್ಕೆ ಮಾತ್ರ ಸೀಲಿಂಗ್ ಫಿಕ್ಸ್ ಮಾಡಲು ಕಾರಣ ಏನು? ಎಲ್ಲ ಸಾಮಾನುಗಳ ಬೆಲೆ ಹೆಚ್ಚಿರುವಾಗ ಕೇವಲ ಇಪ್ಪತ್ತು ಸಾವಿರ ರೂಪಾಯಿಗಳಲ್ಲಿ ಒಂದು ಶಾಲಾ ಕೊಠಡಿಯ ಕೆಲಸವನ್ನು ಮಾಡಿ ಮುಗಿಸುವುದಕ್ಕಾಗುವುದಿಲ್ಲ. ಈ ಹಣದಲ್ಲಿ ಶೇಕಡಾ ಹತ್ತು ಹದಿನೈದರಷ್ಟು ಹಣವನ್ನು ಜೂನಿಯರ್ ಇಂಜಿನಿಯರ್ ಅವರೇ ತಿಂದಿರುತ್ತಾರೆ. ಆದ್ದರಿಂದ ಕೆಲಸ ಚೆನ್ನಾಗಿ ಆಗುತ್ತಿಲ್ಲ. ಕೆಲಸ ಚೆನ್ನಾಗಿ ಆಗಬೇಕಾದರೆ ೨೦ ಸಾವಿರಕ್ಕೆ ಬದಲು ೩೦ ಸಾವಿರ ರೂಪಾಯಿಗಳನ್ನು ಒದಗಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಎನ್.ಆರ್.ಇ.ಪಿ. ಯೋಜನೆಯ ಅಡಿಯಲ್ಲಿ ಹಳ್ಳಿಗಾಡಿನ ಪ್ರದೇಶಗಳಲ್ಲಿ ಹೆಣ್ಣುಮಕ್ಕಳು ಬಹಿರ್ದೆಸೆಗೆ ಹೋಗಲು ಅಗತ್ಯವಾದ ಲೆಟ್ರಿನ್‌ಗಳನ್ನು ಕಟ್ಟಿಸಬೇಕು. ಇವುಗಳ ವ್ಯವಸ್ಥೆ ಇಲ್ಲದ ಕಾರಣದಿಂದ ಹಳ್ಳಿಗಾಡಿನ ಹೆಣ್ಣುಮಕ್ಕಳ ಪರಿಸ್ಥಿತಿ ಬಹಳ ಶೋಚನೀಯವಾಗಿದೆ, ಆದಕಾರಣ ಇದಕ್ಕಾಗಿ ಪ್ರತ್ಯೇಕವಾಗಿ ಹಣವನ್ನು ಮೀಸಲಿಟ್ಟು ಎಲ್ಲ ಹಳ್ಳಿಗಳಲ್ಲಿಯೂ ಲೆಟ್ರಿನ್‌ಗಳನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹಳ್ಳಿಗಳಲ್ಲಿ ಒಕ್ಕಲುತನಕ್ಕೆ ಅಗತ್ಯವಾದ ಕಣಗಳನ್ನು ಜಾಸ್ತಿ ಮಾಡುವುದು ಒಳ್ಳೆಯದು. ಈಗ ಶಿವಮೊಗ್ಗದಲ್ಲಿ ಎರಡು ಕಡೆ ಮಾಡಿದ್ದಾರೆ. ಎನ್ ಆರ್.ಇ.ಪಿ. ಮೂಲಕ ರಾಜ್ಯದ ಎಲ್ಲ ಹಳ್ಳಿಗಳಲ್ಲಿಯೂ ಕಣಗಳ ವ್ಯವಸ್ಥೆ ಮಾಡಬೇಕು. ಈಗ ಹಳ್ಳಿಗಳಲ್ಲಿ ಈ ವ್ಯವಸ್ಥೆಯಿಲ್ಲದ ಕಾರಣ ರೈತರು ರಸ್ತೆಗಳ ಮೇಲೆ ತಮ್ಮ ಧಾನ್ಯಗಳನ್ನು ಹರಡಿರುತ್ತಾರೆ. ಬೇರೆ ಕಡೆಗಳಲ್ಲಿ ಕಾಮನ್ ಪ್ರೆಸಿಂಗ್ ಸೆಂಟರ್‌ಗಳನ್ನು ತೆರೆಯಲು ಕೈಗಾರಿಕಾ ಇಲಾಖೆಯವರು ಸಹಾಯ ಮಾಡುತ್ತಿರುವ ರೀತಿಯಲ್ಲಿಯೇ ಎನ್.ಆರ್.ಇ.ಪಿ. ಕೆಳಗೆ ಈ ಸೆಂಟರ್‌ಗಳನ್ನು ಹಳ್ಳಿಗಳಲ್ಲಿ ತೆರೆಯಲು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪ್ರತಿ ತಾಲ್ಲೂಕ್ ಮಟ್ಟದಲ್ಲಿ ನೂರು ಭಾವಿಗಳನ್ನು ತೆಗೆಸಲು ಹಾಕಿಕೊಂಡಿರುವ ಕಾರ್ಯಕ್ರಮದ ಬಗ್ಗೆ ಸಾಕಷ್ಟು ಪ್ರಗತಿ ಆಗಿಲ್ಲ. ಇದಕ್ಕೆ ಸರ್ಕಾರದವರು ಸಬ್ಸಿಡಿ ಹಣ ಕೊಟ್ಟರೂ ಸಹ ಸಾಲದ ರೂಪದಲ್ಲಿ ಬ್ಯಾಂಕ್‌ನವರು ಹಣವನ್ನು ಸಕಾಲದಲ್ಲಿ ಕೊಡುತ್ತಿಲ್ಲ. ಇದರಿಂದ ರೈತರು ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಅರ್ಜಿ ಹಾಕಿದವರಿಗೆ ಕೂಡಲೇ ಸಾಲ ಮಂಜೂರು ಮಾಡಬೇಕೆಂದು ಸರ್ಕಾರದವರು ಎಲ್ಲ ಬ್ಯಾಂಕ್‌ನವರಿಗೆ ಕಟ್ಟುನಿಟ್ಟಾದ ಆದೇಶವನ್ನು ಕೊಡಬೇಕು. ಬಾವಿ ತೆಗೆಸಿದವರು ಪಂಪ್‌ಸೆಟ್ಟುಗಳನ್ನು ಅಳವಡಿಸಿದಮೇಲೆ ವಿದ್ಯುತ್ ಪೂರೈಕೆಯನ್ನು ವಿದ್ಯುಚ್ಛಕ್ತಿ ಮಂಡಳಿಯವರು ಸಕಾಲದಲ್ಲಿ ಮಾಡುತ್ತಿಲ್ಲ. ಕರೆಂಟ್‌ಗಾಗಿ ಕೆಲವರು ವರ್ಷಗಟ್ಟಲೆ ಕಾಯಬೇಕಾಗಿದೆ. ಇದಕ್ಕೆ ಕಾರಣ ಕೇಳಿದರೆ, ನಾವು ಈಗಾಗಲೇ ಟಾರ್ಗೆಟ್ ಮುಟ್ಟಿದ್ದೇವೆಂದು ವಿದ್ಯುತ್ ಮಂಡಲಿಯವರು ಹೇಳುತ್ತಾರೆ. ಇದು ಸರಿಯಲ್ಲ. ಕೇಳಿದವರಿಗೆಲ್ಲಾ ಕರೆಂಟ್ ಕೊಡುವ ವ್ಯವಸ್ಥೆ ಮಾಡಬೇಕು. ಈ ನೂರು ಬಾವಿಗಳ ಯೋಜನೆ ಎಲ್ಲ ಕಡೆ ಯಶಸ್ವಿಯಾಗಿ ಬರಬೇಕಾದರೆ ಸರ್ಕಾರದವರು ಸಬ್-ಡಿವಿಜನ್ ಮಟ್ಟದಲ್ಲಿ

ಜಿಯಾಲಾಜಿಸ್ಟ್‌ಗಳನ್ನು ನೇಮಕ ಮಾಡಬೇಕು. ರೈತರಿಗೆ ಇವರ ಸಹಾಯ ಸಿಗಬೇಕಾದರೆ ಪ್ರತಿ ಸಬ್-ಡಿವಿಜನ್ ಮಟ್ಟದಲ್ಲಿ ಒಬ್ಬರು ಸೀನಿಯರ್ ಜಿಯಾಲಾಜಿಸ್ಟ್‌ನ್ನು ನೇಮಕ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಈಗ ನಮ್ಮಲ್ಲಿ ವಿದ್ಯುತ್ ಕೊರತೆ ಇರುವ ಕಾರಣದಿಂದ ಸರ್ಕಾರದವರು ವಿಂಡ್-ಮಿಲ್ಸ್ ಸ್ಥಾಪಿಸಲು ಪ್ರೋತ್ಸಾಹ ಕೊಡಬೇಕು. ಪಶ್ಚಿಮ ಬಂಗಾಳ, ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿನ ಪ್ರತಿ ತಾಲ್ಲೂಕ್‌ನಲ್ಲಿಯೂ ನಾವು ಇಂತಹ ಗಾಳಿ ಯಂತ್ರಗಳನ್ನು ನೋಡಬಹುದಾಗಿದೆ. ಈಗ ನಮ್ಮ ರಾಜ್ಯದಲ್ಲಿ ಬಿಜಾಪುರದಲ್ಲಿ ಒಂದು ಕಡೆ ಸ್ಥಾಪನೆಯಾಗುತ್ತಿದೆ ಇದು ಸಾಲದು. ಎಲ್ಲ ಕಡೆಗಳಲ್ಲಿಯೂ ಇವುಗಳನ್ನು ಸ್ಥಾಪಿಸಲು ಪ್ರೋತ್ಸಾಹ ಕೊಡಬೇಕು.

ಅಧ್ಯಕ್ಷರು.—ರಾಯರೆಡ್ಡಿಯವರೇ, ನೀವು ಈಗ ಮುಕ್ತಾಯ ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ.—ಅಧ್ಯಕ್ಷರೇ ಇನ್ನು ೫ ನಿಮಿಷಗಳಲ್ಲಿ ಮುಗಿಸಿಬಿಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಉತ್ಸಾಹದಿಂದ ಮಾತನಾಡುತ್ತಿದ್ದಾರೆ. ಇನ್ನೂ ಬಹಳ ಅವಕಾಶಗಳಿವೆ, ಬೇರೆ ಡಿಮ್ಯಾಂಡ್‌ಗಳು ಬಂದಾಗ ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು—ರೆಡ್ಡಿಯವರೇ, ತಾವು ಕೂಡ್ರಿ. ಕೂಡ್ರಿ ಅಂದರೆ ಕೂಡಬೇಕು.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅವರ ಭಾಷಣ ಆದ ಮೇಲೆ ತಮಗೆ ಧನ್ಯವಾದಗಳನ್ನು ಹೇಳುವುದಕ್ಕೂ ತಾವು ಬಿಡಲಿಲ್ಲವಲ್ಲಾ.

ಅಧ್ಯಕ್ಷರು.—ನಾನೇ ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ದಯವಿಟ್ಟು ಅವರು ಕುಳಿತುಕೊಂಡರೆ ಸಾಕು.

ಶ್ರೀ ಬಸವರಾಜ ರಾಯರೆಡ್ಡಿ.—ಅಧ್ಯಕ್ಷರೇ, ನಾವು ಮಾತನಾಡುವುದು ನಿಮಗೆ ಅಲರ್ಜಿಯಾದರೆ ಹೇಳಿಬಿಡಿ. ನಾವು ಸಭೆಯಿಂದ ಹೊರಗೆ ಹೊರಟು ಹೋಗುತ್ತೇವೆ.

ಅಧ್ಯಕ್ಷರು.—ಯಾವ ವಿಷಯದ ಮೇಲೆ ಯಾರು ಯಾರು ಎಷ್ಟು ನಿಮಿಷ ಮಾತನಾಡಬೇಕೆಂದು ಅವಕಾಶ ಕೊಡುವ ಜವಾಬ್ದಾರಿ ನನಗಿದೆ. ಅದರ ಪ್ರಕಾರ ಅವಕಾಶ ಕೊಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ.—ನಾನು ತಮ್ಮ ಮಾತನ್ನು ಮೀರುವುದಿಲ್ಲ. ೨ ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಮುಗಿಸುತ್ತೇನೆ ಎಂದರೆ ಮುಗಿಸಿಯೇ ಬಿಡುತ್ತೇನೆ. ಇಷ್ಟು ಹೊತ್ತು ನಿಮ್ಮ ಜೊತೆ ವಾದ ಮಾಡುವುದರ ಬದಲಿಗೆ ನನ್ನ ಮಾತುಗಳನ್ನೇ ಮುಗಿಸಿಬಿಡುತ್ತಿದ್ದೆ. ನಾನು ಸ್ವಲ್ಪ ಡಿ.ಪಿ.ಎ.ಪಿ. ಬಗ್ಗೆ ಮಾತನಾಡಬೇಕಾಗಿತ್ತು.

ಅಧ್ಯಕ್ಷರು.—ನಾನೇ ನಿಮಗೆ ಧನ್ಯವಾದಗಳನ್ನು ಹೇಳಿಬಿಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ.—ಮಾನ್ಯ ಅಧ್ಯಕ್ಷರೇ, ತಾವು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸುತ್ತೇನೆ.

ಅಧ್ಯಕ್ಷರು.—ನೀವು ಇನ್ನೂ ಹೊಸಬರು. ಇದೆಲ್ಲಾ ನಿಮಗೆ ಗೊತ್ತಾಗುವುದಿಲ್ಲ.

ಶ್ರೀ ಯು. ಭೂಪತಿ (ಸಂಡೂರ್).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಈ ದಿನ ಎರಡು ಇಲಾಖೆಗಳ ಬೇಡಿಕೆಗಳನ್ನು ಒಮ್ಮೆಗೆ ಚರ್ಚೆಗೆ ಇಟ್ಟು, ಚರ್ಚೆಯು ಇವತ್ತೇ ಮುಗಿದು ಅದಕ್ಕೆ ಉತ್ತರವೂ ಇಂದೇ ಆಗಬೇಕು ಎನ್ನುವ ರೀತಿಯಲ್ಲಿ ತೀರ್ಮಾನ ಮಾಡಿ ನನಗೆ ತಾವು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಮೊದಲನೆಯದಾಗಿ ಸಹಕಾರ ಇಲಾಖೆ ಬಗ್ಗೆ ಹೇಳುವುದಾದರೆ, ಸಹಕಾರ ಮಂತ್ರಿಯವರಾದ ಶ್ರೀಮಾನ್ ಜಾಲಪ್ಪನವರು ಇಲ್ಲಿ ಕೊಟ್ಟಿರತಕ್ಕಂಥ ಸಹಕಾರ ಇಲಾಖೆಯ ವಾರ್ಷಿಕ ವರದಿಯಲ್ಲಿ ಸಹಕಾರ ಕ್ಷೇತ್ರದ ಚಟುವಟಿಕೆಗಳನ್ನು ಬಹಳ ಅಭಿವೃದ್ಧಿಪಡಿಸಬೇಕು ಎನ್ನತಕ್ಕ ಬಗ್ಗೆ ಅತ್ಯಂತ ಹೆಚ್ಚಿನ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇವರ ಈ ಹಿಂದಿನ ವರದಿಯಲ್ಲಿದ್ದಂಥ ಕಾಳಜಿ ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬಂದಿದೆ ಎಂದು ಹೇಳಿಲ್ಲವೆಂಬುದು ಈ ವರದಿಯನ್ನು ನೋಡಿದಾಗ ಅರ್ಥವಾಗುತ್ತದೆ. ೧೯೮೪-೮೫ನೇ ಸಾಲಿನ ಸಹಕಾರ ಇಲಾಖೆಯ ಶೀರ್ಷಿಕವಾರು ಅಂದರೆ ೩೧-೧೨-೧೯೮೫ರಿಂದ ನಿಗದಿಯಾಗಿರತಕ್ಕಂಥ ಮೊತ್ತ ಹಾಗು ಖರ್ಚಾಗಿರತಕ್ಕಂಥ ಮೊತ್ತವನ್ನು

ಒಂದಕ್ಕೊಂದು ಹೋಲಿಸಿದರೆ, ಉಳಿದ ಹಣ ಎಲ್ಲಿಗೆ ಹೋಯಿತು ಅಥವಾ ಅದು ಯಾವಾಗ ಖರ್ಚಾಗುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಕೇಂದ್ರ ನಿರೂಪಿತ ಯೋಜನೆಗಳಿಗೆ ೧೯೮೫-೮೬ನೇ ಸಾಲಿನಲ್ಲಿ ೧, ಸಾವಿರದ ೮೦೬.೮೪ ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದರೆ, ಖರ್ಚಾಗಿರತಕ್ಕಂಥಾದ್ದು ೩೩೭.೦೫ ಲಕ್ಷ ರೂಪಾಯಿಗಳು ಮಾತ್ರ, ಇದರಲ್ಲಿ ಉಳಿದಂಥ ೧ ಸಾವಿರದ ೪೬೯ ಲಕ್ಷ ರೂಪಾಯಿಗಳ ಲೆಕ್ಕ ಏನಾಯಿತು ? ಅದು ಯಾವಾಗ ಖರ್ಚಾಗುತ್ತದೆ ? ಹೇಗೆ ಖರ್ಚಾಗುತ್ತದೆ ಎನ್ನತಕ್ಕ ವಿವರ ಇದರಲ್ಲಿ ಇಲ್ಲ. ಅದೇ ರೀತಿಯಾಗಿ ಬೇರೆ ಬೇರೆ ಶೀರ್ಷಿಕೆಗಳನ್ನು ತೆಗೆದುಕೊಂಡಾಗ, ಅದರಲ್ಲೂ ಮುಖ್ಯವಾಗಿ, ರೈತರಿಗೆ ಕೊಟ್ಟಂಥ ಸಾಲದ ವಿಚಾರ ಹೇಳುವುದಾದರೆ, ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ ಮತ್ತು ದೀರ್ಘಾವಧಿ ಸಾಲಗಳನ್ನು ಲೆಕ್ಕ ಹಾಕಿದರೆ, ಅದರಲ್ಲಿ ಹೆಚ್ಚು ಸಾಲ ದೊಡ್ಡ ರೈತರಿಗೇ ಮುಟ್ಟಿದೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಒಟ್ಟು ಕೊಟ್ಟಿರತಕ್ಕ ಸಾಲದಲ್ಲಿ ಒಂದನೇ ಮೂರು ಭಾಗದಷ್ಟು ಅಂಶ ದೊಡ್ಡ ರೈತರಿಗೆ ಮುಟ್ಟಿದೆಯೆಂಬ ಅಂಶ ಈ ಅಂಕಿ ಅಂಶಗಳನ್ನು ನೋಡಿದಾಗ ಗೊತ್ತಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಅಲ್ಪಾವಧಿ ಸಾಲದಲ್ಲಿ ಸುಮಾರು ೧೩ ಸಾವಿರ ಲಕ್ಷ ಗುರಿ ಇದ್ದರೆ ಅದರಲ್ಲಿ ಒಟ್ಟು ೯ ಸಾವಿರದ ೨೫೦ ಲಕ್ಷ ಸಾಲವಾಗಿ ಕೊಟ್ಟಿದ್ದಾರೆ. ಈ ೯ ಸಾವಿರದ ೨೫೦ ಲಕ್ಷ ರೂಪಾಯಿಗಳಲ್ಲಿ ೩ ಸಾವಿರದ ೩೯೭ ಲಕ್ಷ ಮಾತ್ರ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಾಲವಾಗಿ ಸಿಕ್ಕಿದೆ. ಅಂದರೆ ೨ನೇ ೩ ಅಂಶದಷ್ಟು ಸಾಲ ದೊಡ್ಡ ರೈತರಿಗೇ ಹೋಗಿದೆ. ಮಧ್ಯಮಾವಧಿ ಸಾಲದ ಗುರಿ ೧೫ ನೂರು ಲಕ್ಷ ಇದ್ದರೆ, ೪೧೪ ಲಕ್ಷ ರೂ. ಗಳನ್ನು ಮಾತ್ರ ಸಾಲವಾಗಿ ಕೊಟ್ಟಿದ್ದಾರೆ. ಈ ಒಟ್ಟು ಸಾಲದಲ್ಲಿ ೧೫೬ ಲಕ್ಷ ರೂಪಾಯಿಗಳ ಸಾಲ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಿಕ್ಕಿದೆ. ಉಳಿದದ್ದು ದೊಡ್ಡ ರೈತರಿಗೇ ಸೇರಿದೆ. ದೀರ್ಘಾವಧಿ ಸಾಲದ ಗುರಿ ೪೧ ಸಾವಿರ ಲಕ್ಷ ಅದರಲ್ಲಿ ೩ ಸಾವಿರದ ೩೨೭ ಲಕ್ಷ ರೂಪಾಯಿಗಳ ಸಾಲ ವಿತರಣೆಯಾಗಿದೆ. ಇದರೊಳಗೆ ೧ ಸಾವಿರದ ೮೦೭ ಲಕ್ಷ ರೂಪಾಯಿಗಳು ಮಾತ್ರ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಾಲವಾಗಿ ಕೊಟ್ಟಿದ್ದಾರೆ. ಇದರಿಂದ ಏನು ಅರ್ಥವಾಗುತ್ತದೆ ಎಂದರೆ, ಸಣ್ಣ ಮತ್ತು ಅತಿ ಸಣ್ಣ ರೈತರ ಹೆಸರಿನಲ್ಲಿ ದೊಡ್ಡ ರೈತರು ಮಜಾ ಮಾಡತಕ್ಕ ಪರಿಸ್ಥಿತಿ ಈ ಸರ್ಕಾರದ ಆಡಳಿತದಲ್ಲಿ ಉದ್ಭವವಾಗಿದೆ. ಅದೇ ರೀತಿ ವಸೂಲಿ ವಿಷಯದಲ್ಲಿ ನೋಡಿದರೆ, ಶೇಕಡಾ ೧.೪೯ ಇಳಿಮುಖವಾಗಿದೆ. ೧೯೮೪-೮೫ಕ್ಕೆ ಹೋಲಿಸಿದರೆ ಇನ್ನೂ ಕಡಿಮೆ. ೧೯೮೪-೮೫ರಲ್ಲಿ ರಾಜ್ಯದಲ್ಲಿ ಬರಗಾಲ ಬಂದಿದೆ. ಆದರಿಂದ ಸಾಲ ಸರಿಯಾಗಿ ವಸೂಲಿಯಾಗಲಿಲ್ಲವೆಂದು ನಾವು ತಿಳಿದು ಕೊಳ್ಳಬಹುದು. ಬರಗಾಲದ ಪರಿಸ್ಥಿತಿಯಿಂದ ಸಣ್ಣ ಮತ್ತು ಅತಿ ಸಣ್ಣ ರೈತರಿಂದ ಸಾಲವನ್ನು ವಸೂಲಿ ಮಾಡುವುದಕ್ಕಾಗುವುದಿಲ್ಲ. ಆದರೆ ಬರಗಾಲ ಇದೆ ಎಂದು ದೊಡ್ಡ ರೈತರಿಂದ ಬರಬೇಕಾದ ಸಾಲವನ್ನು ವಸೂಲಿ ಮಾಡದೇ ಇರುವುದು ಸರಿಯಲ್ಲ. ದೊಡ್ಡ ರೈತರೇ ಬ್ಯಾಂಕುಗಳಿಗೆ ಸಹ ಡಿಫಾಲ್ಟರ್ಸ್ ಆಗಿದ್ದಾರೆ. ಇಂತಹವರ ಮೇಲೆ ಕರುಣೆ ತೋರಿಸದೆ ಸಾಲವನ್ನು ವಸೂಲಿ ಮಾಡಬೇಕು. ಸಾಲ ಸರಿಯಾಗಿ ರಿಕವರಿ ಆಗದೇ ಇರುವುದಕ್ಕೆ ಕಾರಣ ಈ ದೊಡ್ಡ ರೈತರಿಂದ ವಸೂಲಿ ಮಾಡದೇ ಇರುವುದೇ ಆಗಿದೆ. ಇಲ್ಲಿ ದೊಡ್ಡ ರೈತರಿಗೆ ಕರುಣೆ ತೋರಿಸುವ ಅವಶ್ಯಕತೆ ಇಲ್ಲ. ದೊಡ್ಡ ರೈತರಿಂದ ಸಾಲ ವಸೂಲಿ ಮಾಡುವುದಕ್ಕಾಗಿಲ್ಲ ಎನ್ನುವ ವಿಷಯವನ್ನು ಸರ್ಕಾರ ಮರೆಮಾಚುವುದಕ್ಕೆ ಹೋಗಬಾರದೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಅದೇ ರೀತಿ ಕರ್ನಾಟಕ ರಾಜ್ಯದಲ್ಲಿ ನೂಲಿನ ಗಿರಣಿಗಳ ವಿಚಾರವನ್ನು ತೆಗೆದುಕೊಂಡರೆ, ಎಲ್ಲಾ ನೂಲಿನ ಗಿರಣಿಗಳ ಆದಾಯವು ಮೈನಸ್ ಆಗಿದೆಯೋ ಹೊರತು ಪ್ಲಸ್ ಒಂದೂ ಸಹ ಇಲ್ಲ. ಎಲ್ಲಾ ನೂಲಿನ ಗಿರಣಿಗಳು ನಷ್ಟದಲ್ಲಿ ನಡೆಯುವುದಕ್ಕೆ ಕಾರಣ ಏನು ? ನೂಲಿನ ಗಿರಣಿಗಳಲ್ಲಿರುವ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಸರ್ಕಾರ ಏಕೆ ಗಮನ ಹರಿಸಿಲ್ಲ ? ಲಕ್ಷಾಂತರ ರೂಪಾಯಿಗಳು ಇಲ್ಲವೇ ಕೋಟ್ಯಾಂತರ ರೂಪಾಯಿಗಳನ್ನು ನೂಲಿನ ಗಿರಣಿಗಳ ಮೇಲೆ ಬಂಡವಾಳ ಹಾಕಿರುವಾಗ.

ವರ್ಷಾನುಗಟ್ಟಲೆ ನೂಲಿನ ಗಿರಣಿಗಳು ನಷ್ಟದಲ್ಲಿ ನಡೆಯುತ್ತವೆ ಎಂದು ತಾವು ಹೇಳುವುದಾದರೆ ಒಂದ ಮಾತನ್ನು ತಮ್ಮನ್ನು ಕೇಳ ಬೇಕಾಗಿದೆ. ಏನೆಂದರೆ ಮಾನ್ಯ ಜಾಲಪ್ಪನವರು ಸಹಕಾರ ಮಂತ್ರಿಗಳವರಾಗಿ ಇದರ ಬಗ್ಗೆ ತಾವು ಏನು ಪ್ರಯತ್ನ ಮಾಡಿದ್ದೀರಿ ಎಂದು? ಮತ್ತು ಅದೇ ರೀತಿಯಲ್ಲಿ ಬಿಜಾಪುರದಲ್ಲಿರುವ ಗಿರಣಿ ೨೪-೧೦-೮೪ ರ ವರೆಗೆ ಮುಚ್ಚಲ್ಪಟ್ಟಿತು. ಅದನ್ನು ಅದು ಪುನರ್ ಆರಂಭ ಆಗಿದೆ ಎಂದು ಹೇಳಿದ್ದಾರೆ. ಇದು ಸಂತೋಷದ ವಿಚಾರ. ೨-೧೦-೮೫ರಿಂದು ಪ್ರಾರಂಭವಾದರೂ ಮತ್ತೆ ಅಲ್ಲಿ ಕಿರಿಕಿರಿ ಪ್ರಾರಂಭ ಆಗಿದೆ. ಈ ಕಿರಿಕಿರಿಯಿಂದಾಗಿ ಈಗ ಅಲ್ಲಿ ಸರಿಯಾದಂತಹ ಪರಿಸ್ಥಿತಿ ಇಲ್ಲ. ಆದುದರಿಂದ ಅಲ್ಲಿ ಆದಷ್ಟು

ಬೇಗ ಪರಿಸ್ಥಿತಿಯನ್ನು ಸರಿಪಡಿಸಿ ಸುವ್ಯವಸ್ಥಿತವಾಗಿ ನಡೆಸಬೇಕೆಂದು ತಮ್ಮ ಮೂಲಕ ಸರಕಾರವನ್ನು ಒತ್ತಾಯ ಮಾಡುತ್ತೇನೆ,

ಇನ್ನು ಗೃಹನಿರ್ಮಾಣ ಸಹಕಾರಿ ಸಂಘಗಳ ಬಗ್ಗೆ ಹೇಳುವುದಾದರೆ, ಈ ಗೃಹ ನಿರ್ಮಾಣ ಸಹಕಾರಿ ಸಂಘಗಳು, ಪಟ್ಟಣಗಳಲ್ಲಿ, ಅದರಲ್ಲಿಯೂ ಮುಖ್ಯವಾಗಿ ಬೆಂಗಳೂರಿನಲ್ಲಂತೂ ಇರುವ ಹೌಸಿಂಗ್ ಸೊಸೈಟಿಗಳನ್ನು ನೋಡಿದರೆ ಬಹಳ ದುಃಖ ಆಗುತ್ತಿದೆ. ಏಕೆಂದರೆ ಮಧ್ಯಮವರ್ಗದವರು ಹಾಗೂ ಕೆಳವರ್ಗದವರು ಒಂದು ಮನೆಯನ್ನು ಕಟ್ಟಿಕೊಳ್ಳಲು ಈ ಸಹಕಾರಿ ಸಂಘಗಳ ಮುಖಾಂತರ ಪ್ರಯತ್ನಿಸುತ್ತಾರೆ. ಆದರೆ ಅವರಿಗೆ ಜಾಗವನ್ನು ಪಡೆದುಕೊಳ್ಳುವುದು ಅಸಾಧ್ಯವಾಗುತ್ತಿದೆ. ಅವರ ಪ್ರಯತ್ನ ಸಫಲವಾಗುವುದಿಲ್ಲ. ಈ ಸಹಕಾರ ಸಂಘಗಳ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ತಿಂದು ಹಾಕತಕ್ಕಂತಹ ಜನರು, ಹುಟ್ಟಿಬೆಳೆದುಬಿಟ್ಟಿದ್ದಾರೆ. ಇದರ ಬಗ್ಗೆ ಯಾವ ಉದಾಹರಣೆಗಳನ್ನು ಕೊಡಬೇಕಾದ ಅವಶ್ಯಕತೆ ಇರಲಿಕ್ಕಿಲ್ಲ ಎಂದು ನಾನು ಭಾವಿಸುತ್ತೇನೆ. ಇಂತಹ ಸೊಸೈಟಿಗಳ ವಿಚಾರಣೆಗಾಗಿ ಸರಕಾರದವರು ಮೂರು ಜನ ಸದಸ್ಯರ ಒಂದು ಸಮಿತಿಯನ್ನು ನೇಮಕ ಮಾಡಿತ್ತು ಆ ಸಮಿತಿಯವರು ತಮ್ಮ ವರದಿಯನ್ನು ಕೊಟ್ಟಿದ್ದಾರೆ ಎಂದು ಇಲ್ಲಿ ಹೇಳಿದ್ದಾರೆ. ಹಾಗೆಯೇ ಈ ವರದಿಯು ಸರ್ಕಾರದವ ಪರಿಶೀಲನೆಯಲ್ಲಿ ಇದೆ ಎಂದು ಹೇಳಿದ್ದಾರೆ. ಮೊದಲೇ ಒಂದು ಕಟ್ಟುನಿಟ್ಟಾದ ಕ್ರಮವನ್ನು ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಿದ್ದಿದ್ದರೆ. ಬೆಂಗಳೂರು ನಗರದಲ್ಲಿ ಸಹಕಾರ ಸಂಘಗಳ ಹೆಸರಿನಲ್ಲಿ ನಡೆಯುತ್ತಿರತಕ್ಕಂತಹ ಅವ್ಯವಹಾರಗಳು ಏನಿವೆ, ಅವುಗಳನ್ನು ಎಷ್ಟು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರಲಿಲ್ಲ ಎಂದು ನನ್ನ ಅಭಿಪ್ರಾಯ. ಆದುದರಿಂದ ಈಗಲಾದರೂ ಈ ನಿಟ್ಟಿನಲ್ಲಿ ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ಈ ಗೃಹ ನಿರ್ಮಾಣ ಸಹಕಾರ ಸಂಘಗಳ ಮೇಲೆ ತೆಗೆದುಕೊಂಡು, ಅದರಲ್ಲಿರುವ ಪ್ರಭಾವಿ ವ್ಯಕ್ತಿಗಳ ಮೇಲೆ ಅವರು ಎಷ್ಟೇ ಪ್ರಭಾವಿಗಳು ಆಗಿದ್ದರೂ ಕೂಡಾ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಈ ಪ್ರಭಾವಿ ವ್ಯಕ್ತಿಗಳು ಜನಸಾಮಾನ್ಯರ ಹಣವನ್ನು ಕೊಳ್ಳೆಹೊಡೆಯುವುದನ್ನು ಮುಂದುವರಿಸುತ್ತಾರೆ. ಮಧ್ಯಮ ವರ್ಗದ ಜನರು ತಮ್ಮ ಒಂದು ನೆಲೆಗಾಗಿ ಮನೆಯ ಜಾಗವನ್ನು ಲಕ್ಷಗಟ್ಟಲೆ ಹಣ ಕೊಟ್ಟು ಪಡೆಯುವುದಕ್ಕೆ ಕಷ್ಟ ಎಂದು ತಿಳಿದು ಸಹಕಾರಿ ಸಂಘಗಳ ಮೊರೆ ಹೋದರೆ ಅವರಿಗೆ ಇಲ್ಲಿ ಈ ವ್ಯಕ್ತಿಗಳು ಮೋಸವನ್ನು ಮಾಡುತ್ತಾರೆ. ಇದರಿಂದ ಈ ಮಧ್ಯಮ ವರ್ಗದ ಜನ ಮನೆ ಕಟ್ಟಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದುದರಿಂದ ಈ ಗೃಹನಿರ್ಮಾಣ ಸಹಕಾರ ಸಂಘಗಳ ಆಡಳಿತದ ಮೇಲೆ ಒಂದು ಸಂಪೂರ್ಣ ಹಿಡಿತವನ್ನು ಇಡಬೇಕು. ಈ ಸಂಸ್ಥೆಗಳ ಬಗ್ಗೆ ರಿಪೇರಿ ಕಾರ್ಯವನ್ನು ಸಂಪೂರ್ಣವಾಗಿ ಮಾಡಬೇಕು. ಈ ಕಾರ್ಯವನ್ನು ಮಾನ್ಯ ಸಹಕಾರ ಸಚಿವರು ಮಾಡುತ್ತಾರೆ ಎಂದು ನಾನು ನಂಬಿದ್ದೇನೆ. ಇವೊತ್ತು ಇಂತಹ ಸಹಕಾರಿ ಸಂಘಗಳಲ್ಲಿ ಬಹಳ ದೊಡ್ಡ ದೊಡ್ಡ ಪ್ರಭಾವಿ ವ್ಯಕ್ತಿಗಳು ಇನ್‌ವಾಲ್ವ್ ಆಗಿದ್ದಾರೆ. ಬೆಂಗಳೂರು ನಗರದಲ್ಲಿ ಇಂತಹ ಉದಾಹರಣೆಗಳು ಬೇಕಾದಷ್ಟು ಇವೆ. ಇದನ್ನೆಲ್ಲಾ ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹರಿಜನ ಗಿರಿಜನರಿಗೆ ಮಂಜೂರಾಗಿರುವ ೨೨,೬೯೯ ಮನೆಗಳ ಪೈಕಿ, ೧೬,೩೪೫ ಮನೆಗಳು ಮಾತ್ರ ಪೂರ್ಣವಾಗಿದ್ದು ಉಳಿದಂತಹ ಮನೆಗಳು ಯಾವಾಗ ಪೂರ್ಣಗೊಳ್ಳುತ್ತವೆ ಎಂಬ ಬಗ್ಗೆ ಹೇಳಿಲ್ಲ. ಆದುದರಿಂದ ಯಾವ ಅವಧಿಯಲ್ಲಿ ಈ ಕಾರ್ಯಕ್ರಮವನ್ನು ಪೂರ್ಣಗೊಳಿಸುತ್ತೀರಿ ಎಂದು ಹೇಳಿದರೆ ನಮಗೆ ಸಮಾಧಾನವಾಗುತ್ತದೆ.

ಇನ್ನು ಕೂಲಿಗಾರರ ಸಹಕಾರ ಸಂಘಗಳ ಬಗ್ಗೆ ಇದರಲ್ಲಿ ಹೇಳಿದ್ದೀರಿ ಇಂತಹ ಸಂಘಗಳು ಉನ್ನತ ಮಟ್ಟಕ್ಕೆ ಹೋಗಬೇಕೆಂಬುದು ನಿಮ್ಮ ಹೇಳಿಕೆಯಲ್ಲಿದೆ. ಆದರೆ ಇದಕ್ಕೆ ೧೯೮೬-೮೭ನೇ ಸಾಲಿಗೆ ಕೊಟ್ಟಿರತಕ್ಕಂತಹ ಹಣ ೧.೧೬ ಲಕ್ಷ ರೂಪಾಯಿಗಳು ಮಾತ್ರ. ಹಾಗೆಯೇ ಇದಕ್ಕೆ ನಿಗದಿ ಮಾಡಿರತಕ್ಕಂತಹ ಹಣವನ್ನು ಪೂರ್ತಿ ಇದುವರೆಗೆ ಖರ್ಚು ಮಾಡಿಲ್ಲ. ತಾವುಗಳು ಖರ್ಚು ಮಾಡಿರತಕ್ಕಂತಾದ್ದು ೧.೪೮ ಲಕ್ಷ ರೂ.ಗಳು ಮಾತ್ರ. ಇದರಿಂದ ತಾವುಗಳು ಯಾವ ಕೂಲಿಕಾರರನ್ನು ಉದ್ಧಾರ ಮಾಡುತ್ತೀರಿ ಸ್ವಾಮಿ? ಅವರ ಬಗ್ಗೆ ಕಾಳಜಿಯನ್ನು ವಹಿಸಿದ ಮೇಲೆ ಅವರಿಗಾಗಿ ಸರಿಯಾದ ಮೊತ್ತವನ್ನು ಕೊಡಬೇಕು.

ಹಾಗೆಯೇ ವಿಶೇಷ ಘಟಕ ಯೋಜನೆಗೆ ೧೯೮೫-೮೬ರ ಸಾಲಿಗೆ ರೂ. ೧೨೧.೯೧ ಲಕ್ಷ ರೂ.ಗಳನ್ನು ಮಂಜೂರು ಮಾಡಿದ್ದು ಅದರಲ್ಲಿ ೩೧-೧೨-೧೯೮೫ರ ವರೆಗೆ ಖರ್ಚು ಮಾಡಿರತಕ್ಕಂತದ್ದು ಕೇವಲ, ೬೦.೪೫ ಲಕ್ಷ ರೂ.ಗಳು ಮಾತ್ರ. ಉಳಿದುದನ್ನು ಏಕೆ ಖರ್ಚು ಮಾಡಲಿಲ್ಲ? ಈ ವಿಶೇಷ ಘಟಕ

ಯೋಜನೆಯಿಂದ ಜನರಿಗೆ ಉಪಯೋಗ ಆಗುತ್ತದೆ ಎಂದು ಹೇಳಿದಂತಹ ಸರಕಾರ ನಿಗದಿ ಮಾಡಿದ ಹಣವನ್ನು ಖರ್ಚು ಮಾಡದಿದ್ದರೆ ಜನರಿಗೆ ಉಪಯೋಗ ಹೇಗೆ ಆಗುವುದಕ್ಕೆ ಸಾಧ್ಯ ಎಂದು ಕೇಳುತ್ತಿದ್ದೇನೆ? ಈಗ ೧೨೧ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುವ ನೀವು ೧೯೮೬-೮೭ನೇ ಸಾಲಿಗೆ ೨೦೦ ಲಕ್ಷ ರೂ.ಗಳನ್ನು ನಿಗದಿ ಮಾಡಿರುವುದನ್ನು ನೋಡಿದರೆ, ಇದರಲ್ಲಿ ಅರ್ಧದಷ್ಟು ಮೊತ್ತವನ್ನು ಖರ್ಚು ಮಾಡುತ್ತೀರೋ ಇಲ್ಲವೋ ಎಂದು ಸಂಶಯ ಆಗುತ್ತದೆ.

ಅದೇ ರೀತಿಯಲ್ಲಿ ಸಿ.ಸಿ.ಎ. ಆಕ್ಷನ್‌ನ್ನು ಚಾಲೆಂಜ್ ಮಾಡಿ ಹೈಕೋರ್ಟಿಗೆ ಅಪೀಲ್ ಹೋಗಿದ್ದಾರೆ. ಜನವರಿ ತಿಂಗಳಲ್ಲಿ ಬೆಂಗಳೂರು ಹೈಕೋರ್ಟ್‌ನವರು ಈ ಬಗ್ಗೆ ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ನ್ಯಾಯಮೂರ್ತಿಗಳಾದ ಶ್ರೀ ರಾಮ ಜೋಯಿಸ್‌ರವರು ಜಡ್ಜ್‌ಮೆಂಟ್ ಕೊಟ್ಟ ಮೇಲೆ ಸರಕಾರವು ಅದರ ಮೇಲೆ ಅಪೀಲ್ ಹೋಗಿತ್ತು. ರೆಸ್ಪಾಂಡೆಂಟ್ ರಿಜಿಸ್ಟ್ರಾರ್ ಎಂದು ಅದರಲ್ಲಿ ಹಾಕಿದ್ದಾರೆ. ಸಿ.ಸಿ.ಎ. ಆಕ್ಷನ್‌ನ್ನು ಚಾಲೆಂಜ್ ಮಾಡಿ ಹೈಕೋರ್ಟಿಗೆ ಹೋದಾಗ ಅಲ್ಲಿ ಸಿಂಗಲ್ ಜಡ್ಜ್ ತೀರ್ಮಾನ ಕೊಟ್ಟ ಮೇಲೆ ಅಪೀಲ್ ಹೋಗುವುದಕ್ಕೆ ಇಲ್ಲಿ ಗ್ಯಾಪ್ ಆಯಿತು. ಡಿವಿಜನ್ ಬೆಂಚ್‌ನವರು ಜಡ್ಜ್‌ಮೆಂಟ್‌ನಲ್ಲಿ ಅದನ್ನು ಕ್ರಿಟಿಸೈಸ್ ಮಾಡಿದ್ದಾರೆ. ಅದರಲ್ಲಿ ಏನು ಹೇಳುತ್ತಾರೆ ಅಂದರೆ "The State Government of Karnataka and its subordinates instead of filing appeal against the order made by the Rama Jois, Judge in write petition 1603-46 of 84 and other cases that had created vacuum and even disastrous..." and they have further said They however, sought to support the order of Rama Jois, Judge, we are amased and pained at this somewhat astonishing attitude of the respondents." ಎಂದು ಈ ಬಗ್ಗೆ ಇವರು ಏನು ಮಾಡುತ್ತಾ ಇದ್ದರು ಎಂಬುದು ನಮಗೆ ಅರ್ಥವಾಗುವುದಿಲ್ಲ ಹೈಕೋರ್ಟ್ ಜಡ್ಜ್‌ಮೆಂಟ್ ಬಂದರೆ ಅದಕ್ಕೆ ಅಪೀಲು ಹೋಗುವುದಕ್ಕೆ ಅಧಿಕಾರಿಗಳಿಗೆ ಸಮಯ ಇರಲಿಲ್ಲವೇ? ಸಿ.ಸಿ.ಎ. ಎಷ್ಟರ ಮಟ್ಟಿಗೆ ಫಂಕ್ಷನ್ ಮಾಡುತ್ತಾ ಇದೆ. ಅದರ ಪ್ರೊಸೀಜರ್ಸ್ ಏನು? ಅಲ್ಪಸ್ವಲ್ಪ ಮಟ್ಟಿಗೆ ಚೆನ್ನಾಗಿ ನಡೆದಿರತಕ್ಕಂತಹ ಕೆಲವು ಸೊಸೈಟಿಗಳಲ್ಲಿ ಕಾರ್ಯದರ್ಶಿಗೆ ಸಂಬಳ ಕೊಡುವುದಕ್ಕೆ ಹಣ ಇಲ್ಲದ ಪರಿಸ್ಥಿತಿಯಲ್ಲಿ ಇದೆ. ಹೀಗಾದರೆ ಜಿಲ್ಲಾ ಮಟ್ಟದಲ್ಲಿರತಕ್ಕಂತಹ ಸಿ.ಸಿ.ಎ ಗಳ ಪರಿಸ್ಥಿತಿ ಏನು? ನನ್ನ ಕ್ಷೇತ್ರದಲ್ಲಿರುವ ಒಂದು ಸೊಸೈಟಿಯಲ್ಲಿ ಒಂದು ವರ್ಷದಿಂದ ಸಂಬಳ ಕೊಟ್ಟಿಲ್ಲ. ಮೊದಲು ಕೊಡುತ್ತಾ ಇದ್ದರು. ಈಗ ಇಲ್ಲ ಎಂದು ಹೇಳುತ್ತಾರೆ. ಅಲ್ಲಿ ನೋಡಿದರೆ ಆ ಸಂಸ್ಥೆಗಳು ಸರಿಯಾಗಿ ಫಂಕ್ಷನ್ ಮಾಡುತ್ತಾ ಇಲ್ಲ. ಆದುದರಿಂದ ಗಮನ ಕೊಟ್ಟು ಇವುಗಳನ್ನು ಸರಿಪಡಿಸಬೇಕಾಗಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಭೂಪತಿಯವರೇ, ನಿಮಗೆ ೧೦ ನಿಮಿಷ ಸಮಯ ಕೊಟ್ಟಿದ್ದು ಈಗ ೨೦ ನಿಮಿಷಗಳು ಮುಗಿದಿವೆ. ಈಗ ಮಾನ್ಯ ವೆಂಕಟರಾಮಯ್ಯನವರು ತಮ್ಮ ಭಾಷಣವನ್ನು ಪ್ರಾರಂಭ ಮಾಡಬೇಕು.

೫-೩೦ ಪಿ.ಎಂ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ ಸಹಕಾರ ಸಂಘಗಳಲ್ಲಿ ಹಣವನ್ನು ಶೇಖರಣೆಯು ಮಾಡುತ್ತಿರುವ ಸಲುವಾಗಿ ಇವತ್ತು ಅಸಹಕಾರ ಚಳುವಳಿ ಶುರುವಾಗಿದೆ. ಈ ಸಹಕಾರ ಸಂಘಗಳು ಇವತ್ತು ಪಟ್ಟಣಗಳಲ್ಲಿ ಸಹ ಶುರುವಾಗಿವೆ. ನಿಜವಾಗಿಯೂ ಈ ಹಿಂದೆ ಸಹಕಾರ ಸಂಘದಿಂದ ಉಪಯೋಗವಾಗುತ್ತಿತ್ತು. ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಿದ್ದವು. ಆದರೆ ಇತ್ತೀಚಿಗೆ ಆ ಅಭಿವೃದ್ಧಿ ಕಾರ್ಯಕ್ರಮಗಳು ಆಗದೆ ಅಸಹಕಾರ ಸಂಘಗಳು ಹೆಚ್ಚಾಗಿವೆ. ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ತಮ್ಮ ವರದಿಯ ಪುಟ ಒಂದರಲ್ಲಿ ಹೇಳಿರುವಂತೆ ಈ ರೀತಿ ಇದೆ. ಅದೇನೆಂದರೆ ೧೯೭೭ನೇ ಇಸವಿಯಲ್ಲಿ ೨೦,೧೪೦ ಸಹಕಾರ ಸಂಘಗಳು ಇದ್ದರೆ ಇವತ್ತು ೧೯೮೫ನೇ ಇಸವಿಯೊಳಗೆ ಸುಮಾರು ೨೩,೪೫೫ ಸಹಕಾರ ಸಂಘಗಳು ಪ್ರಾರಂಭ ಆಗಿವೆ ಎಂದು. ಸುಮಾರು ೩,೩೧೭ ಸಹಕಾರ ಸಂಘಗಳು ಮಾತ್ರ ಜಾಸ್ತಿ ಆಗಿವೆ. ಸುಮ್ಮನೆ ಸಹಕಾರ ಸಂಘಗಳೆಂದು ಹೇಳುತ್ತೇವೆಯೇ ವಿನಃ, ಇವುಗಳ ಮೂಲಕ ಯಾವುದೇ ಅಭಿವೃದ್ಧಿ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಆಮೇಲೆ ಈ ಸಹಕಾರ ಸಂಘಗಳಿಂದ ಕೊಡುವ ಅಲ್ಪಾವಧಿ ಸಾಲಗಳು ಕೆಲವು ಲಕ್ಷ ರೂಪಾಯಿಗಳು ಮಾತ್ರ. ಪುಟ ೯ರಲ್ಲಿ ಕೊಟ್ಟಿರುವ ಪ್ರಕಾರ ಬೆಂಗಳೂರು ಜಿಲ್ಲೆಗೆ ೧೯೮೪-೮೫ನೇ ಸಾಲಿನಲ್ಲಿ ೧೫೦ ಲಕ್ಷ ರೂಪಾಯಿಗಳನ್ನು

ಕೊಟ್ಟರೆ, ಈ ವರ್ಷ ಜಾಸ್ತಿ ಕೊಟ್ಟಿರುವುದು ಕೇವಲ ೧೪ ಲಕ್ಷ ರೂಪಾಯಿಗಳು ಮಾತ್ರ. ಅದೇ ರೀತಿಯಲ್ಲಿ ತುಮಕೂರು ಜಿಲ್ಲೆಗೆ ಈ ವರ್ಷ ಜಾಸ್ತಿ ಕೊಟ್ಟಿರುವುದು ಕೇವಲ ೧೫-೧೬ ಲಕ್ಷ ರೂಪಾಯಿಗಳು ಮಾತ್ರ. ಅದೇ ನಮ್ಮ ಕೋಲಾರ ಜಿಲ್ಲೆಗೆ ಕೊಟ್ಟಿರುವುದು ಕೇವಲ ೬ ಲಕ್ಷ ರೂಪಾಯಿಗಳು ಮಾತ್ರ. ನಮ್ಮ ಜಿಲ್ಲೆಯಲ್ಲಿ ಸುಮಾರು ೨೧ ಲಕ್ಷದಷ್ಟು ಜನಸಂಖ್ಯೆ ಇದೆ. ತಾವು ಅವರಿಗೆ ಕೊಟ್ಟಿರುವ ಹಣ ಕೇವಲ ೬ ಲಕ್ಷ ರೂಪಾಯಿಗಳು. ಇದರಿಂದ ಯಾರು ಸ್ವಾಮಿ ಉದ್ಧಾರವಾಗುತ್ತಾರೆ? ತಾವು ಈ ಹಣವನ್ನು ವಿಫಲವಾದಂಥ ಬಾವಿಗಳಿಗೆಂದು ಕೊಟ್ಟಿದ್ದೀರಿ. ಈ ರೀತಿ ವಿಫಲವಾದಂಥ ಬಾವಿಗಳ ಸಂಬಂಧದಲ್ಲಿ ಬಂದಿರುವ ಅರ್ಜಿಗಳು ಇನ್ನೂ ಬೇಕಾದಷ್ಟು ನಮ್ಮ ಜಿಲ್ಲೆಯಲ್ಲಿ ಇವೆ. ಆದ್ದರಿಂದ ನಮ್ಮ ಜಿಲ್ಲೆಗೆ ಇನ್ನು ಹೆಚ್ಚು ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳ ಬಗ್ಗೆ ನಾನು ಸ್ಪಷ್ಟವಾಗಿ ಮಾನ್ಯ ಮಂತ್ರಿಗಳಾದಂಥ ಜಾಲಪ್ಪನವರಲ್ಲಿ ಕೇಳಿಕೊಳ್ಳುವುದೇನೆಂದರೆ, ನಾವು ಗೌರಿಬಿದನೂರು ಮತ್ತು ಹಿರಿಯೂರು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವಾಗ ಬಹಳ ಕಷ್ಟಪಟ್ಟು ಸ್ಥಾಪನೆ ಮಾಡಿದ್ದೇವೆ. ಆದರೆ ಅಲ್ಲಿನ ರೈತರು ಈಗ ಬಹಳ ತೊಂದರೆಯನ್ನು ಪಡುತ್ತಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಸ್ವಲ್ಪ ಶ್ರದ್ಧೆಯನ್ನು ಈ ಬಗ್ಗೆ ತೆಗೆದುಕೊಂಡರೆ, ಸ್ವಲ್ಪ ಮುತುವರ್ಜಿಯನ್ನು ವಹಿಸಿದರೆ ಈ ಕಾರ್ಖಾನೆಗಳನ್ನು ತೆರೆಯುವುದಕ್ಕೆ ಸಾಧ್ಯವಿದೆ. ಈಗ ಎನ್.ಸಿ.ಡಿ.ಸಿ. ಯವರು ಸಹಾಯ ಮಾಡಲು ಮುಂದೆ ಬಂದಿದ್ದಾರೆ. ಅಲ್ಲಿ ಬರುವ ರಾ ಮೆಟೀರಿಯಲ್ಸ್ ಅನ್ನು ಈ ಹಿಂದೆ ಅಗ್ಗದ ಬೆಲೆಗೆ ಅಗ ಕೊಟ್ಟು ಬಿಟ್ಟಿದ್ದಾರೆ. ಕೋಟ್ಯಾಂತರ ರೂಪಾಯಿಗಳಷ್ಟು ಆದಾಯ ಬರುವಂತಹ ವಸ್ತುಗಳನ್ನು ಕಡಿಮೆ ಬೆಲೆಗೆ ಅಂದಿನ ಅಧಿಕಾರಿಗಳು ಕೊಟ್ಟು ಬಿಟ್ಟಿದ್ದಾರೆ. ಬರೀ ೧೦ ಲಕ್ಷ ರೂಪಾಯಿಗಳಿಗೆ ಕೊಟ್ಟು ಬಿಟ್ಟಿದ್ದಾರೆ. ಇದರಿಂದ ಆ ಪ್ರೈವೇಟ್ ಪಾರ್ಟಿಗಳು ಕೋಟ್ಯಾಂತರ ರೂಪಾಯಿಗಳ ಲಾಭವನ್ನು ಸಂಪಾದನೆ ಮಾಡುತ್ತಿದ್ದಾರೆ. ಈಗ ಸರ್ಕಾರದವರ ಹೇಳಿಕೆಯ ಪ್ರಕಾರ ಬಾಟ್ಲಿಂಗ್ ಡಿಸ್ಟಿಲರಿಸ್‌ಗಳನ್ನು ಸರ್ಕಾರದವರೇ ವಹಿಸಿಕೊಳ್ಳುತ್ತಾರೆಂದು ತಿಳಿದು ಬಂದಿದೆ. ಆದ್ದರಿಂದ ಗೌರಿಬಿದನೂರು ಸಕ್ಕರೆ ಕಾರ್ಖಾನೆಯನ್ನು ಸರ್ಕಾರ ನಡೆಸಬೇಕೆಂದು ನಾನು ಅತ್ಯಂತ ವಿನಂತಿಯಿಂದ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇನ್ನು ಈ ಸಕ್ಕರೆ ಕಾರ್ಖಾನೆಗಳ ಮತ್ತು ಸಹಕಾರ ಸಂಘಗಳ ಲೆಕ್ಕ ತಪಾಸಣೆಯ ಬಗ್ಗೆ ಪುಟ ೮೩ ರಲ್ಲಿ ಕೊಟ್ಟಿದ್ದಾರೆ. ನನಗೆ ತಿಳಿದ ಮಟ್ಟಿಗೆ ಈ ಸಹಕಾರ ಸಂಘಗಳ ತಪಾಸಣೆಯ ಕಾರ್ಯವನ್ನು ಇಷ್ಟರಲ್ಲಿ ಮುಗಿಸಬೇಕಾಗಿತ್ತು. ಆ ಕೆಲಸ ಕೂಡ ಸಮರ್ಪಕವಾಗಿ ನಡೆಯುತ್ತಿಲ್ಲ. ಇವರ ಒಂದು ವರದಿಯ ಪ್ರಕಾರ ೧೯೮೨-೮೩ರ ಹಾಗೂ ೧೯೮೩-೮೪ರವರೆವಿಗೆ ಲೆಕ್ಕ ತಪಾಸಣೆ ಕಾರ್ಯ ನಡೆದಿದೆ. ಇದರಲ್ಲಿ ನಿಷ್ಕ್ರಿಯ ಸಹಕಾರ ಸಂಘಗಳು ಸುಮಾರು ೪,೭೫೮ ಮತ್ತು ಅವಸಾನಗೊಳಪಟ್ಟಿರುವ ಸಹಕಾರ ಸಂಘಗಳು ೪,೧೪೮ ಎಂದು ಹೇಳಿದ್ದಾರೆ. ತಪಾಸಣೆಯಾಗಿರತಕ್ಕಂಥ ಸಹಕಾರ ಸಂಘಗಳು ಸುಮಾರು ೧೪,೧೪೦. ಇನ್ನು ಲೆಕ್ಕ ತಪಾಸಣೆ ಮಾಡಬೇಕಾಗಿರತಕ್ಕಂಥ ಸಹಕಾರ ಸಂಘಗಳು ಸುಮಾರು ೭,೦೦೦. ಇನ್ನು ಈ ಸಹಕಾರ ಸಂಘಗಳಲ್ಲಿ ದುರುಪಯೋಗ ಆಗಿರುವುದು ೧೯೮೪-೮೫ನೇ ಸಾಲಿನಲ್ಲಿ ೧೨೦.೧೫ ಲಕ್ಷ ರೂಪಾಯಿಗಳು. ಅದೇ ೧೯೮೫-೮೬ನೇ ಸಾಲಿನಲ್ಲಿ ಅಂದರೆ ೩೧-೧೨-೮೫ಕ್ಕೆ ಸುಮಾರು ೬೪ ಲಕ್ಷ ರೂಪಾಯಿಗಳಷ್ಟು ದುರುಪಯೋಗವಾಗಿದೆ. ಇನ್ನು ಈ ಸಾಲಿನಲ್ಲಿ ತಪಾಸಣೆ ಮಾಡಬೇಕಾಗಿದೆ. ಈ ಸಾಲಿನಲ್ಲಿ ತಪಾಸಣೆ ಕಾರ್ಯ ಪೂರ್ತಿಯಾಗುವಷ್ಟರಲ್ಲಿ ಅಷ್ಟೇ ಮೊತ್ತಕ್ಕೆ ಬರಬಹುದು. ಆದರೂ ಸಹ ಈ ಸಾರಿ ಈ ದುರುಪಯೋಗವನ್ನು ತಡೆಗಟ್ಟುವುದಕ್ಕೆ ನಮ್ಮ ಮಾನ್ಯ ಮಂತ್ರಿಗಳು ಬಹಳ ಶ್ರಮ ವಹಿಸಿದ್ದಾರೆ ಸ್ವಾಮಿ ನನ್ನ ಹಳ್ಳಿಯಲ್ಲಿ ಒಂದು ಸಹಕಾರ ಸಂಘ ಇದೆ. ಆ ಸಹಕಾರ ಸಂಘದ ಲೆಕ್ಕ ಪರಿಶೋಧನೆಯ ಕಾರ್ಯ ಇನ್ನೂ ಮುಗಿದಿಲ್ಲ. ನಾನು ಸುಮಾರು ನಾಲ್ಕು ವರ್ಷಗಳಿಂದ ಕೇಳುತ್ತಲೇ ಇದ್ದೇನೆ. ಇವತ್ತು ಮುಗಿಯುತ್ತದೆ, ನಾಳೆ ಮುಗಿಯುತ್ತದೆ, ಎನ್ನುವ ಮಾತುಗಳನ್ನು ಹೇಳುತ್ತಲೇ ಇದ್ದಾರೆ. ಯಾವಾಗ ಮುಗಿಯುತ್ತದೆಯೋ ಎಂಬುದು ಆ ದೇವರಿಗೇ ಗೊತ್ತಾಗಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ಇನ್ನೂ ಹೆಚ್ಚು ಗಮನ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ನಮ್ಮ ಮಾನ್ಯ ಮಂತ್ರಿಗಳು ಬೀಡಿ ವರ್ಕರ್ಸ್ ಬಗ್ಗೆ ಸ್ವಲ್ಪ ಗಮನ ಕೊಡಬೇಕು. ಕೇರಳದಲ್ಲಿರುವಂತೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಕೂಡ ಒಂದು ಬೀಡಿ ವರ್ಕರ್ಸ್ ಕಾರ್ಪೊರೇಷನ್ ಮಾಡಬೇಕು. ಕೇರಳ ರಾಜ್ಯದಲ್ಲಿ ಈ ಒಂದು ಕಾರ್ಪೊರೇಷನ್ ಸುಮಾರು ೫೦ ಸಾವಿರ ಜನರಿಗೆ ಉದ್ಯೋಗವನ್ನು ಕೊಟ್ಟಿದೆ. ಇದರಿಂದ ಈ ವರ್ಗದ ಜನರಿಗೆ ಅನುಕೂಲವಾಗುತ್ತದೆ ಮತ್ತು ನಾನು ಮೊದಲೇ ಮಾನ್ಯ ಮಂತ್ರಿಗಳಲ್ಲಿ

ಪ್ರಾರ್ಥನೆ ಮಾಡಿಕೊಂಡಂತೆ ಗೌರಿಬಿದನೂರು ಮತ್ತು ಹಿರಿಯೂರು ಸಕ್ಕರೆ ಕಾರ್ಖಾನೆಗಳನ್ನು ಮತ್ತೆ ತೆರೆಯಬೇಕು. ಅಲ್ಲಿ ಸುಮಾರು ೫ ಕೋಟಿ ರೂಪಾಯಿಗಳ ನಷ್ಟವಾಗಿದೆ ಎನ್ನತಕ್ಕಂಥ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಅಲ್ಲಿ ಮೊದಲು ಒಂದು ಕೋಟಿ ರೂಪಾಯಿಗಳ ನಷ್ಟವಿತ್ತು. ಈಗ ಆ ಕಾರ್ಖಾನೆಯನ್ನು ಮುಚ್ಚಿದ್ದರಿಂದ ಸುಮಾರು ೫ ಕೋಟಿ ರೂಪಾಯಿಗಳ ನಷ್ಟವಾಯಿತು. ಈ ಕಾರ್ಖಾನೆಯನ್ನು ಮುಚ್ಚಿರುವುದರಿಂದ ಅಲ್ಲಿನ ರೈತರಿಗೆ ಮತ್ತು ಕಾರ್ಮಿಕರಿಗೆ ಬಹಳ ತೊಂದರೆಯಾಗಿದೆ. ಜೊತೆಗೆ ಅಲ್ಲಿ ಒಂದು ಸಾವಿರ ಬೋರ್‌ವೆಲ್‌ಗಳನ್ನು ಹಾಕಿಸಿಕೊಟ್ಟು ಆ ಮಿಲ್‌ಗಳನ್ನು ಸಹ ರನ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯಗಳ ಬಗ್ಗೆ ಕೆಲವು ಮಾತುಗಳನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ನನ್ನ ದೃಷ್ಟಿಯಲ್ಲಿ ಗ್ರಾಮ ಪಂಚಾಯಿತಿಗಳೇ ಇಲ್ಲ. ಹಳ್ಳಿಗಳಲ್ಲಿ ಪಂಚಾಯಿತಿಗಳೇ ಇಲ್ಲದಿರುವಾಗ ಇನ್ನು ಅಭಿವೃದ್ಧಿ ಕೆಲಸ ಕಾರ್ಯಗಳು ಎಲ್ಲಿ ನಡೆಯುತ್ತವೆ? ಹಳ್ಳಿಗಳಲ್ಲಿ ಇವತ್ತು ಒಂದು ದಾರಿ ದೀಪ ಇಲ್ಲ ಒಳಚರಂಡಿ ವ್ಯವಸ್ಥೆ ಮೊದಲೇ ಇಲ್ಲ ಯಾವುದೇ ರೀತಿಯ ಸೌಲಭ್ಯಗಳು ಇಲ್ಲದಿರುವಾಗ ಇನ್ನು ಗ್ರಾಮಾಭಿವೃದ್ಧಿ ಕೆಲಸ ಎಲ್ಲಿ ನಡೆಯುತ್ತಿದೆ? ಇನ್ನು ಈ ಐ.ಆರ್.ಡಿ.ಪಿ. ಯೋಜನೆಯಲ್ಲಿ ಸುಮಾರು ೬೦ ಜನರಿಗೆ ಸರ್ಕಾರದವರು ಸಹಾಯ ಮಾಡುತ್ತಾರೆ. ಅದೂ ಒಬ್ಬೊಬ್ಬರಿಗೆ ಸುಮಾರು ೩ ಸಾವಿರ ರೂಪಾಯಿಗಳಿಂದ ಹಿಡಿದು ೫ ಸಾವಿರ ರೂಪಾಯಿಗಳವರೆಗೆ ಕೊಡುತ್ತಾರೆ. ಒಂದು ತಾಲ್ಲೂಕಿನಲ್ಲಿ ೬೦ ಜನರಿಗೆ ಕೊಟ್ಟರೆ ಯಾರಿಗೆ ಕೊಡಬೇಕು ಯಾರಿಗೆ ಬಿಡಬೇಕು ಎಂಬುದನ್ನು ತಾವೆ ಯೋಚನೆ ಮಾಡಿ ಈ ಹಣವನ್ನು ಗ್ರಾಮ ಸಭೆಗಳ ಮೂಲಕ ಆ ಫಲಾನುಭವಿಗಳಿಗೆ ವಿತರಣೆ ಮಾಡುತ್ತಾರೆ. ಆ ಗ್ರಾಮ ಸಭೆಗೆ ಎಂ.ಎಲ್.ಎ.ಗಳನ್ನು ಕರೆಯುತ್ತಾರೆ. ಆಗ ಆ ಗ್ರಾಮದ ಜನರಿಗೆ ಅಲ್ಲಿಗೆ ಬಂದಿರತಕ್ಕಂಥ ಶಾಸಕರ ಮೇಲೆ ಕೋಪ. ಕಾರಣ ಇದರ ಅನುಕೂಲವನ್ನು ನನಗೆ ಕೊಡಿಸಲಿಲ್ಲ. ನನಗೆ ಕೊಡಿಸಲಿಲ್ಲವೆಂದು. ಇದರಿಂದ ಅಲ್ಲಿನ ಶಾಸಕರು ಏನು ಮಾಡುತ್ತಾರೆ ಎಂದರೆ ಯಾವುದೇ ಗ್ರಾಮ ಸಭೆಗಳಿಗೆ ಹೋಗುವುದಿಲ್ಲ. ಆದ್ದರಿಂದ ಅಲ್ಲಿನ ಕಾರ್ಯದರ್ಶಿಗಳೇ ಅವನಿಗೆ ಬೇಕಾದವರಿಂದ ಒಂದು ೨೦೦ ರೂಪಾಯಿಗಳ ಲಂಚವನು ತೆಗೆದುಕೊಂಡು ಕೊಟ್ಟು ಬಿಡುತ್ತಾನೆ. ಈ ರೀತಿಯಲ್ಲಿ ಐ.ಆರ್.ಡಿ.ಪಿ ಯೋಜನೆಯಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿವೆ. ಮೂಲ ಭೂತವಾಗಿ ಯಾರಿಗೆ ಸಹಾಯ ಸಿಗಬೇಕಾಗಿತ್ತೋ ಅವರಿಗೆ ಸಹಾಯ ಸಿಗುತ್ತಿಲ್ಲ ಇನ್ನು ಪೈಪ್ಡ್ ವಾಟರ್ ಪ್ರೋಗ್ರಾಂ ಎಂದು ಮಾಡಿದ್ದಾರೆ. ಇದು ಒಂದು ರೀತಿಯಲ್ಲಿ ತಿರುಪತಿ ಪ್ರೋಗ್ರಾಂ ಆಗಿದೆ; ಈ ಯೋಜನೆಯನ್ನು ಪ್ರಾರಂಭ ಮಾಡಿ ಸುಮಾರು ೬ ತಿಂಗಳಾಗಿದೆ; ಇನ್ನು ಪೂರ್ತಿಯಾಗಿಲ್ಲ. ನಾವ್ಯಾರಾದರೂ ಅಲ್ಲಿ ಹೋಗಿ ಕೇಳಿದರೆ ಇನ್ನೂ ಮೋಟಾರ್ ಬಂದಿಲ್ಲ. ವಿದ್ಯುಚ್ಛಕ್ತಿ ಬಂದಿಲ್ಲವೆಂದು ಹೇಳುತ್ತಾರೆ. ಕೆಲವು ಕಡೆ ಇವೆಲ್ಲಾ ಬಂದಿದ್ದರೂ ಸಹ ಚಾಲನೆ ಮಾಡಬೇಕಾದರೆ ಇನ್ನು ೬ ತಿಂಗಳಾಗುತ್ತದೆ. ಸ್ವಾಮಿ ನಾನು ನಮ್ಮ ಕೋಲಾರ ಜಿಲ್ಲೆಯ ಬಗ್ಗೆ ಪ್ರಸ್ತಾಪ ಮಾಡುವುದಾದರೆ, ನಮ್ಮ ಕೋಲಾರ ಜಿಲ್ಲೆಗೆ ಸರ್ಕಾರದವರು ಸುಮಾರು ನಾಲ್ಕುವರೆ ಲಕ್ಷ ರೂಪಾಯಿಗಳನ್ನು ಮಾತ್ರ ಈ ಯೋಜನೆಗೆ ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಸುಮಾರು ೧೧ ತಾಲ್ಲೂಕುಗಳು ಇವೆ. ಯಾವ ರೀತಿಯಲ್ಲಿ ಈ ಹಣವನ್ನು ಉಪಯೋಗಿಸಿ ಕೊಳ್ಳಬೇಕು ಎಂಬುದನ್ನು ತಾವೇ ಯೋಚನೆ ಮಾಡಿ. ಕಳೆದ ಸುಮಾರು ೩೮ ವರ್ಷಗಳಿಂದ ನಾವು ಗ್ರಾಮಾಭಿವೃದ್ಧಿ ಕಡೆ ಹೆಚ್ಚು ಗಮನ ಕೊಟ್ಟಿಲ್ಲ. ಇವತ್ತಿಗೂ ಸಹ ಅನೇಕ ಗ್ರಾಮಗಳಲ್ಲಿ ಸರಿಯಾದ ರಸ್ತೆ ಸೌಕರ್ಯಗಳು ಇಲ್ಲ. ಕುಡಿಯುವ ನೀರಿನ ಸೌಕರ್ಯಗಳು ಇಲ್ಲ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚು ಗಮನ ಕೊಡಬೇಕು. ಈ ಬಗ್ಗೆ ಇನ್ನು ಅನೇಕ ಅಂಕಿ ಅಂಶಗಳನ್ನು ನಾವು ಕೊಡಬೇಕಾಗಿತ್ತು ಆದರೆ ಏನು ಮಾಡುವುದು, ವೇಳೆ ಇಲ್ಲ. ನನ್ನ ಬಳಿ ಒಂದು ಪುಸಕ್ತ ಇದೆ. ಆ ಪುಸ್ತಕದಲ್ಲಿ ಈ ರೂರಲ್ ಡೆವಲಪ್‌ಮೆಂಟ್ ಬಗ್ಗೆ ಒಂದು ಮಾತು ಹೇಳಿದ್ದಾರೆ. ಅದು ಈ ರೀತಿ ಇದೆ.

SRI R. VENKATARAMAIAH (Contd).—In the book viz , "POVERTY —is it understood ? —an inquiry into its academic antics and administrative tacktics" written by A. Ramaswamy and N.V.R. Ram, the authors have observed as follows:—

"One has to realise that no amount of propping up or pushing by an array of officials in the rural side will solve the problem of poverty. The IRDP cannot be a substitute

for organising and direct participation of the rural poor in their own attempts to solve their own problem of poverty. However, the strategy followed by the dites and the econmists have given an administrative structure convenient to the bureaucracy and academics wherein the DRDS and other functionaries in the district are assigneda function of doling out the money in the name of poverty programmes. The responsibility is then shifted to nationalised banks and the nationalised banks shift it to somewhere else."

AGRICULTURAL CREDIT

"Another field which has adversely effected the poor farmers and the agricultural labourers has been the inadequacy of the agricul'ural credit. It was hoped that with the establishment of the primary land development banks and the district central co-operative banks at the taluk and district levels, agricultural credit would be taken care of. Similarly, it was felt that the commercial banks with their agricul'ural development branches would be able to fill the gap. However, the truth is that the agricultural credit is either not available and when it is available it is insufficient because of the various guidelines stipulated at various levels."

ಇವರು ಮಾಡುವುದು ಇಷ್ಟೆ. ಅಂಕಿಅಂಶಗಳನ್ನು ನಮಗೆ ಕೊಡುತ್ತಾರೆ, ದುಡ್ಡನ್ನು ಹಾಳು ಮಾಡುತ್ತಾರೆ. ಐ.ಆರ್.ಡಿ ಪಿ, ಯೋಜನೆಯ ಮುಖಾಂತರ ತಾಲ್ಲೂಕಿಗೆ ದುಡ್ಡು ಕೊಡುತ್ತಾರೆ. ಜನ ಬ್ಯಾಂಕಿಗೆ ಹೋಗುತ್ತಾರೆ, ಬ್ಯಾಂಕಿನವರು ಸೆಕ್ರೆಟರಿಯವರ ಹತ್ತಿರ ಕಳುಹಿಸುತ್ತಾರೆ. ಅತ್ತ, ಇತ್ತ ಅಲೆದಾಡಿ, ಕೊನೆಗೆ ಅನುಕೂಲ ಮಾತ್ರ ಆಗುವುದಿಲ್ಲ, ಕೋ ಅಪರೇಟಿವ್ಸ್ ಬಗ್ಗೆ ಒಂದು ಪಾರಾ ಓದುತ್ತೇನೆ.—

"CO-OPERATIVES

The village co-operatives which were set up with great fanfare and enthusiasm have degenerated to a large extent as institutions where corruption is the order of the day. Most of the institutions have over the years accumulated bad debts and also developed party affiliations thus strikingat the very root of the co-operative spirit and movement."

ಉದಾಹರಣೆಗೆ ಮೂರು ಸಾವಿರ ರೂಪಾಯಿಗಳ ಲೋನ್ ಕೊಡಬೇಕೆಂದರೆ, ಐದು ನೂರು ರೂಪಾಯಿಗಳನ್ನು ಖರ್ಚು ಮಾಡಬೇಕು. ಹಾಗೂ ಆರು ತಿಂಗಳು ಕಾಯಬೇಕು. ಮಾನ್ಯ ಯಾಪಗಲ್ ಅವರಿಗೆ ಜನಗಳಿಗೆ ಸಹಾಯ ಮಾಡಬೇಕೆಂಬ ಕಾಳಜಿ ಇದೆ. ಕೋ-ಅಪರೇಟಿವ್ ಬಗ್ಗೆ ಮಾನ್ಯ ಜಾಲಪ್ಪನವರಿಗೆ ಒಳ್ಳೆಯ ಅನುಭವ ಇದೆ. ಆದ್ದರಿಂದ ಇದು ಬಹಳ ಉಪಯುಕ್ತವಾದ ಮೂವ್‌ಮೆಂಟ್ ಆಗಬೇಕು. ಗ್ರಾಮಾಭಿವೃದ್ಧಿಗೆ ಸಹಕಾರ ಬೇಕು, ಆದರೆ ಈ ಸಹಕಾರ ಯಾವರೀತಿ ನಡೆಯಬೇಕೋ, ಆ ರೀತಿ ನಡೆಯುತ್ತಾ ಇಲ್ಲ. ನಮ್ಮ ತಾಲ್ಲೂಕಿನಲ್ಲಿ ಫೇರ್ ಪ್ರೈಸ್ ಡಿಪೋಗಳು ಇವೆ ಅವುಗಳಲ್ಲಿ ಸರ್ಕಾರ ಏನನ್ನು ತೆಗೆದು ಕೊಳ್ಳುವುದಕ್ಕೂ ಶಕ್ತಿ ಇಲ್ಲ. ಇಲ್ಲಿ ಯಾವ ಮಟ್ಟಕ್ಕೆ ಕೆಲಸ ಮಾಡ

ಬೇಕೋ ಅದನ್ನು ಮಾಡಿಲ್ಲ. ಇವೆಲ್ಲವನ್ನೂ ಸರಿಪಡಿಸುವ ಜವಾಬ್ದಾರಿ ಇವರ ಮೇಲಿದೆ. ಇನ್ನು ರೂರಲ್ ಡೆವಲಪ್‌ಮೆಂಟ್‌ನಲ್ಲೂ ಕೆಲಸ ಆಗಿರುವುದು ಕಡಿಮೆ. ಮಂಡಲ್ ಪಂಚಾಯಿತಿ ಜಾರಿಗೆ ಬಂದರೆ ಹಾಗೂ ಲೋಕಲ್ ಲೀಡರ್‌ಷಿಪ್ ಬಂದಾಗ ನಮಗೆ ಸಹಾಯವಾಗಬಹುದು. ಆದುದರಿಂದ ಆದಷ್ಟುಬೇಗ ಮಂಡಲ್ ಪಂಚಾಯಿತಿ ಎಲೆಕ್ಷನ್ ನಡೆಸಲಿ ಎಂದು ಹೇಳುತ್ತಾ, ತಾವು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).--ಸನ್ಮಾನ್ಯ ಅಧ್ಯಕ್ಷರೇ, ಇಂದು ಸಹಕಾರಿ ಇಲಾಖೆ ಮತ್ತು ಗ್ರಾಮಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಚರ್ಚೆ ನಡೆಯುತ್ತಿದ್ದು ಸನ್ಮಾನ್ಯ ಕೆ.ಹೆಚ್. ಪಾಟೀಲ್‌ರವರು ಈ ಬೇಡಿಕೆಗಳ ಬಗ್ಗೆ ಮಾತನಾಡಿ ಕೆಲವು ನ್ಯೂನತೆಗಳ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ ಮತ್ತು ಕೆಲವು ಸಲಹೆಗಳನ್ನೂ ಕೊಟ್ಟಿದ್ದಾರೆ. ಸ್ವಾಮಿ, ಈ ಸರ್ಕಾರದವರು ರೈತರ ಸಮಸ್ಯೆಗಳನ್ನು ಬಗೆಹರಿಸುತ್ತೇವೆಂದು ಹೇಳಿ, ಶ್ರೀ ಶಂಕರಿಕೊಪ್ಪ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದರು. ಸದರಿ ಸಮಿತಿಯವರು ಸರ್ಕಾರಕ್ಕೆ ತಾತ್ಕಾಲಿಕವಾದ ರಿಪೋರ್ಟನ್ನು ಕೊಟ್ಟಿದ್ದಾರೆ. ಸರ್ಕಾರದವರು ರೈತರ ನೈಜ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಂತೆ ಕಾಣುವುದಿಲ್ಲ ಬರಗಾಲದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, ಮೊದಲು ರೈತರ ಸಾಲವನ್ನು ಮನ್ನಾ ಮಾಡುತ್ತಾರೆಂದು ನಾನು ಭಾವಿಸಿದ್ದೆ. ಆದರೆ ಹಾಗೆ ಆಗಲಿಲ್ಲ. ಸಮಿತಿಯವರು ಒಂದು ಸಲಹೆ ಕೊಟ್ಟಿದ್ದಾರೆ. ಅದೇನೆಂದರೆ ರೈತರ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡುವಂಥ ಸಲಹೆಯನ್ನು ಕೊಟ್ಟಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರದವರು ರೈತರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು ಕೆಲಸ ಮಾಡದೇ ಹೋದರೆ ಹೇಗೆ? ರೈತರ ಬದುಕಿನ ಬಗ್ಗೆ ಇವರಿಗೆ ಚಿಂತನೆ ಇದೆಯೇ? ರೈತರನ್ನು ಮುಳುಗಿಸಿ, ಅವರ ಜೀವನ ಮಟ್ಟವನ್ನು ಹಾಳುಮಾಡದೇ, ಮಾನ್ಯ ಜಾಲಪ್ಪನವರು ತಕ್ಷಣ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ಭಾವಿಸಿದ್ದೆ. ಅಲ್ಲದೆ ಸನ್ಮಾನ್ಯ ಮುಖ್ಯ ಮಂತ್ರಿಗಳೂ ಈ ಬಗ್ಗೆ ಮಾತನಾಡುತ್ತಾ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದರು. ಸ್ವಾಮಿ, ಮುಖ್ಯಮಂತ್ರಿಗಳು ಈ ಬಗ್ಗೆ ಅಂಕಿಸಂಖ್ಯೆಗಳನ್ನು ಇಟ್ಟುಕೊಂಡು, ರೈತರ ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಬೇಕಾಗಿತ್ತು. ನಮ್ಮ ರಾಜ್ಯದಲ್ಲಿ ಇಂತಹ ವಿಚಿತ್ರವಾದ ಪರಿಸ್ಥಿತಿ ಇದ್ದರೂ, ಸಹಕಾರ ಸಂಘಗಳು ಕೊಟ್ಟಂಥ ಸಾಲವನ್ನು ವಸೂಲ್ಮಾಡುವಂಥ ಧೈರ್ಯವನ್ನು ನಮ್ಮ ಅಧಿಕಾರಿಗಳು ಮಾಡಿದ್ದಾರೆ ರೈತರ ಮನೆಗೆ ಹೋದರೆ ಅವರು ಇವತ್ತು ಸಾಲ ವಾಪಸ್ ಕೊಡುವ ಸ್ಥಿತಿಯಲ್ಲಿಲ್ಲ. ಆದ್ದರಿಂದ ಶಂಕರಿ ಕೊಪ್ಪ ಸಮಿತಿಯವರು ಕೊಟ್ಟಂಥ ಸಲಹೆಯಂತೆ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ರೈತರ ಅವಶ್ಯಕತೆಯನ್ನು ಪೂರೈಸುವುದಕ್ಕೋಸ್ಕರ ವರ್ಷಕ್ಕೆ ಮೂರು ರೂಪಾಯಿ ಬಡ್ಡಿಯಂತೆ ಸಾಲ ಕೊಡುತ್ತೇವೆಂದು ಹೇಳಿದ್ದಾರೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹೊಸ ಹೊಸ ವಿಚಾರಗಳನ್ನೂ, ಹೊಸ ಹೊಸ ಕಾರ್ಯಕ್ರಮಗಳನ್ನೂ ಈ ರಾಜ್ಯದ ಮುಂದೆ ಇಟ್ಟಿದೆ. ನಬಾರ್ಡ್‌ನವರು ಒಪ್ಪಿಕೊಳ್ಳುವುದಾದರೆ, ಇವರು ಮೂರು ಪರ್ಸೆಂಟ್ ಬಡ್ಡಿಯಂತೆ ಸಾಲ ಕೊಡುವುದಾದರೆ, ಇದರಲ್ಲಿ ರಾಜ್ಯಸರ್ಕಾರದ ಪಾತ್ರ ಏನು ಅನೇಕ ಆಸೆಗಳನ್ನು ರೈತರ ಮುಂದೆ ಇಟ್ಟಿದ್ದೀರಿ. ದೊಡ್ಡ ದೊಡ್ಡ ಕಾನೂನುಗಳನ್ನು ಮಾಡುವುದರಿಂದ, ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗುತ್ತದೆಯೇ ? ಇವರಿಗೆ ರೈತರ ಬಗ್ಗೆ ಕಾಳಜಿ ಎನ್ನುವುದೇ ಇಲ್ಲ ನಾನು ಈಗ ರೈತರ ಪರಿಸ್ಥಿತಿ ಬಗ್ಗೆ ವಿವರವಾಗಿ ಮಾತನಾಡುವುದಕ್ಕೆ ಸಮಯವಿಲ್ಲ. ಮಾನ್ಯ ಅಧ್ಯಕ್ಷರು, ಬೇಡಿಕೆಗಳ ವಿಚಾರದಲ್ಲಿ ಮಾತನಾಡಲು ಹೆಚ್ಚು ಸಮಯ ಕೊಡುತ್ತಾರೆಂದು ಭಾವಿಸಿದ್ದೆ. ಆದರೆ ಸಂದರ್ಭ ಆ ಸ್ಥಿತಿಯಲ್ಲಿ ಇಲ್ಲ. ಇವತ್ತು ಸಹಕಾರ ಸಂಘಗಳ ಉದ್ದೇಶ ಏನೆಂದರೆ, ಮಾನ್ಯ ಪಾಟೀಲರು ಹೇಳಿದಂತೆ, ದೊಡ್ಡ ದೊಡ್ಡ ಉದ್ದೇಶ ಇಟ್ಟುಕೊಂಡು ಈ ಸಹಕಾರ ಸಂಘಗಳು ಪ್ರಾರಂಭವಾದವು. ಆದರೆ ಇಂದು ಇವು ರೈತರಿಗೆ ಸಹಕಾರಿ ಆಗಿವೆಯೇ ? ಬರೀ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಸರ್ಕಾರ ಕೊಟ್ಟಂಥ ಹಣ ಮುಳುಗಿ ಹೋಗುತ್ತಿದೆ. ಎಲ್ಲೆಲ್ಲೂ ಅವ್ಯವಸ್ಥೆ ಇದೆ. ಈ ಸಹಕಾರ ಸಂಘಗಳ ಆಡಿಟ್ ಮಾಡಿದುದನ್ನು, ರೀ-ಆಡಿಟ್ ಮಾಡತಕ್ಕಂಥ ವ್ಯವಸ್ಥೆ ಇದೆಯೇ ? ಆಡಿಟರ್ ಮಾಡಿದ್ದು ಏನಾದರೂ ತಪ್ಪಿದ್ದರೆ, ಅದನ್ನು ಮತ್ತೊಮ್ಮೆ ತಪಾಸಣೆ ಮಾಡಿದರೆ, ಅವರಿಗೆ ಭಯವಾದರೂ ಬರುತ್ತೆ. ಇಲ್ಲದೇ ಹೋದರೆ, ನಿಜವಾಗಿಯೂ ಸಹಕಾರ ಸಂಘಗಳು ಮುಳುಗಿ ಹೋಗುವ ಪ್ರಸಂಗ ಬರುತ್ತದೆ. ಸಹಕಾರ ಸಂಘಗಳಲ್ಲಿ ಸಕ್ಕರೆ, ಅಕ್ಕಿ ಮುಂತಾದ ಸಾಮಗ್ರಿಗಳು ಬರುತ್ತದೆ. ಈ ಎಲ್ಲಾ ವಸ್ತುಗಳ

ತಪಾಸಣೆಗಾಗಿ, ಒಂದು ಸ್ಯಾಂಪಲ್ ಸರ್ವೆ ಮಾಡಬೇಕು. ಚಾರ್ಟೆಡ್ ಅಕೌಂಟೆಂಟ್ ಮೂಲಕ ರೀ-ಆಡಿಟ್ ಮಾಡುವ ಕೆಲಸ ಮೊದಲು ಮಾಡಬೇಕು. ಈಗ ಇರುವ ಆಡಿಟ್ ವ್ಯವಸ್ಥೆಯಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ಎಷ್ಟೋ ನ್ಯೂನತೆಗಳನ್ನು ಹೇಳಿದರೂ ಕ್ರಮ ತೆಗೆದುಕೊಳ್ಳತಕ್ಕ ಆಡಳಿತ ಮಂಡಲಿ ಇಲ್ಲ. ಇಂತಹ ನೂರಾರು ಉದಾಹರಣೆಗಳನ್ನು ಕೊಟ್ಟು ಇಲ್ಲಿ ಚರ್ಚೆ ಮಾಡಿದ್ದೇವೆ. ಇಂತಹ ವಿಷಯಗಳು ಬಂದಮೇಲೆ ಅವುಗಳನ್ನು ಸರಿಪಡಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು, ಆದುದರಿಂದ ಈ ಸಹಕಾರ ಸಂಘಗಳ ಆಡಿಟ್ ಆದ ನಂತರ, ರೀ-ಆಡಿಟ್ ಮಾಡತಕ್ಕ ವ್ಯವಸ್ಥೆ ಮಾಡಿ, ನ್ಯೂನತೆಗಳ ಬಗ್ಗೆ ತಕ್ಷಣ ಕ್ರಮ ತೆಗೆದುಕೊಂಡರೆ, ಆಗ ಅವರಿಗೂ ಭಯ ಬರುತ್ತದೆ, ಸಹಕಾರ ಸಂಘಗಳು ಉಳಿಯುತ್ತವೆ. ಇನ್ನು ಬೀಡಿ ಕಟ್ಟುವಂಥ ಸಹಕಾರ ಸಂಘಗಳನ್ನು ರಚಿಸಬೇಕೆಂದು ಹಿಂದೆಯೇ ಹೇಳಿದ್ದೇವೆ. ಈ ವಿಚಾರದಲ್ಲಿ ಕೇಂದ್ರಸರ್ಕಾರ, ರಾಜ್ಯಸರ್ಕಾರಕ್ಕೆ ಅನುಕೂಲ ಮಾಡಿಕೊಡಬೇಕು. ಕೇರಳದಲ್ಲಿ ದಿನೇಶ್ ಬೀಡಿ ಸಹಕಾರ ಸಂಘ ಎಂದು ಇದೆ. ಅಲ್ಲಿ ಬೀಡಿ ಕಟ್ಟುವಂಥ ಕೂಲಿಗಾರರಿಗೆ ಹೆಚ್ಚಿನ ಕೂಲಿ ಸಿಕ್ಕುತ್ತದೆ. ನಮ್ಮಲ್ಲಿಯೂ ಸಹ ಇದಕ್ಕೆ ಬೇಕಾದ ಎಲೆ, ಹೊಗೆಸೊಪ್ಪು ಸಿಕ್ಕುತ್ತದೆ. ಆದ್ದರಿಂದ ಇಲ್ಲಿಯೂ ಕೂಡ ಇದರ ಬಗ್ಗೆ ಒಂದು ಸಹಕಾರ ಸಂಘ ಮಾಡಬಹುದು. ಬಹಳ ವರ್ಷಗಳಿಂದ ಇದು ಚರ್ಚೆಗೆ ಬಂದಿದ್ದರೂ ಕೂಡ ಅದನ್ನು ಕಾರ್ಯರೂಪಕ್ಕೆ ತರುವಂಥ ಪ್ರಯತ್ನ ಮಾಡಿಲ್ಲ. ಇದರ ಅವಶ್ಯಕತೆ ಇಲ್ಲಿ ಇಲ್ಲವೇ ಎಂಬುದನ್ನು ಕೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ,

ಮತ್ತೆ ಸ್ಥಳೀಯವಾಗಿ ವಿದ್ಯುತ್ ಉತ್ಪಾದನೆ ಮಾಡುವ ದೃಷ್ಟಿಯಿಂದ, ಬಂಡವಾಳವನ್ನು ಹಾಕಿ ವಿದ್ಯುತ್ ಬಳಕೆದಾರರ ಒಂದು ಹೊಸ ಸಹಕಾರ ಸಂಘವನ್ನು ಸ್ಥಾಪನೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೀರಿ. ಅವರಿಗೆ ಬೇಕಾದಂಥಾ ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ, ವಿದ್ಯುತ್ ಕೊರತೆ ಇದ್ದಂಥಾ ಸಂದರ್ಭದಲ್ಲಿ ಸಾಕಷ್ಟು ವಿದ್ಯುತ್‌ನ್ನು ಒದಗಿಸಿಕೊಡುವುದಕ್ಕೆ ಈವೊತ್ತು ಈ ಒಂದು ಹೊಸ ಸಹಕಾರ ಸಂಘವನ್ನು ಸ್ಥಾಪನೆ ಮಾಡಿದ್ದೀರಿ. ಆದರೆ ಈ ಸಹಕಾರ ಸಂಘ ಸ್ಥಾಪನೆ ಆಗುವುದು ಯಾರಿಗೆ ಗೊತ್ತಿದೆ ? ಈ ಸಹಕಾರ ಸಂಘವನ್ನು ಪ್ರಾರಂಭ ಮಾಡುವ ದೂರದೃಷ್ಟಿ ಚೆನ್ನಾಗಿದ್ದರೂ ಕೂಡ ಇದರ ಬಗ್ಗೆ ಮುಂದೇನು ಮಾಡಬೇಕೆನ್ನುವುದನ್ನು ಚಿಂತನೆ ಮಾಡಿದ್ದೀರಾ ? ನಮ್ಮಲ್ಲಿರುವ ಎಷ್ಟೋ ಸಹಕಾರ ಸಂಘಗಳು ಫೈಲ್ಯೂರ್ ಆಗುವುದಕ್ಕೆ ಕಾರಣ ಏನು ಅನ್ನುವುದನ್ನು ತಮ್ಮ ಉತ್ತರದಲ್ಲಿ ತಿಳಿಸಬೇಕಾಗಿತ್ತು. ಮಾನ್ಯ ಕೆ. ಹೆಚ್. ಪಾಟೀಲರು ಮಾತನಾಡುತ್ತಾ ಈ ಸಕ್ಕರೆ ಕಾರ್ಖಾನೆಗಳು ಈವೊತ್ತಿನ ದಿವಸ ಬಹಳ ಚಿಂತಾಜನಕವಾಗಿದೆ ಎಂದರು. ಇದನ್ನು ಸುಧಾರಣೆ ಮಾಡುವುದಕ್ಕೆ ತಾವೇನಾದರೂ ಯೋಚನೆ ಮಾಡಿದ್ದೀರಾ ? ಎಷ್ಟೋ ಸಹಕಾರ ಸಂಘಗಳು ಫೈಲ್ಯೂರ್ ಆಗಿದ್ದರೂ ಸಹ ಮತ್ತೆ ಹೊಸದಾಗಿ ಇನ್ನೊಂದು ಸಹಕಾರ ಸಂಘವನ್ನು ಪ್ರಾರಂಭ ಮಾಡುವುದು ನಿಷ್ಫಲವಾಗುತ್ತದೆ. ಉದಾಹರಣೆಗೆ ಈಗ ಬ್ರಹ್ಮಾವರ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಿದ್ದೀರಿ. ಅದಕ್ಕೆ ೮ ಕೋಟಿ ರೂಪಾಯಿಯನ್ನು ಇನ್‌ವೆಸ್ಟ್ ಮಾಡಿದ್ದೀರಿ. ಏತಕ್ಕೆ ಆ ಸಕ್ಕರೆ ಕಾರ್ಖಾನೆಯನ್ನು ಅಷ್ಟು ಬಂಡವಾಳ ಹಾಕಿ ಸ್ಥಾಪನೆ ಮಾಡಿದ್ದು ಎಂದರೆ, ಮುಂದೆ ವರಾಹಿ ಯೋಜನೆ ಬರುತ್ತದೆ, ಆವಾಗ ಆ ರೈತರಿಗೆ ನೀರಿನ ಅನುಕೂಲ ಮಾಡಿ ಕೊಟ್ಟರೆ ಆ ಕಾರ್ಖಾನೆಗೆ ಒಳ್ಳೆಯದಾಗುತ್ತದೆಂದು ತಾವು ಯೋಚನೆ ಮಾಡಿದ್ದೀರಿ, ಶರಾವತಿ ಯೋಜನೆಗೆ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ ಎಂದು ತಾವು ಯೋಚನೆ ಮಾಡಿದ ಮೇಲೆ ಮುಂದೆ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಆದಕ್ಕೆ ಏನು ದುಡ್ಡನ್ನು ತೆಗೆದು ಇಡಬೇಕಾಗಿತ್ತೋ ಅದನ್ನು ಇಟ್ಟಿಲ್ಲ, ಪ್ರಪ್ರಥಮವಾಗಿ ಈ ಸಕ್ಕರೆ ಕಾರ್ಖಾನೆಗೆ ೮ ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ ಮೇಲೆ ಅದು ಸರಿಯಾಗಿ ನಡೆಯಲು ನೀವು ಮುಂದೆ ನಿಂತುಕೊಂಡು ಕೆಲಸ ಮಾಡಬೇಡವೇ ? ಈಗ ಆ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಹಾಗೆಯೇ ನಿಂತಿದೆ. ಇಲ್ಲವೇ ಅಲ್ಲಿ ಒಂದು ಲಿಫ್ಟ್ ಇರ್ರಿಗೇಷನ್ ಆದರೂ ಮಾಡಿದ್ದರೆ, ರೈತನಿಗೆ ಕಬ್ಬು ಬೆಳೆಯುವ ವ್ಯವಸ್ಥೆಯನ್ನಾದರೂ ಮಾಡಿಕೊಟ್ಟಿದ್ದರೆ ಆಗಲಾದರೂ ಅನುಕೂಲವಾಗುತ್ತಿತ್ತು. ಅದೂ ಮಾಡಲಿಲ್ಲ. ಈಗ ನೀವು ಹೊಸ ಸಹಕಾರ ಸಂಘ ಮಾಡಿದ್ದೀರಲ್ಲಾ ಇದರ ಬಗ್ಗೆ ನಿಮ್ಮ ಕಣ್ಣು ಮುಂದೆ ಸ್ಪಷ್ಟ ಚಿತ್ರ ಎಲ್ಲಿದೆ ಹೇಳಿ ? ಸಹಕಾರ ಸಂಘವನ್ನು ಯಾರಾದರೂ ಇನ್‌ಫ್ಲುಯೆನ್ಸ್ ಮಾಡಿ ಪ್ರಾರಂಭ ಮಾಡಬಹುದು, ಅದರ ಉದ್ದೇಶ ಅದು ಉದ್ಧಾರವಾಗಬೇಕೆನ್ನುವುದು. ಅದಕ್ಕೆ ಬೇಕಾದ ಷೇರ್ ಅನ್ನೂ ಸಹ ಕಲೆಕ್ಟ್ ಮಾಡಿ, ಅದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ ಮೇಲೆ, ಅದಕ್ಕೆ ಏನೇನು ಸೌಲಭ್ಯಗಳನ್ನು ಒದಗಿಸಿಕೊಡಬೇಕೋ ಅದನ್ನು ಒದಗಿಸಿಕೊಟ್ಟು ಉದ್ಧಾರ ಮಾಡಿದರೆ ಒಳ್ಳೆಯದು, ಇಲ್ಲದೇ ಹೋದರೆ ಅದಕ್ಕೆ ಇನ್‌ವೆಸ್ಟ್ ಮಾಡತಕ್ಕಂಥಾ ಕೋಟ್ಯಾಂತರ ರೂಪಾಯಿಗಳೆಲ್ಲ

ಹಾಳಾಗುತ್ತದೆ. ಈ ದೃಷ್ಟಿಯಿಂದ ಈ ಬಗ್ಗೆ ಎಚ್ಚರ ವಹಿಸಿ ಕೆಲಸ ಮಾಡಬೇಕು ಎಂದು ನಾನು ಹೇಳುವುದು. ಅಲ್ಲದೆ ಈ ಬಗ್ಗೆ ಅಧಿಕಾರಿಗಳ ಸಲಹೆಗಳನ್ನೂ ತೆಗೆದುಕೊಳ್ಳಿ. ಅನುಭವಿಯಾದ ರಾಜಕಾರಣಿಗಳೂ ಇದ್ದಾರೆ, ಅದರ ಜೊತೆಗೆ ಅನುಭವ ಇರತಕ್ಕಂಥಾ ತಜ್ಞರು ಏನು ಇದ್ದಾರೆ, ಅವರ ಜೊತೆಯಲ್ಲಿ ಚರ್ಚೆ ಮಾಡಿ ಯಾವುದನ್ನು ಮಾಡಿದರೆ ಒಳ್ಳೆಯದು ಎನ್ನುವುದನ್ನು ನೋಡಿಕೊಂಡು ನಿರ್ಧಾರ ಮಾಡಬೇಕೇ ಹೊರತು ಒಂದು ಕಡೆಯಿಂದ ಶುರು ಮಾಡುವುದು, ಮತ್ತೊಂದು ಕಡೆಯಿಂದ ಮುಚ್ಚುವುದು, ಈ ರೀತಿ ಮಾಡುವುದು ಬೇಡ. ಯಾವುದೇ ಸಂಘವನ್ನು ಪ್ರಾರಂಭ ಮಾಡಬೇಕಾದರೂ ಕೂಡ ಅದರಲ್ಲಿ ಅವ್ಯವಹಾರವಾಗದಂತೆ ಸರಿಯಾಗಿ ನೋಡಿಕೊಳ್ಳುವ ಹಾಗೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ನನಗೆ ಬಹಳ ಅವಶ್ಯಕತೆ ಇರತಕ್ಕಂಥ ಗ್ರಾಮೀಣ ಅಭಿವೃದ್ಧಿ ಬಗ್ಗೆ ಹೇಳುತ್ತೇನೆ. ಮುಂದೆ ಜಿಲ್ಲಾ ಪರಿಷತ್, ಮಂಡಲ ಪಂಚಾಯತ್ ಬಗ್ಗೆ ಒಂದು ಹೊಸ ಎಕ್ಸ್‌ಪೆರಿಮೆಂಟ್ ಅನ್ನು ಮಾಡುವುದಕ್ಕೆ ಹೊರಟ್ಟಿದ್ದೀರಿ. ಅದು ಒಳ್ಳೆಯದು. ಈ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ಒಂದು ಹೊಸ ಎಕ್ಸ್‌ಪೆರಿಮೆಂಟ್ ಮಾಡುವುದಕ್ಕೆ ಏನು ಹೊರಟಿದ್ದೀರೋ, ಇದರ ಹಣಕಾಸಿನ ವ್ಯವಸ್ಥೆ ಬಗ್ಗೆ ಏನಾದರೂ ತಾವು ಯೋಜನೆ ಮಾಡಿದ್ದೀರಾ ? ಇದರಿಂದ ಮುಂದೆ ಜನತೆಗೆ ಏನೇನು ನ್ಯೂನತೆಗಳು ಕಂಡುಬರುತ್ತವೆ, ಏನೇನು ಅನುಕೂಲವಾಗುತ್ತದೆ, ಮತ್ತು ಇದು ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತದೆ ಎನ್ನುವುದನ್ನು ನಾವು ಕಾದು ನೋಡಬೇಕಾಗಿದೆ. ಇದರ ಬಗ್ಗೆ ಈಗಲೇ ಚಿಂತನೆ ಮಾಡಿದರೆ ಒಳ್ಳೆಯದು. ಈ ಜಿಲ್ಲಾ ಪರಿಷತ್‌ಗಳು ಮತ್ತು ಮಂಡಲ್ ಪಂಚಾಯತ್‌ಗಳು ಅಧಿಕಾರಕ್ಕೆ ಬರತಕ್ಕಂಥಾ ಸಂದರ್ಭದಲ್ಲಿ ಈಗ ಪಂಚಾಯಿತಿಗಳಲ್ಲಿ ಏನು ೧೨-೧೩ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ, ಅವರ ಬಗ್ಗೆಯೂ ಚಿಂತನೆ ಮಾಡಬೇಕಾಗಿದೆ. ನಾಳೆ ದಿವಸ ಅವರೆಲ್ಲರೂ ಬೆಂಗಳೂರಿಗೆ ಬಂದು ಶಾಸಕರನ್ನು ಹಿಡಿದು, ಇಲ್ಲವೇ ಅವರು ವಿಧಾನ ಸಭೆಯೊಳಗೆ ಕೂಗುವ ಹಾಗೆ ಮಾಡಬೇಡಿ. ಅವರ ಸಮಸ್ಯೆಯನ್ನೂ ಬಗೆಹರಿಸುವುದಕ್ಕೆ ತಾವು ಏನು ಮಾಡುತ್ತೀರಿ ಅನ್ನುವುದನ್ನು ನಮಗೆ ತಿಳಿಸಬೇಕು. ಅವರು ಮುಂದೆ ಬೆಂಗಳೂರಿಗೆ ಬಂದು ಗಲಾಟೆ ಮಾಡುವುದನ್ನು ತಪ್ಪಿಸುವ ವ್ಯವಸ್ಥೆ ಮಾಡಿ. ಅವರ ಬಗ್ಗೆ ಸಿ ಅಂಡ್ ಆರ್. ರೂಲ್ಸನ್ನು ಇನ್ನೂ ಮಾಡಿಲ್ಲ. ಅದು ಇನ್ನೂ ಅನಿಶ್ಚಿತವಾಗಿದೆ. ಅಲ್ಲಿರುವ ೧೨-೧೩ ಸಾವಿರ ಜನ ನೌಕರರ ಬಗ್ಗೆ ಯೋಚನೆ ಮಾಡಿ, ಅವರನ್ನು ಇದರಲ್ಲಿ ಅಳವಡಿಕೊಳ್ಳುವ ಹಾಗೆ ತಾವು ಚಿಂತನೆ ಮಾಡಬೇಕಾಗಿದೆ. ಹೊಸಬರನ್ನು ತೆಗೆದುಕೊಳ್ಳದೇ ಇರುವವರನ್ನೇ ಖಾಯಂ ಮಾಡುವ ಹಾಗೆ ವ್ಯವಸ್ಥೆ ಮಾಡಬೇಕು. ದಯಮಾಡಿ ಅವರೆಲ್ಲರೂ ಸೇರಿಕೊಂಡು ಚಳುವಳಿ ಮಾಡುವುದಕ್ಕೆ ಅವಕಾಶ ಕೊಡದೇ ಇರುವ ರೀತಿಯಲ್ಲಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ಅಂದುಕೊಂಡಿದ್ದೇನೆ.

ಇನ್ನು ಬೋರ ವೆಲ್ಸ್ ಬಗ್ಗೆ ಹೇಳಬೇಕಾದರೆ, ಭೀಕರ ಬರಗಾಲದಲ್ಲಿ ನೀರಿನ ಸಮಸ್ಯೆ ಬಹಳ ಪ್ರಾಧಾನ್ಯ. ಈಗ ಸೈಕ್ಲೋನ್ ರಿಗ್ಸ್ ಮತ್ತು ಹೈಡ್ರೋಲಿಕ್ಸ್ ರಿಗ್ಸ್ ಅಂತ ಏನು ಇವೆ ಅವುಗಳನ್ನು ಎಲ್ಲೆಲ್ಲಿಗೆ ಕಳುಹಿಸಿದ್ದೀರಿ, ಈವಾಗ ಎಷ್ಟು ರಿಗ್ ಇದೆ ಅನ್ನುವುದನ್ನು ತಾವು ಹೇಳಬೇಕು, ಮುಂದೆ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಈ ನೀರಿನ ಸಮಸ್ಯೆ ಬರುತ್ತದೆ. ಈಗ ಸಾವಿರಾರು ಬೋರ್‌ವೆಲ್ಸ್‌ನ್ನು ತೆಗೆಯುತ್ತಾ ಇದ್ದೀರಿ. ಆದರೆ ಅದರಲ್ಲಿ ಎಷ್ಟು ನೀರು ನಿಂತಿರುತ್ತದೆ ಅನ್ನುವುದರ ಅನುಭವ ಇಲ್ಲ. ಆ ಬೋರ್‌ವೆಲ್‌ಗಳನ್ನು ಎಷ್ಟು ಆಳದವರೆಗೆ ತೆಗೆಯಬೇಕೋ ಅಷ್ಟು ಆಳದವರೆಗೆ ತೆಗೆಯುತ್ತಾ ಇಲ್ಲ. ಒಂದು ಸಾರಿ ಚೀಫ್ ಇಂಜನೀಯರ್ ಸಹ ಬಂದು ನೋಡಿದ್ದಾರೆ. ಅವರು ಅಧಿಕಾರಿಗಳಿಗೆ ಎಷ್ಟು ಆಳ ತೆಗೆಯಬೇಕೋ ಅಷ್ಟು ತೆಗೆಯಿರಿ ಅಂತ ಹೇಳಿದರು. ಆದರೆ ಅಧಿಕಾರಿಗಳು ಒಂದು ದೊಡ್ಡ ಜಾಲ ಬರೇ ಬಿಲ್ ಮಾಡಿ ಆ ಕಂಟ್ರಾಕ್ಟರಿಗೆ ಹಣ ಕೊಡಿಸುತ್ತಾರೆಯೇ ವಿನಾ ಸರಿಯಾಗಿ ಕೆಲಸ ಮಾಡುವುದಿಲ್ಲ. ಇದು ನಾಚಿಕೆ ಗೇಡುತನವಲ್ಲವೇ ? ೧೦೦ ಅಡಿ ಬೋರ್ ಹಾಕಿದರೂ ಸಹ ಕೆಲವು ಕಡೆ ನೀರೆ ಸಿಕ್ಕಿಲ್ಲ. ಬಿಲ್ ಮಾತ್ರ ತೆಗೆದುಕೊಳ್ಳುತ್ತಾರೆ. ಇದಕ್ಕೆ ಯಾವ ಅಧಿಕಾರಿಗಳು ಶಾಮೀಲಾಗಿದ್ದಾರೆ ಅವರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಬಡವರು ಕೊಟ್ಟಂಥಾ ತೆರಿಗೆ ಹಣ ಬರೇ ಅಪವ್ಯಯವಾಗುತ್ತದೇ ವಿನಾ ಜನರಿಗೆ ಉಪಯೋಗವಾಗುವುದಿಲ್ಲ. ಆದುದರಿಂದ ತಾವು ಈಗ ಇದರಲ್ಲಿ ಆಗುತ್ತಾ ಇರತಕ್ಕಂಥಾ ನ್ಯೂನತೆಗಳನ್ನು ಸರಿಮಾಡಿಕೊಂಡು ಮುಂದಿನ ಏಪ್ರಿಲ್ ಮೇ ತಿಂಗಳಿನಲ್ಲಿ ಬರಗಾಲದ ಸಮಸ್ಯೆ ಇರುವುದರಿಂದ ಈ ನೀರಿನ ಸಮಸ್ಯೆಯನ್ನು ತಾವು ಎದುರಿಸುವುದಕ್ಕೆ ಈಗಲೇ ತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕು. ಹಾಗೆ ಮಾಡದೇ ಹೋದರೆ ಮುಂದೆ ಬರತಕ್ಕಂಥಾ ಜಿಲ್ಲಾ ಪರಿಷತ್

ಚುನಾವಣೆ ಮತ್ತು ಮಂಡಲ ಪಂಚಾಯತ್ ಚುನಾವಣೆಯ ಓಟು ನಿಮ್ಮ ಕಡೆಗೆ ಬರದೇ ಬೇರೆ ಕಡೆಗೆ ಹೋಗುತ್ತದೆ. ನಿಮಗೆ ಸಿಕ್ಕುವುದಿಲ್ಲ. ಆದುದರಿಂದ ನೀವು ತಕ್ಷಣವೇ ರೈತರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕು ಮತ್ತು ಶಂಕರಿಕೊಪ್ಪ ಅವರ ರಿಪೋರ್ಟ್ ಏನು ಇದೆ ಅದನ್ನು ಜಾರಿಗೆ ಕೊಡಬೇಕು. ಈ ಬಗ್ಗೆ ಮಾನ್ಯ ಆರ್. ಎಲ್. ಜಾಲಪ್ಪನವರು ಎಚ್ಚರಿಕೆ ವಹಿಸಬೇಕೆಂದು ಹೇಳಿ, ನನಗೆ ನಾಲ್ಕಾರು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಎಸ್. ಆಚಾರ್.— ಮಾನ್ಯ ಅಧ್ಯಕ್ಷರೇ, ಅತ್ಯಂತ ಪ್ರಮುಖವಾದಂಥಾ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್, ಸಹಕಾರ ಮತ್ತು ಮಾರ್ಕೆಟಿಂಗ್ ಇಲಾಖೆಗಳ ಬೇಡಿಕೆಗಳನ್ನು ನಾನು ಇದರ ಅನುಷ್ಠಾನದಲ್ಲಿರುವ ಲೋಪದೋಷಗಳಿಗಾಗಿ ವಿರೋಧಿಸುತ್ತೇನೆ. ನಾನು ಈಗ ಮೊಟ್ಟಮೊದಲನೆಯದಾಗಿ ಅತಿ ಮುಖ್ಯವಾಗಿರತಕ್ಕಂಥಾ ಗ್ರಾಮೀಣ ಅಭಿವೃದ್ಧಿ ಹಾಗೂ ಗ್ರಾಮ ಪಂಚಾಯತ್ ರಾಜ್ ಬಗ್ಗೆ ಮಾತನಾಡುವುದಕ್ಕೆ ಪ್ರಾರಂಭ ಮಾಡುತ್ತೇನೆ. ಏತಕ್ಕೆಂದರೆ ನಮ್ಮ ಹಿರಿಯ ನಾಯಕರಾದ ಶ್ರೀ ಕೆ. ಹೆಚ್. ಪಾಟೀಲರು ಈ ಸಹಕಾರ ಇಲಾಖೆಯ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ. ಗ್ರಾಮ ಪಂಚಾಯಿತಿ ಆಡಳಿತ ಕುರಿತು ಹೇಳುವುದಕ್ಕೆ ಸಾಕಷ್ಟು ಸಮಯ ಇಲ್ಲದಿದ್ದರೂ ಮುಖ್ಯವಾದ ವಿಷಯಗಳನ್ನು ಮಾತ್ರ ಹೇಳುತ್ತೇನೆ. ಈ ಗ್ರಾಮೀಣ ಅಭಿವೃದ್ಧಿ ಬಗ್ಗೆ ಹೇಳಬೇಕಾದರೆ ಭಾರತದ ೬ ಲಕ್ಷ ಹಳ್ಳಿಗಳ ೬೦ ಕೋಟಿ ಜನರ ಬದುಕಿಗೆ ಹೊಸ ಆಯಾಮವನ್ನು ನೀಡುವ ಕಾರ್ಯಕ್ರಮ ಇದಾಗಿದೆ. ತಿನ್ನಲು ಅನ್ನವಿಲ್ಲದ, ಕುಡಿಯಲು ನೀರಿಲ್ಲದ, ಇರಲು ಆಸರೆ ಇಲ್ಲದ, ಆರೋಗ್ಯವಿಲ್ಲದ, ವಿದ್ಯೆಯಿಲ್ಲದೆ, ದುಡಿಯಲು ಉದ್ಯೋಗವಿಲ್ಲದೆ ಜನರಿಗೆ ನೆರವು ನೀಡಿ ಒಳ್ಳೆಯ ಬದುಕಿಗೆ ದಾರಿ ತೋರಿಸಿ, ಗ್ರಾಮೀಣ ಉತ್ಪಾದನೆ ಹೆಚ್ಚಿಸುವ ದಿಕ್ಕಿನಲ್ಲಿ ಸಾಮಾಜಿಕ ಕೆಲಸಗಳನ್ನು ಮಾಡಬೇಕಾದ ಆರ್ಥಿಕ ಕಾರ್ಯಕ್ರಮ ಇದಾಗಿರಬೇಕು. ಒಳ್ಳೆಯ ದಿಕ್ಕಿನಲ್ಲಿ ಮಾಡುವ ಕಾರ್ಯಕ್ರಮ ಇದಾಗಿರಬೇಕು. ಆದರೆ ದುರದೃಷ್ಟವಶಾತ್ ನಮ್ಮ ರಾಜ್ಯದ ಅನೇಕ ವಿಭಾಗಗಳಲ್ಲಿ ಇದು ವಿಫಲವಾಗಿದೆ. ನನಗೆ ಬಂದಿರತಕ್ಕಂಥಾ ಮಾಹಿತಿ ಪ್ರಕಾರ ನಮ್ಮ ರಾಜ್ಯದಲ್ಲಿ ೨೦ ಅಂಶಗಳ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಯೋಜನಾ ಆಯೋಗದ ನಿರ್ಧಾರದಂತೆ ೧೩ ಅಂಶಗಳಲ್ಲಿ ಸರಾಸರಿ ಪ್ರಗತಿ ಕಡಿಮೆಯಾಗಿದೆ. ಸರಾಸರಿ ಪ್ರಗತಿ ಕಡಿಮೆಯಾಗಿರುವುದು ಈ ರೀತಿ ಇದೆ.—(೧) ಆರ್‌ಎಲ್‌ಜಿಪಿ (೨) ಹೆಚ್ಚುವರಿ ಭೂಮಿ (೩) ಜೀತಕಾರ್ಮಿಕ (೪) ಪರಿಶಿಷ್ಟ ಜಾತಿ ಕಲ್ಯಾಣ (೫) ಪರಿಶಿಷ್ಟ ಪಂಗಡ ಕಲ್ಯಾಣ (೬) ಮನೆ ನಿವೇಶನಗಳು (೭) ನಿರ್ಮಾಣ ಸಹಾಯ (೮) ಕೊಳಗೇರಿ ಅಭಿವೃದ್ಧಿ (೯) ಇಡಬ್ಲ್ಯೂಎಸ್ ಮನೆಗಳು (೧೦) ಪ್ರಾಥಮಿಕ ಆರೋಗ್ಯ ಕೇಂದ್ರಗಳು (೧೧) ಎಎನ್‌ಎಂ ಉಪ ಕೇಂದ್ರಗಳು (೧೨) ಐಆರ್‌ಡಿಪಿ ಈ ಸಾಲಿನ ಬಡ್ಜೆಟ್ ಭಾಷಣದಲ್ಲಿ ಇದು ಗೊತ್ತಾಗಿದೆ. ಅಂದರೆ ದುರ್ಬಲ ವರ್ಗದವರಿಗಾಗಿ ನಿಯೋಜಿತವಾದ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಕೈಗೊಳ್ಳಲು ಈ ಸರ್ಕಾರ ವಿಫಲವಾಗಿದೆ. ಇದರಲ್ಲಿ ಯಾವ ಅನುಮಾನವೂ ಇಲ್ಲ. ಉದಾಹರಣೆಗಾಗಿ ಎನ್‌ಆರ್‌ಇಪಿ ತೆಗೆದುಕೊಂಡರೆ, ಇದರಲ್ಲಿ ೧೯೮೪-೮೫ರ ಸಾಧನೆ ೫೨೨೪ ೪೬ ಲಕ್ಷ ೧೯೮೫-೮೬ರ ಪರಿಷ್ಕೃತ ಅಂದಾಜು ೭೫೩೩೫-೦೦, ಇದರ ಸಾಧನೆ ೧೯೧೦ ಲಕ್ಷ. ೧೯೮೬-೮೭ರಲ್ಲಿ ಗುರಿ ೨೧೦೦೦-೦೦, ಇದರಲ್ಲಿ ನಿಮ್ಮ ಗುರಿ ಏನು ಇದೆ ಅನ್ನುವುದು ತೋರಿಸುತ್ತದೆ. ಇದರ ಉದ್ದೇಶ ಏನೆಂದರೆ ಗ್ರಾಮೀಣ ಜನರಿಗೆ ಹೆಚ್ಚಿನ ಲಾಭದಾಯಕ ಉದ್ಯೋಗ ನೀಡುವುದು. ಈ ಎನ್‌ಆರ್‌ಇಪಿ ನಲ್ಲಿ ಮುಖ್ಯವಾದ ಕಾರಣ ಇಷ್ಟು. (1) to generate additional employment (2) to create durable community assets (3) to improve nutritional status and living standards of rural people. ಈ ದೃಷ್ಟಿಯಿಂದ ಇದು ರೂಪಿತವಾಗಿದೆ. ಪ್ರಕೃತ ಇದು ಅಧಿಕಾರಿಗಳು ರೂಪಿಸಿದ ಕಂಟ್ರಾಕ್ಟುದಾರರ ಯೋಜನೆ ಆಗಿದೆ. ಕಂಟ್ರಾಕ್ಟುದಾರರಿಗೆ, ಅಧಿಕಾರಿಗಳಿಗೆ ಬೇಕಾದ ಜನರಿಗೆ ಕೆಲಸ ಕೊಡತಕ್ಕಂಥಾ ಇದು ಒಂದು ಉದ್ಯೋಗದ ಕಾರ್ಯಕ್ರಮವಾಗಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

೬-೦೦ ಪಿ.ಎಂ.

ಇನ್ನು ಆರ್.ಎಲ್.ಇ.ಜಿ.ಪಿ. ಬಗ್ಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ಈ ಕಾರ್ಯಕ್ರಮಗಳಲ್ಲಿರುವ ಲೋಪಗಳನ್ನು ಎತ್ತಿ ತೋರಿಸುತ್ತದೆ. ಬರೀ ಲೋಪ ಮಾತ್ರ ಹೇಳುತ್ತೇನೆ ಎಂದು ತಾವು

ತಿಳಿದುಕೊಳ್ಳಬಾರದು, ಏಕೆಂದರೆ. ಸಮಯದ ಅಭಾವ ಇರುವುದರಿಂದ ಇಷ್ಟು ಮಾತ್ರ ಹೇಳುತ್ತೇನೆ. ಏನೆಂದರೆ ಆರ್.ಎಲ್.ಇ.ಜಿ.ಪಿ.ಯಲ್ಲಿ ೧೯೮೫–೮೬ರ ಪರಿಷ್ಕೃತ ಗುರಿ ೨೭೨೫ ಲಕ್ಷ, ಸಾಧನೆ ೯೩೫ ಲಕ್ಷ. ಬರುವ ವರ್ಷದ ಗುರಿ ಈ ವರ್ಷಕ್ಕಿಂತ ಕಡಿಮೆ ಇದೆ. ೧೯೮೬–೮೭ರ ಗುರಿ ೨೫೧೧ ಲಕ್ಷ. ಅದೇ ರೀತಿ ಗ್ರ್ಯಾಂಟ್ಸ್ ಟು ಅವಾರ್ಡ್ಸ್ ಟು ಪಂಚಾಯತ್ಸ್ ೨೫ ಸಾವಿರ ಇಟ್ಟಿದ್ದಾರೆ. ಜಿಲ್ಲಾ ಪರಿಷತ್‌ಗೆ ೦.೦೧ ಲಕ್ಷ ಅಂದರೆ ಒಂದು ಸಾವಿರ ಅಂದರೆ ಪ್ಲಾನ್‌ನಲ್ಲಿ ಒಂದು ಸಾವಿರ, ನಾನ್ ಪ್ಲಾನ್‌ನಲ್ಲಿ ಒಂದು ಸಾವಿರ ಇಟ್ಟಿದ್ದಾರೆ. ಹೊಸ ಮೌಲ್ಯದ ಸಂಸ್ಥೆಗಳ ಮೇಲೆ ಸರ್ಕಾರ ಎಷ್ಟೊಂದು ಕಳಕಳಿ ಇವರಿಗೆ ಇದೆ ಎನ್ನುವುದು ಇದರಿಂದ ತಿಳಿಯುತ್ತದೆ ಪುರಸಭೆಗಳ, ಗ್ರಾಮೀಣ ಜನರ ಹಾಗೂ ಪಟ್ಟಣದಲ್ಲಿರತಕ್ಕವರ ಮಧ್ಯಂತರವನ್ನು ಕಡಿಮೆ ಮಾಡುತ್ತೇವೆ ಎಂದು ಬಡ್ಜೆಟ ನಲ್ಲಿ ಉಲ್ಲೇಖ ಇದೆ. ಆದರೆ ಪುರಸಭೆಗಳಿಗೆ ಲಕ್ಷ ಲಕ್ಷ ಗ್ರ್ಯಾಂಟನ್ನು. ಅನುದಾನವನ್ನು ಕೊಡುವುದನ್ನು ಇತ್ತೀಚೆಗೆ ನೋಡಿದ್ದೇವೆ. ಇದರಿಂದ ಗ್ರಾಮೀಣ ಸಂಸ್ಥೆಗಳ ಬಗ್ಗೆ ಇವರಿಗೆ ಎಷ್ಟು ಕಳಕಳಿ ಇದೆ ಎನ್ನುವುದು ತಿಳಿಯುತ್ತದೆ. (೩೧೪) ಕಮ್ಯುನಿಟಿ ಡೆವಲಪ್‌ಮೆಂಟ್‌ನಲ್ಲಿ ಬೋರ್‌ವೆಲ್ಸ್ ೧೯೮೫–೮೬ರಲ್ಲಿ ರಿವೈಸ್ಡ್ ಎಸ್ಟಿಮೇಟ್ ಅಂದರೆ ಗುರಿ ೨೩೬೧.೫೯ ಲಕ್ಷ, ಸಾಧನೆ ೧೯೮೬–೮೭ರಲ್ಲಿ ೫೯೩.೪೦ ಲಕ್ಷ. ಎ.ಆರ್.ಡಬ್ಲು.ಎಸ್. ೧೯೮೫–೮೬ ರಲ್ಲಿ ಗುರಿ ೯೦೦–೨೦ ಲಕ್ಷ, ಸಾಧನೆ ೧೯೮೬–೮೭ರಲ್ಲಿ ೬೪೪–೪೦ ಲಕ್ಷ. ಬೋರ್‌ವೆಲ್ಸ್ ಎಲ್ಲಿ ಆಗುತ್ತದೆ ಅಂದರೆ ಮುಖ್ಯ ರಸ್ತೆಯ ಬದಿಯಲ್ಲಿ ಮಾತ್ರ ಆಗುತ್ತದೆ, ಹಳ್ಳಿಗೆ ಹೋಗುವುದಿಲ್ಲ. ನಮ್ಮ ಕಡೆ ಸಲೈನ್ ವಾಟರ್ ಇರುವಂಥ ಪ್ರದೇಶದಲ್ಲಿ ನೆರೆ ಪ್ರದೇಶದಲ್ಲಿ ಏಕೆ ಆಗುವುದಿಲ್ಲ? ಅಲ್ಲಿ ಸಂರಕ್ಷಿತ ನೀರು ಸರಬರಾಜು ಆಗಬೇಕು. ಗ್ರಾಮಾಭಿವೃದ್ಧಿಯ ಬಗ್ಗೆ ಮಾನ್ಯ ಸಚಿವರಲ್ಲಿ ನಾವು ವಿಶೇಷವಾಗಿ ಹೇಳಿದ್ದೇವೆ. ಈ ರೀತಿಯ ಯಾವುದೇ ಕಾರ್ಯಕ್ರಮ ಅಲ್ಲಿ ರೂಪುಗೊಳ್ಳಲಿಲ್ಲ ಎಂದು ಹೇಳುತ್ತೇನೆ. ಇನ್ನು ಪರ್‌ಫಾರ್ಮೆನ್ಸ್ ಬಡ್ಜೆಟ್‌ನಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಲ್ಯಾಂಡ್ ರಿಫಾರ್ಮ್ಸ್ ಸೆಂಟ್ರಲ್ ಸೆಕ್ಟರ್ ಸ್ಕೀಮ್ಸ್‌ನಲ್ಲಿ ೧೯೮೫–೮೬ರ ಗುರಿ ಸಾಧನೆ ಹೀಗಿದೆ. ಗುರಿ ೪೮ ಲಕ್ಷ ಇದ್ದರೆ ಸಾಧನೆ ೨೦ ಲಕ್ಷ ಮಾತ್ರ ಇದೆ. ನೇಗಿಲು ಭಾಗ್ಯ ಯೋಜನೆಯಲ್ಲಿ ಗುರಿ ೪೫ ಲಕ್ಷ ಇದ್ದರೆ ಸಾಧನೆ ೩೪.೮೧ ಲಕ್ಷ ಇದೆ. ೧೦೦ ವೆಲ್ಸ್ ಪ್ರೋಗ್ರಾಮಿನಲ್ಲಿ ಗುರಿ ೬೧೨.೫೦೦ ಲಕ್ಷ ಇದ್ದರೆ ಎಕ್ಸ್‌ಪೆಂಡಿಚರ್ ೧೫೦.೨೬೩ ಲಕ್ಷ ಆಮೇಲೆ ಸೋಷಿಯಲ್ ಫಾರೆಸ್ಟ್ರಿ. ಸೋಲಾರ್ ಎನರ್ಜಿ, ಬೈಯೊಗ್ಯಾಸ್, ಟ್ರೈಸಂ ಈ ಎಲ್ಲಾ ಪ್ರಗತಿ ಕುಂಠಿತವಾಗಿರುವುದನ್ನು ನಾವು ನೋಡುತ್ತಾ ಇದ್ದೇವೆ. ರೂರಲ್ ವಾಟರ್ ಈ ಸಪ್ಲೈನಲ್ಲಿ ೧೯೮೫–೮೬ರಲಿ ಗುರಿ ೩,೩೫೯.೧೯ ಲಕ್ಷ, ಸಾಧನೆ ೧,೨೧೫೦೦ ಲಕ್ಷ. ಇದು ಅತ್ಯಂತ ಪ್ರಮುಖವಾದಂಥ ಸಾಧನೆ ಎಂದು ಪ್ರಚಾರ ನಡೆಯುತ್ತಿದೆ. ಆದ್ದರಿಂದ ಇದರ ನೈಜ ಚಿತ್ರವನ್ನು ತಮ್ಮ ಮುಂದಿಡುತ್ತಾ ಇದ್ದೇನೆ. ಆಮೇಲೆ ಐಆರ್‌ಡಿಪಿ ಗ್ರಾಮೀಣ ಕುಶಲ ಕರ್ಮಿಗಳಿಗೆ ನೆರವು ನೀಡುವಂಥ ಕಾರ್ಯಕ್ರಮ. ಇದರಲ್ಲಿ ೧೯೮೫–೮೬ರಲ್ಲಿ ಗುರಿ ೧೭೨೬.೫೬೦ ಲಕ್ಷ, ಸಾಧನೆ ೯೭೫.೯೫ ಲಕ್ಷ. ೧,೧೫,೦೦೦ ಜನರಿಗೆ ನೆರವಿನ ಗುರಿ ಇದ್ದರೆ ಅದು ೩೧.೯೨೬ ಜನರಿಗೆ ಮಾತ್ರ ಸಿಕ್ಕಿದೆ. ಹೀಗೆ ಚಿಕ್ಕ ರೈತರು, ಸಣ್ಣ ರೈತರು, ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರು, ಭೂರಹಿತ ಕಾರ್ಮಿಕರು, ಗ್ರಾಮೀಣ ಕುಶಲ ಕರ್ಮಿಗಳು, ಅನುಸೂಚಿತ ಜಾತಿ, ಅನುಸೂಚಿತ ಪಂಗಡದವರಿಗೆಲ್ಲಾ ನಿಜವಾಗಿ ಅನ್ಯಾಯವಾಗಿದೆ ಎಂದು ಹೇಳಲಿಕ್ಕೆ ಬಯಸುತ್ತೇನೆ, ಇದರ ಜೊತೆಗೆ ಇತ್ತೀಚೆಗೆ ನಮ್ಮ ರಾಜ್ಯದ ಬಡ್ಜೆಟ್ ಬಗ್ಗೆ ಪ್ಲಾನಿಂಗ್ ಮಿನಿಸ್ಟರ್ ಒಂದು ವ್ಯಾಖ್ಯಾನ ಮಾಡಿದರು. ಅದು ಪತ್ರಿಕೆಗಳಲ್ಲಿ ಬಂದಿತ್ತು. ಅದು ಈ ರೀತಿ ಇದೆ.—

> "He maintained that in spite of the criticism of the State Government it is intendedto continue measures like free text books and school uniforms, mangal sutras and free clothes for the poor. A serious effort is being made to translate anti-poverty ideas into reality '

ಗ್ರಾಮದ ಜನರಿಗೆ ಉದ್ಯೋಗ ಕಲ್ಪಿಸುವಂಥ ಆರ್ಥಿಕ ಸಾಮಾಜಿಕ ಉನ್ನತಿಯನ್ನು ತರುವಂಥ ಕಾರ್ಯಕ್ರಮ ಯಾವುದು ಇದೆ, ಅದನ್ನು ಮರೆತು ಈ ಕಾರ್ಯಕ್ರಮಗಳ ಮುಖಾಂತರ ಬಡತನ ನಿವಾರಣೆ ಆಗುತ್ತದೆ ಎಂದು ಹೇಳತಕ್ಕಂಥಾದ್ದು ಎಷ್ಟು ನ್ಯಾಯ ಎಂದು ಕೇಳುತ್ತಾ ಇದ್ದೇನೆ. ಅದೇ ರೀತಿಯಾಗಿ ಇನ್ನೊಂದು ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಪುಟ ೮–೯ರಲ್ಲಿ

'ಅಭಿವೃದ್ಧಿ ಕಾರ್ಯಕ್ರಮಗಳ ಅಂತಿಮ ಗುರಿ ಜನತೆಯ ಕಲ್ಯಾಣ, ಅಭಿವೃದ್ಧಿ ಕಾರ್ಯಕ್ರಮಗಳ ಪ್ರಯೋಜನ ಎಲ್ಲರಿಗೂ ದೊರೆಯಬೇಕು ಎಂಬುದು ಇದರ ಉದ್ದೇಶ. ಜನತೆಯ ಬೃಹದಂಶ ಅಭಿವೃದ್ಧಿಯ ಪ್ರಯೋಜನದಿಂದ ವಂಚಿತವಾಗಿದ್ದರೆ, ನಾವು ಈ ವಂಚಿತ ವರ್ಗದ ಕಡೆಗೆ ವಿಶೇಷ ಗಮನ ನೀಡಲೇಬೇಕು. ಆದ್ದರಿಂದ ಮುಂದಿನ ೧೫ ವರ್ಷಗಳಲ್ಲಿ ನಮ್ಮ ಪ್ರಯತ್ನಗಳನ್ನು ಸಾಂಪ್ರದಾಯಿಕ ಗ್ರಾಮೀಣ ಭಾರತವನ್ನು ನಗರಗಳ ಆಧುನಿಕ ಭಾರತದೊಂದಿಗೆ ಒಗ್ಗೂಡಿಸುವುದರ ಕಡೆಗೆ ಕೇಂದ್ರೀಕರಿಸಬೇಕು .. ಈ ಗುರಿಯನ್ನು ಮುಂದಿನ ೭-೮ ವರ್ಷಗಳಲ್ಲಿ ಸಾಧಿಸುವ ಬಗ್ಗೆ ಪ್ರಯತ್ನಿಸಬೇಕು. ಇದಕ್ಕಾಗಿ ಕನಿಷ್ಟ ಅಗತ್ಯಗಳ ಕಾರ್ಯಕ್ರಮಕ್ಕೆ ಮತ್ತು ಬಡತನ ನಿವಾರಣ ಕಾರ್ಯಕ್ರಮಗಳಿಗಾಗಿ ಹೆಚ್ಚು ಪ್ರಮಾಣದ ವೆಚ್ಚಕ್ಕೆ ಏರ್ಪಾಡನ್ನು ಮಾಡಬೇಕಾಗುತ್ತದೆ ...'

ಎಂದು ಹೇಳಿದ್ದಾರೆ. ವೆಚ್ಚ ಮಾಡಿಲ್ಲ ಎನ್ನುವುದನ್ನು ನಾನು ವಿವರಗಳ ಸಹಿತ ತೋರಿಸಿಕೊಟ್ಟಿದ್ದೇನೆ. ಈ ಸಂದರ್ಭದಲ್ಲಿ ೧೦-೯-೧೯೮೫ರಂದು ವಿಧಾನಮಂಡಲದ ಮುಂದೆ ಮಂಡಿಸಿದ ಭಾರತದ ಆಡಿಟರ್ ಅಂಡ್ ಕಂಟ್ರೋಲರ್ ಜನರಲ್‌ರವರ ವರದಿಯಲ್ಲಿ ಇರತಕ್ಕ ಒಂದು ವಿಚಾರವನ್ನು ಉಲ್ಲೇಖಿಸುತ್ತಿದ್ದೇನೆ—

ಐಆರ್‌ಡಿಪಿ ಕಾರ್ಯಕ್ರಮದಂತೆ ಕುಟುಂಬವೊಂದಕ್ಕೆ ಒಂದು ಸಾವಿರ ರೂ.ಗಳ ನೆರವಿನ ಗುರಿ ಇದ್ದರೆ ಕರ್ನಾಟಕದಲ್ಲಿ ಸರಾಸರಿ ಸಾಧನೆ ರೂ. ೮೪೩, ಮಾರ್ಗದರ್ಶನ ಸೂತ್ರ ಪಾಲಿಸದೆ ೩.೪೬ ಲಕ್ಷ ರೂಪಾಯಿ ಸಬ್ಸಿಡಿ ಬಿಡುಗಡೆ ಮಾಡಿದ ಅಕ್ರಮ ಹಾಗೂ ಕಾರ್ಯಕ್ರಮದನ್ವಯ ಮಂಜೂರು ಮಾಡಲು ಅನುಮತಿ ಇಲ್ಲದಿದ್ದರೂ ರೂ. ೨೫.೩೧ ಲಕ್ಷ ಸಾಲ ಪಾವತಿ ಅಕ್ರಮ''

ಎಂದು ಅವರಲ್ಲಿ ಎತ್ತಿ ತೋರಿಸಿದ್ದಾರೆ. ಮಾನ್ಯ ಅಧ್ಯಕ್ಷರೆ ಸರ್ಕಾರಕ್ಕೆ ಇವರ ಬಗ್ಗೆ ಎಷ್ಟು ಕಳಕಳಿ ಜನರಲ್ಲಿ ಇದೆ, ಅವರ ಗುರಿ ಏನು ಎನ್ನುವುದು ಭಾರತದ ಆಡಿಟರ್ ಕಂಟ್ರೋಲರ್‌ರವರ ವರದಿಯಿಂದ ವ್ಯಕ್ತವಾಗುತ್ತದೆ. ಕೇವಲ ಫಿಸಿಕಲ್ ಅಂಡ್ ಫೈನಾನ್ಷಿಯಲ್ ಟಾರ್ಗೆಟ್‌ಗಳನ್ನು ಮುಟ್ಟಿದರೆ ಮಾತ್ರ ಸಾಕಾಗುವುದಿಲ್ಲ. ಈ ಯೋಜನೆಗಳಿಂದ ಹ್ಯೂಮನ್ ರಿಸೋರ್ಸಸ್ ಡೆವಲಪ್‌ಮೆಂಟ್ ಎಷ್ಟರಮಟ್ಟಿಗೆ ಆಗಿದೆ ಎನ್ನುವುದನ್ನೂ ಕೂಡ ನಾವು ನೋಡಬೇಕು. ಇದನ್ನು ಮಾಡಬೇಕಾದರೆ ಜನರನ್ನು ಅಭಿವೃದ್ಧಿಗಾಗಿ ಮೋಟಿವೇಟ್ ಮಾಡಬೇಕಾಗುತ್ತದೆ. ಮೋಟಿವೇಟ್ ಮಾಡುವಂಥ ಕೆಲಸ ಅಧಿಕಾರಿಗಳಿಂದ ಹಾಗೂ ಕಂಟ್ರಾಕ್ಟರುಗಳಿಂದ ಆಗುವುದಿಲ್ಲ. ಇದಕ್ಕೆ ಸ್ಥಳೀಯ ಸಂಸ್ಥೆಗಳ ಅವಶ್ಯಕತೆ ಬೇಕು. ಪಂಚಾಯಿತಿಗಳನ್ನು ಮತ್ತು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡುಗಳನ್ನು ೧೯೮೩ರಲ್ಲಿ ವಿಸರ್ಜಿಸಲಾಯಿತು, ಅದೇ ರೀತಿ ಸಹಕಾರಿ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟ ವಾಯಿದೆಯನ್ನು ಮುಂದುವರಿಸಲಾಯಿತು. ಇವುಗಳಿಗೆ ಮಾನ್ಯ ಸರ್ಕಾರ ಚುನಾವಣೆ ಮಾಡಲಿಲ್ಲ. ಚುನಾವಣೆ ಮಾಡುವತನಕ ಅವರಿಗೆ ಸಮಯದಾನ ಮಾಡಿದ್ದಾರೆ ಆದರೆ ಪಂಚಾಯಿತಿ ಮತ್ತು ಟಿಡಿಬಿಗಳನ್ನು ಕೂಡಲೇ ವಿಸರ್ಜನೆ ಮಾಡಿದರು, ಅಧಿಕಾರಿಗಳ ಕೈಗೆ ಸಂಪೂರ್ಣ ಅಧಿಕಾರ ಕೊಟ್ಟರು. ಈಗ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತ್‌ಗಳ ಹೊಸ ಆವಿಷ್ಕಾರ ಎನ್ನುವಂಥ ಮಾತು ಕೇಳಿ ಬರುತ್ತಿದೆ. ಇದು ಯಾವುದರ ಮೇಲೆ ಆವಿಷ್ಕಾರ? ಪಂಚಾಯಿತಿ ಹಾಗೂ ಟಿಡಿಬಿಗಳು ಏಕೆ ವಿಸರ್ಜನೆಯಾಯಿತು? ಪಂಚಾಯಿತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಗಳನ್ನು ನಿರ್ನಾಮ ಮಾಡಿ ಆ ಸಂಸ್ಥೆಗಳ ಸಮಾಧಿಯ ಮೇಲೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತ್‌ಗಳನ್ನು ಕಟ್ಟಲಾಗುತ್ತಿದೆ, ಇವುಗಳಿಗೆ ಅಧಿಕಾರ ಬರುವತನಕ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಇರಬಹುದಾಗಿತ್ತು. ಈ ರೀತಿ ಮಾಡುವ ಅವಶ್ಯಕತೆ ಇರಲಿಲ್ಲ. ಹೊಸ ಸಂಸ್ಥೆಗಳನ್ನು ಅಧಿಕಾರಕ್ಕೆ ತಂದರೂ ಸಹ ನಿಮ್ಮ ಬಡ್ಜೆಟ್‌ನಲ್ಲಿ ಇರುವಂಥಾದ್ದು (೧೯) ಜಿಲ್ಲಾ ಪರಿಷತ್‌ಗೆ ಒಂದು ಸಾವಿರ ರೂಪಾಯಿ ಪ್ಲಾನ್‌ನಲ್ಲಿ, ನಾನ್ ಪ್ಲಾನ್‌ನಲ್ಲಿ ೧೧ ಲಕ್ಷ ಹೀಗಾದರೆ ಅದು ಹೇಗೆ ನಡೆಯುತ್ತದೋ ನನಗೆ ಗೊತ್ತಿಲ್ಲ, ಆದ್ದರಿಂದ ಮಂಡಲ್ ಪಂಚಾಯಿತ್ ಮತ್ತು ಜಿಲ್ಲಾ ಪರಿಷತ್‌ಗಳಿಗೆ ಸಾಕಷ್ಟು ಹಣ ಮತ್ತು ಸಿಬ್ಬಂದಿಯನ್ನು ಕೊಡಬೇಕು. ರೂರಲ್ ಡೆವಲಪ್‌ಮೆಂಟ್ ಡೈರೆಕ್ಟೊರೇಟ್ ಎಂದು ಪ್ರಾರಂಭ ಮಾಡಬೇಕು. ಈಗಾಗಲೇ ಬಿ.ಡಿ.ಓ. ಮತ್ತು ತಹಶೀಲ್ದಾರರುಗಳನ್ನು ಹಾಕುತ್ತಾ ಇದ್ದಾರೆ. ರೂರಲ್ ಡೆವಲಪ್‌ಮೆಂಟಿನಲ್ಲಿ ನಂಬಿಕೆ

ಇರುವಂಥ ಜನರನ್ನು ಈ ಕೆಲಸಗಳಿಗೆ ಹಾಕಬೇಕು. ಮತ್ತು ಅನೇಕ ವರ್ಷಗಳಿಂದ ಪಂಚಾಯಿತಿಗಳಲ್ಲಿ ಕೆಲಸ ಮಾಡಿದ ಸಿಬ್ಬಂದಿ ವರ್ಗದವರು ಏನು ಇದ್ದಾರೆ, ಅವರನ್ನು ಖಾಯಂಗೊಳಿಸಬೇಕು.

ಇನ್ನು ಸಹಕಾರದ ವಿಚಾರವಾಗಿ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಳೆದ ವರ್ಷ ನಾನು ಸಹಕಾರದ ವಿಚಾರವಾಗಿ ಮಾತನಾಡುತ್ತಾ,

> ಸಹಕಾರಿ ರಂಗ ಸಾಯಬಾರದು, ಎಲ್ಲ ಅವ್ಯವಹಾರಗಳನ್ನು ಮೆಟ್ಟಿ ನಿಲ್ಲಬೇಕು, ಜನರಿಗೆ ಬೇಕಾಗುವ ಜನಶಕ್ತಿಯಾಗಿ ಇದು ರೂಪುಗೊಳ್ಳಬೇಕು, ಹೊಸನಾಡು ಕಟ್ಟುವ ಹರಿಕಾರ ಆಗಬೇಕು''

ಎಂದಿದ್ದೆ. ಆದರೆ ಕಳೆದ ವರ್ಷದ ಜಾಡಿನಲ್ಲೇ ಸಹಕಾರಿ ರಂಗ ಮುಂದೆ ಸಾಗುತ್ತಿದೆ ಎಂದು ಮಾನ್ಯ ಸಚಿವರ ಗಮನಕ್ಕೆ ತಮ್ಮ ಮೂಲಕ ತರಲಿಕ್ಕೆ ವ್ಯಥೆಯಾಗುತ್ತಿದೆ. ಸೆಕ್ಷನ್ ೧೨ರಂತೆ ಅಧಿಕಾರಿಗಳು ಸೂಚಿಸಿದಂತೆ ತಿದ್ದುಪಡಿಯಾಗುತ್ತಿದೆ, ಅವರಿಗೆ ಬೇಡವಾದಲ್ಲಿ ಸಂಸ್ಥೆಗಳ ವಿಸರ್ಜನೆಯಾಗುತ್ತಿದೆ. ಸೆಕ್ಷನ್ ೫೩(ಎ) ಪ್ರಕಾರ ನಾಮಕರಣ ಪದ್ಧತಿ ಮುಂದುವರಿಯುತ್ತಿದೆ. ಕಾಂಪ್ರಿಹೆನ್ಸೀವ್ ಅಮೆಂಡ್‌ಮೆಂಟ್ ತರುತ್ತೇನೆ ಎಂದು ಮಾನ್ಯ ಜಾಲಿಪ್ಪನವರು ಹೇಳಿದ್ದರು. ಈಗ ಅದು ಏನಾಯಿತು ಎಂದು ಕೇಳಲಿಕ್ಕೆ ಅಪೇಕ್ಷೆಪಡುತ್ತೇನೆ? ಶಿಕ್ಷಣಕ್ಕೆ ಪ್ರಾಧಾನ್ಯತೆ ಕೊಡಬೇಕು, ಇದರಲ್ಲಿ ಸಹಕಾರಿ ರಂಗದಲ್ಲಿ ಅವ್ಯವಹಾರ ಆಗುತ್ತಿದೆ, ಎಂಬುದಕ್ಕೆ ಮಾತ್ರ ದೊಡ್ಡ ಪ್ರಚಾರ ಸಿಗುತ್ತಿದೆ. ೨೨೦೦ ಕೋಟಿಯಷ್ಟು ಚಲಾವಣಾ ಬಂಡವಾಳ ಇರುವ ಈ ಸಹಕಾರ ರಂಗದಲ್ಲಿ ಎಲ್ಲಾದರೂ ಒಂದು ಲಕ್ಷ ರೂ.ಗಳ ಅವ್ಯವಹಾರವಾದರೆ ಅದಕ್ಕೆ ದೊಡ್ಡ ಪ್ರಚಾರ ಸಿಗುತ್ತಿದೆ. ಆದುದರಿಂದ ಸಹಕಾರರಂಗ ಸಮರ್ಥರ ಕೈಗೆ ಹೋಗಬೇಕಾದರೆ ತಳಪಾಯ ಆಕರ್ಷಕವಾಗಿರಬೇಕು. ಇತ್ತೀಚೆಗೆ ಯುವಕರು. ಮಹಿಳೆಯರು ಈ ರಂಗಕ್ಕೆ ಬೇಕು ಎಂದು ಕಾನೂನಿನಲ್ಲಿ ಅಳವಡಿಸಿದ್ದಾರೆ. ಆದ್ದರಿಂದ ಯುವಕರು ಮತ್ತು ಮಹಿಳೆಯರಿಗೆ ಸೂಕ್ತ ಶಿಕ್ಷಣವನ್ನು ದೊರಕಿಸಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಸಹಕಾರೀ ಯೂನಿಯನ್‌ಗಳಿಗೆ ಸಾಕಷ್ಟು ಅನುದಾನವನ್ನು ಕೊಡಬೇಕು. ಸಹಕಾರೀ ತರಬೇತಿ ಕೇಂದ್ರಗಳನ್ನು ಸ್ಥಾಪಿಸಬೇಕು. ಈ ಸಲ ದಕ್ಷಿಣ ಕನ್ನಡಕ್ಕೆ ಸಹಕಾರೀ ತರಬೇತಿ ಕೇಂದ್ರವನ್ನು ದಯಪಾಲಿಸಿದ್ದಾರೆ. ಅದಕ್ಕಾಗಿ ಮಾನ್ಯ ಸಹಕಾರಿ ಸಚಿವರನ್ನು ಅಭಿನಂದಿಸುತ್ತೇನೆ. ಅದಕ್ಕೆ ಗ್ರಾಂಟ್‌ಗಳನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಇಲಾಖೆಯ ಕಾರ್ಯಗಳು ಸುಸೂತ್ರವಾಗಿ ನಡೆಯಲು ತಾಲ್ಲೂಕಿಗೆ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅನ್ನು ನೇಮಿಸುವ ವಿಚಾರವನ್ನು ಆಲೋಚನೆ ಮಾಡುತ್ತೇವೆಂದು ಕಳೆದ ವರ್ಷ ಹೇಳಿದ್ದರು, ಅದು ಇನ್ನೂ ಕಾರ್ಯಗತವಾಗಿಲ್ಲ. ಅದು ಕಾರ್ಯಗತವಾಗಬೇಕು. ಅದು ಕಾರ್ಯಗತವಾದೇ ಇದ್ದುದರಿಂದ ತನಿಖಾ ವಿಭಾಗ ದಕ್ಷವಾಗಲಿಲ್ಲ, ಚುರುಕಾಗಲಿಲ್ಲ. ಕಾನೂನಿನ ೬೩ನೇ ಕಲಂನಂತೆ ವರ್ಷಕ್ಕೊಮ್ಮೆ ಲೆಕ್ಕ ಪರಿಶೋಧನೆಯಾಗಬೇಕು. ಆದರೆ ಸಹಸ್ರಾರು ಪ್ರಕರಣಗಳು ಬಾಕಿ ಇವೆ. ನಿಷ್ಕ್ರಿಯ ಸಂಘಗಳ ಬಗ್ಗೆ ಆ್ಯಕ್ಷನ್ ಆಗಿಲ್ಲ. ಸಿ.ಸಿ.ಎ. ಬಗ್ಗೆ ಈಗಾಗಲೇ ನನ್ನ ಮಿತ್ರರು ಹೇಳಿದ್ದಾರೆ. ಇದರಿಂದ ಅನೇಕ ಸಮಸ್ಯೆಗಳು ಉಂಟಾಗಿದೆ ಸಿ.ಸಿ.ಎ. ಕುರಿತು ನಿರ್ದಿಷ್ಟವಾದ ಹೈಕೋರ್ಟಿನ ಆದೇಶ ಏನೇ ಇರಲಿ ಆದರ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವನ್ನು ತಾಳಬೇಕು ಅಧಿಕಾರಿಗಳಿಗೆ ತೊಂದರೆಯಾಗದಂತೆ, ಕೆಲಸಗಾರರಿಗೆ ತೊಂದರೆಯಾಗದಂತೆ, ಸಹಕಾರ ಸಂಘಗಳಿಗೆ ತೊಂದರೆಯಾಗದಂತೆ ಈ ಒಂದು ವಿಚಾರವನ್ನು ತೀರ್ಮಾನ ಮಾಡಬೇಕೆಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ ಇನ್ನು ಕೃಷಿ ಸಾಲ ೭ ಪರ್ಸೆಂಟ್ ಕೊಡುತ್ತಿದ್ದೀರಿ, ಅದನ್ನು ಮೂರು ಪರ್ಸೆಂಟ್ ಮಾಡುವ ಆಲೋಚನೆ ಇದೆ. ಅದಕ್ಕಾಗಿ ನಾನು ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ ಆದರೆ ಕಾರಣಾಂತರದಿಂದ ವಸೂಲಿಯಲ್ಲಿ ಕೂಡ ಇಳಿತವಾಗಿದೆ. ಆದರ ಬಗ್ಗೆ ತಾವು ಚಿಂತನೆ ಮಾಡಬೇಕಾಗಿದೆ ೧೯೮೪–೮೫ರ ರಿಬೇಟ್ ಪೂರ್ತಿ ಪಾವತಿಯಾಗಿಲ್ಲ ಯಾರು ಒಂದೂವರೆ ಪರ್ಸೆಂಟ್‌ನಂತೆ ಡಿ.ಸಿ.ಸಿ ಪ್ರೈಮರಿ ಸೊಸೈಟಿಗೆ ಫೈನಾನ್ಸ್ ಮಾಡಿದ್ದಾರೆ. ಅದನ್ನು ಅವರೇ ಭರಿಸಬೇಕಾದ ದುರ್ಬಲ ಪರಿಸ್ಥಿತಿ ಬಂದಿದೆ ದಕ್ಷಿಣ ಕನ್ನಡ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕ್ ಕಳೆದ ವರ್ಷ ಲಾಸ್‌ನಲ್ಲಿತ್ತು. ಒಂದು ಪರ್ಸೆಂಟ್ ಅನ್ನು ತಾವೇ ಕೊಡಬೇಕಾಗುತ್ತದೆ. ಈ ಕುರಿತು ಇನ್ನೂ ಏನೂ ಆಗಿಲ್ಲ. ೫ ಪರ್ಸೆಂಟ್ ಇನ್‌ಸೆಂಟೀವ್ ಸಬ್ಸಿಡಿ ಸೇರು ಮಾರ್ಕೆಟಿಂಗ್‌ನಲ್ಲಿ ಏನು ಮಾಡಿದ್ದೀರಿ. ಅದನ್ನು ಹೆಚ್ಚಿನ ಕಡೆಗಳಲ್ಲಿ ಉಪಯೋಗಿಸುವುದಕ್ಕೆ ಆಗಿಲ್ಲ. ಅದು ಕೇವಲ ಒರೀ ಪುಸ್ತಕದಲ್ಲಿ ಸ್ಕೀಮಾಗಿ ಉಳಿದಿದೆ. ಆದರ ಬಗ್ಗೆ ಕೂಡ ಚಿಂತನೆ ಮಾಡಬೇಕು. ಅದರ ಜೊತೆಗೆ ಬೆಳೆ ವಿಮೆ ಕಡ್ಡಾಯವಾಗಿ ಜಾರಿಗೆ

ಬಂದಿದೆ. ಅದು ಬೆಳೆ ವಿಮೆ ಅಲ್ಲ. ಅದು ಬೆಳೆ ಸಾಲ ವಿಮೆ. ಸಾಲ ಯಾರು ಪಡೆಯುತ್ತಾರೆ ಅಂತಹ ವರಿಗೆ ಕಡ್ಡಾಯವಾಗಿ ವಿಮೆ ಮಾಡುವಂತಹ ಪರಿಸ್ಥಿತಿ ಬಂದಿದೆ. ಆದು ಕೇಂದ್ರ ಸರ್ಕಾರದ್ದೇ ಇರಬಹುದು, ಇಲ್ಲವೆಂದು ಹೇಳುವುದಿಲ್ಲ. ಅದರ ಬಗ್ಗೆ ಒತ್ತಾಯ ಮಾಡಬೇಕಾದ ಪರಿಸ್ಥಿತಿಯಿದೆ. ಎಲ್ಲ ಜಿಲ್ಲೆಯ ಕಮರ್ಷಿಯಲ್ ಬ್ಯಾಂಕ್ ಆರ್. ಆರ್. ಪಿ. ಕೋ ಆಪರೇಟಿವ್ಸ್ ಸೇರಿ ೨೦-೩೦ ಲಕ್ಷ ರೂಪಾಯಿ ದಂಡ ಹಣವನ್ನು ಕೊಡಬೇಕಾದ ಪರಿಸ್ಥಿತಿ ಬಂದಿದೆಯೆಂದು ಕೃಷಿ ಮಂತ್ರಿಗಳು ಹೇಳಿದ್ದನ್ನು ಕೇಳಿದ್ದೇನೆ. ಇಂತಹ ಪರಿಸ್ಥಿತಿ ಇರಬಾರದು. ಮತ್ತು ಗ್ರಾಮೀಣ ಕೃಷಿ ಮತ್ತು ಪ್ರಾಥಮಿಕ ಕೃಷಿ ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳ ಪೈಕಿ ತೆಗೆದುಕೊಂಡರೆ ೧೯೮೫ರಲ್ಲಿ ೧೧೫ ನಷ್ಟದಲ್ಲಿದ. ಟಿ. ಎ. ಪಿ. ಸಿ. ಎಂ. ಸಿ. ಗಳ ಪೈಕಿ ಅರ್ಧದಷ್ಟು ನಷ್ಟದಲ್ಲಿವೆ. ಸಹಕಾರೀ ಸಕ್ಕರೆ ಕಾರ್ಖಾನೆಗಳಲ್ಲಿ ಒಂದೆರಡನ್ನು ಬಿಟ್ಟರೆ ಮತ್ತೆಲ್ಲಾ ನಷ್ಟದಲ್ಲಿವೆ. ಇದು ಒಂದು ದುರಂತ ಚಿತ್ರಣವಾಗಬಾರದು. ಇದರ ಬಗ್ಗೆ ಮಾನ್ಯ ಸಚಿವರು ಆಲೋಚನೆ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆಯ ಬ್ರಹ್ಮಾವರದಲ್ಲಿ ಸಕ್ಕರೆ ಕಾರ್ಖಾನೆ ಕಳೆದ ವರ್ಷ ಎಷ್ಟು ಸಕ್ಕರೆಯನ್ನು ಉತ್ಪಾದಿಸಿತ್ತೊ ಅದರ ಹತ್ತು ಪಾಲನ್ನು ಹೆಚ್ಚು ಈ ವರ್ಷ ಉತ್ಪಾದಿಸಿದೆ. ಆದ್ದರಿಂದ ಈ ವರ್ಷ ಅದಕ್ಕೆ ಬೇಕಾದಷ್ಟು ಬೀಜವನ್ನು ಒದಗಿಸತಕ್ಕಂತಹ ಕೆಲಸ ವಾಗಬೇಕು. ಮತ್ತು ಅಲ್ಲಿಗೆ ನೀರನ್ನು ಪೂರೈಸುವ ಕೆಲಸವೂ ಕೂಡ ಆಗಬೇಕಾಗಿದೆ. ಮಾನ್ಯ ಯಡಿಯೂರಪ್ಪನವರು ವರಾಹಿ ಯೋಜನೆ ವಿಚಾರವಾಗಿ ಹೇಳಿದ್ದಾರೆ. ಒಂದು ಸಂತೋಷದ ಸುದ್ದಿಯೇನೆಂದರೆ, ಮಾನ್ಯ ಲೋಕೋಪಯೋಗಿ ಸಚಿವರು ಎರಡು ಮೂರು ಬಾರಿ ಈ ಸದನದಲ್ಲಿ ಹಾಗೂ ಹೊರಗಡೆ ಸಹ ೧೯೮೬-೮೭ರಲ್ಲಿ ಈ ವರಾಹಿ ಯೋಜನೆಯನ್ನು ಕೈಗೆ ಎತ್ತಿಕೊಳ್ಳುತ್ತೇವೆಂದು ಹೇಳಿದ್ದಾರೆ ಆದ್ದರಿಂದ ಅವರಿಗೆ ಮಾನ್ಯ ಸಹಕಾರ ಸಚಿವರು ನೆನಪು ಮಾಡಿಕೊಡಬೇಕೆಂದು ಈ ಸಂದರ್ಭ ದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಗೃಹ, ನಿರ್ಮಾಣದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ವರ್ಷ ಸ್ಟ್ಯಾಂಪ್ ಡ್ಯೂಟಿ ವಿನಾಯಿತಿ ಇತ್ತು, ಈ ವರ್ಷ ಸ್ಟ್ಯಾಂಪ್ ಡ್ಯೂಟಿ ಜಾಸ್ತಿಯಾಗಿದೆ. ಮಾನ್ಯ ಸಚಿವರು ಇದರ ಬಗ್ಗೆ ಮತ್ತೆ ಪರಿಶೀಲನೆ ಮಾಡಬೇಕು. ಮೀನುಗಾರಿಕಾ ಸಹಕಾರಿ ಫೆಡರೇಷನ್‌ಗೆ ರಿಲೀಫ್ ಲೋನ್ ಕೊಡುವ ಬಗ್ಗೆ ಎಕ್ಸಾಮಿನ್ ಮಾಡಬೇಕು. ಈ ಫೆಡರೇಷನ್ ಅನ್ನು ಬಲವರ್ಧಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕಾಫಿ ಗ್ರೋಯರ್ಸ್ ಕೋ ಆಪರೇವ್ ಸೊಸೈಟೀಸ್‌ನಲ್ಲಿ ಇಲ್ಲಿಯತನಕ ಫಾರ್‌ಲಿಟ್ ಅಳತೆ ಪದ್ಧತಿಯಲ್ಲಿತ್ತು. ಈಗ ಕೆ. ಜಿ. ಅಳತೆ ಪದ್ಧತಿಗೆ ಬದಲಾಯಿಸಿದ್ದಾರೆ. ಸರ್ಕಾರ ಫಾರ್‌ಲಿಟ್ ಪದ್ಧತಿ ಮುಂದುವರಿಸಲು ಆಜ್ಞೆ ಮಾಡಿತ್ತು. ಆದರೆ ಅಧಿಕಾರಿಗಳು ಅದನ್ನು ಕಾರ್ಯಗತ ಮಾಡಿಲ್ಲ. ಜನರಿಗೂ ಕೂಡ ಬೇಡವಾದ ಈ ಪದ್ಧತಿಯನ್ನು ಏಕೆ ಉಳಿಸಿಕೊಳ್ಳಬೇಕು. ಇದರ ಬಗ್ಗೆ ಕೂಡಲೇ ಆಜ್ಞೆ ಹೊರಡಿಸಬೇಕು. ಕೋಆಪರೇಟಿವ್ಸ್ ಕೋರ್ಟನ್ನು ಜಿಲ್ಲಾ ಮಟ್ಟದಲ್ಲಿ ಮಾಡಬೇಕೆಂದು ನಾನು ಕಳೆದ ವರ್ಷ ಅರಿಕೆ ಮಾಡಿಕೊಂಡಿದ್ದೆ. ಅದನ್ನು ಮಂತ್ರಿಮಹೋದಯರ ಗಮನಕ್ಕೆ ತರುತ್ತಿದ್ದೇನೆ. ಸಹಕಾರಿಗಳು ವಾಸ್ತವವಾಗಿ ಇರಲಿಕ್ಕೆ ಕಟ್ಟಡ ಕಟ್ಟಿಸಿ ಎಂದು ಶ್ರೀ ಪಾಟೀಲರು ಹೇಳಿದರು. ಸಹಕಾರಿ ಸಂಸ್ಥೆ ಎಂದು ಏನಿದೆ, ಅದಕ್ಕೆ ತಾವು ಸಹಾಯಧನ ಕೊಡಬೇಕು. ಆ ಸಂಸ್ಥೆಯ ಕಟ್ಟಡ ಅರ್ಧವಾಗಿ ನಿಂತಿದೆ. ಅದು ಒಳ್ಳೆಯ ರೀತಿಯಲ್ಲಿ ಮುಂದುವರಿಯುವ ಹಾಗೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಮಾರ್ಕೆಟಿಂಗ್ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ ವ್ಯಾಪಾರದಲ್ಲಿ ದುರ್ವ್ಯವಹಾರವಾಗಿದ್ದು, ಮಾರುವವರಿಗೆ, ಕೊಳ್ಳುವವರಿಗೆ ಉತ್ತಮ ಅನುಕೂಲತೆಯಿಲ್ಲ. ಮಧ್ಯವರ್ತಿಗಳ ಹಾಗೂ ಶೋಷಕರ ನಿರ್ಮೂಲನೆ ಯಾಗಬೇಕು. ಮಂಗಳೂರು ಎ. ಪಿ. ಎಂ. ಸಿ. ಯಲ್ಲಿ ಅಡಿಕೆ ಮಾರಾಟವಾದದ್ದು ಮತ್ತೆ ರೀ-ಸೇಲ್ ಆಗುತ್ತಿದೆ. ಇದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಇದನ್ನು ತಪ್ಪಿಸಬೇಕು. ಇನ್ನು ಗೇರು ಬೀಜ ಮಾರಾಟದಲ್ಲಿ ಎಷ್ಟೋ ಹಣ ಸೋರಿ ಹೋಗಿದೆ. ಎ. ಪಿ. ಎಂ. ಸಿ. ಗೆ ಬರುವ ಸೇಲ್ಸ್ ಹಣ ಸೋರಿ ಹೋಗಿದೆ. ಬೇಕಾದರೆ ಇದರ ಬಗ್ಗೆ ಸೇಲ್ಸ್ ಟ್ಯಾಕ್ಸ್ ಇಲಾಖೆಯಿಂದ ಫಿಗರ್ಸ್ ಅನ್ನು ತರಿಸಿ ನೋಡಿ. ಎ. ಪಿ. ಎಂ. ಸಿ ಗೆ ಬರುವ ಹಣ ಎಲ್ಲಿ ಹೋಯಿತು ಎನ್ನುವುದನ್ನು ತುಲನೆ ಮಾಡಿ ಎಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಮಂಗಳೂರು ಮಾರ್ಕೆಟಿಂಗ್ ಕಮಿಟಿಯ ವರು ವಿಶ್ವ ಬ್ಯಾಂಕಿನ ನೆರವಿನಿಂದ ಆ ಜಾಗವನ್ನು ತೆಗೆದುಕೊಂಡಿದೆ. ಆ ಜಾಗವನ್ನು ಯಾರ್ಯಾರೋ ಅಕ್ರಮಣ ಮಾಡಿಕೊಂಡು ಹೋಗಿದ್ದಾರೆ. ಮಾರ್ಕೆಟ್ ಕಮಿಟಿಯು ಏನು ಮಾಡುತ್ತಿದೆ. ಇದರ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು. ಸಹಕಾರಿ ಕ್ಷೇತ್ರ ಹಾಗೂ ಪಂಚಾಯತಿ ರಾಜ್ಯ ಇವೆರಡೂ ಒಟ್ಟೊಟ್ಟಿಗೆ ಒಳ್ಳೆಯ ರೀತಿಯಲ್ಲಿ ಬೆಳೆಯಬೇಕು ಹಾಗೂ ಇವುಗಳ ಸಮರ್ಪಕವಾಗಿ ವ್ಯವಸ್ಥೆ ಗಳಾ ಬೇಕು. ಬಡವರ ಬದುಕಿಗೆ ಭರವಸೆ ನೀಡಬೇಕು. ಮಾನ್ಯ ಡಿ. ವಿ. ಜಿ. ಯವರು ಹೇಳಿದ

''ದೀನ ದುರ್ಬಲರಿಗೆ ಇವು ಬೆಲ್ಲ ಸಕ್ಕರೆಯಾಗಬೇಕು'' ಅಡಿಗರು ಹೇಳಿದಂತೆ ''ಇರುವೆಲ್ಲವನ್ನು ಎಲ್ಲ ಜನಕ್ಕೆ ತೆರವಾಗಿಸುವ ಸಮ ಬಗೆಯ ಸಮ ಸುಖದ ಸಾಮರಸ್ಯದ ಸಾಮಗಾನ ಲಹರಿಯ ಮೇಲೆ ತೇಲಿ ಬರಬೇಕು.'' ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೃಷ್ಣ. (ಕೃಷ್ಣರಾಜಪೇಟೆ). —ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಮತ್ತು ಸಹಕಾರಿ ಸಚಿವರು ಏನು ತಮ್ಮ ಬೇಡಿಕೆಗಳನ್ನು ಈ ಸಭೆ ಮುಂದೆ ಇಟ್ಟಿದ್ದಾರೆ ಅದನ್ನು ನಾನು ಬೆಂಬಲಿಸಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಹತ್ತಾರು ವರ್ಷಗಳಲ್ಲಿ ಗ್ರಾಮೀಣ ಸಮಾಜವನ್ನು ಪುನರ್ ನಿರ್ಮಾಣ ಮಾಡಬೇಕೆಂದು ನಾವು ಹೋರಾಡುತ್ತಿದ್ದೇವೆ. ನಮ್ಮ ಗ್ರಾಮೀಣ ಪ್ರದೇಶದಲ್ಲಿ ಶೇಕಡಾ ೭೦–೭೫ರಷ್ಟು ಜನ ವಾಸ ಮಾಡುತ್ತಿದ್ದಾರೆ. ಈ ಗ್ರಾಮೀಣ ಪ್ರದೇಶ ಪುನರ್ ನಿರ್ಮಾಣವಾಗದೇ ಇದ್ದರೆ ನಾವು ಎಷ್ಟೇ ಸಾಧನೆ ಮಾಡಿದರೂ ಸಹ ನಮ್ಮ ದೇಶ ಹಿಂದೆ ಬೀಳುತ್ತದೆಂದು ಹೇಳತಕ್ಕಂತಹ ಗುರಿಯನ್ನು ಇಟ್ಟುಕೊಂಡು ನಮ್ಮ ಗ್ರಾಮೀಣ ಪ್ರದೇಶದಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ. ನಾವು ಈಗ ನೋಡಬೇಕಾದದ್ದು, ಈ ಸಾವಿರಾರು ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡಿದ್ದಾರೆ, ಅದರ ಫಲಿತಾಂಶ, ಪರಿಣಾಮ ಏನಾಗಿದೆ ಎಂದು. ನಾವು ಮಾತನಾಡುವಾಗ ಈ ವರ್ಷ ಇಷ್ಟು ಲಕ್ಷ ಹಣವನ್ನು ಇದಕ್ಕೆ ಇಟ್ಟಿದ್ದೇವೆ. ಇಷ್ಟು ಹಣ ಖರ್ಚಾಯಿತು ಎಂದು ಹೇಳುತ್ತೇವೆ. ಆದರೆ ಅದು ಮುಖ್ಯವಲ್ಲ. ಇಷ್ಟೆಲ್ಲಾ ಆದರೂ ನಮ್ಮ ಗ್ರಾಮೀಣ ಪ್ರದೇಶ ಮುಂದುವರಿಯಲಿಲ್ಲ. ಈ ಗ್ರಾಮೀಣ ಯೋಜನೆಗಳೇನಿದೆ ಇವೆಲ್ಲವನ್ನೂ ಬಿ.ಡಿ.ಓ.ರವರು ಅನುಷ್ಠಾನಕ್ಕೆ ತರುತ್ತಾರೆ. ಈ ಒಂದು ಕಮ್ಯೂನಿಟಿ ಬ್ಲಾಕ್ಸ್ ಏನಿದೆ, ಆ ಬ್ಲಾಕಿನಲ್ಲಿ ಎಂತಹ ಅಧಿಕಾರಿಗಳಿದ್ದಾರೆ ಎನ್ನುವುದನ್ನು ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ. ೧೦ ವರ್ಷಗಳಲ್ಲಿ ೨೦ನೇ ಶತಮಾನಕ್ಕೆ ಹೋದರೂ ಕೂಡ ನಾವು ಏನು ಆಸೆಯನ್ನು ಇಟ್ಟುಕೊಂಡಿದ್ದೇವೆ, ಆ ರೀತಿಯಲ್ಲಿ ಈ ಗ್ರಾಮೀಣ ಸಮಾಜ ಪುನರ್ ನಿರ್ಮಾಣವಾಗುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನನಗನ್ನಿಸುತ್ತದೆ. ಬಿ.ಡಿ.ಒ. ಅಥವಾ ಅವರ ತಾಲ್ಲೂಕು ಬೋರ್ಡಿನಲ್ಲಿ ಇರತಕ್ಕಂತಹ ಅಧಿಕಾರಿಗಳ್ಯಾರಿಗೂ ಆಸಕ್ತಿ ವಹಿಸಿ ಕೆಲಸ ಮಾಡುವುದಕ್ಕೆ ಇಷ್ಟವಿಲ್ಲದೆ ಕ್ರಿಯಾಹೀನರಾಗಿದ್ದಾರೆ. ಅನೇಕ ಜನ ಬಿ.ಡಿ.ಒ.ಗಳು ಬೇರೆ ಬೇರೆ ಇಲಾಖೆಯಿಂದ ಬರುತ್ತಾರೆ. ಪ್ರತಿಯೊಬ್ಬರು ಕೂಡ ಹಣ ಸಂಪಾದನೆ ಮಾಡಬೇಕೆನ್ನುವ ಉದ್ದೇಶದಿಂದ ಮಂತ್ರಿಗಳ ಹಾಗೂ ಶಾಸಕರ ಹತ್ತಿರ ಹೋಗಿ ದುಂಬಾಲು ಬಿದ್ದು ಬಿ.ಡಿ.ಓ.ಗಳಾಗಿ ಬರುತ್ತಾರೆ. ಯಾವುದೇ ರೀತಿಯ ತರಬೇತಿ ಇಲ್ಲದೆ ಇರತಕ್ಕ ಈ ಅಧಿಕಾರಿಗಳಿಂದ ಗ್ರಾಮ ಸಮಾಜವನ್ನು ಪುನರ್ ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಗ್ರಾಮೀಣ ಸಮಾಜದ ಅಭಿವೃದ್ಧಿಗೆ ಏನಾದರೊಂದು ಒಳ್ಳೆಯ ಕೆಲಸವನ್ನು ಮಾಡಲೇಬೇಕೆನ್ನುವ ಉದ್ದೇಶದಿಂದ ಮಾನ್ಯ ನಜೀರ್‌ಸಾಬ್ ರವರು ಬಹಳಷ್ಟು ಶ್ರಮಪಡುತ್ತಿದ್ದಾರೆ ಕಳೆದ ೧೫–೨೦ ವರ್ಷಗಳಲ್ಲಿ ಮಾಡಿರುವಂಥ ಕೆಲಸಗಳಿಗೆ ಬದಲಾಗಿ ಗ್ರಾಮಾಂತರ ಪ್ರದೇಶಗಳ ಯೋಜನೆಗಳನ್ನು ಅಮೂಲಾಗ್ರವಾಗಿ ಪರಿಶೀಲನೆ ಮಾಡಿ ಬೇರೆ ಬೇರೆ ರೂಪದಲ್ಲಿ ಜಾರಿಗೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಇವತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಮೂಲಕ ಪ್ರತಿ ವರ್ಷ ೨೦–೨೫ ಲಕ್ಷ ರೂಪಾಯಿಗಳನ್ನು ಎನ್.ಆರ್.ಇ.ಪಿ. ಯೋಜನೆಗಳಲ್ಲಿ ಖರ್ಚು ಮಾಡುತ್ತಿದ್ದಾರೆ. ಈ ಯೋಜನೆಗಳ ಮೂಲಕ ರಸ್ತೆಗಳನ್ನು ಮಾಡುತ್ತಿದ್ದಾರೆ. ಈ ವರ್ಷ ಯಾವ ರಸ್ತೆಗಳನ್ನು ಮಾಡುತ್ತಾರೋ ಮುಂದಿನ ವರ್ಷ ಕೂಡ ಅದೇ ರಸ್ತೆಗಳನ್ನು ಮಾಡತಕ್ಕ ಒಂದು ವ್ಯವಸ್ಥೆ ಇದೆ ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಮಟ್ಟದ ರಸ್ತೆಗಳನ್ನು ಮಾಡಿಸುವುದಕ್ಕೆ ಗಮನ ಕೊಡಬೇಕು. ಪ್ರತಿಯೊಂದು ಬ್ಲಾಕಿನಲ್ಲಿಯೂ ಜೆಲ್ಲಿ ಅರೆಯುವಂಥ ರೋಲರ್ ಮಿಷನ್‌ಗಳನ್ನು ಒದಗಿಸಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಹಾಗೂ ಈ ಯೋಜನೆ ಮೂಲಕ ಸಣ್ಣ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಆದ್ಯತೆ ಕೊಡಬೇಕು. ಸಣ್ಣ ಸಣ್ಣ ಕೆರೆಗಳ ಹೂಳು ತೆಗೆಸುವುದಕ್ಕೆ, ತೂಬುಗಳನ್ನು ರಿಪೇರಿ ಮಾಡಿಸುವುದಕ್ಕೆ ಆದ್ಯತೆ ಕೊಡಬೇಕು. ಒಟ್ಟಿನಲ್ಲಿ ನೀರಾವರಿ ಕ್ಷೇತ್ರವನ್ನು ಹೆಚ್ಚು ಅಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಯಾವುದೇ ರೀತಿಯ ತರಬೇತಿ ಹಾಗೂ ಅನುಭವ ಇಲ್ಲದೇ ಇರತಕ್ಕ ಬಿ.ಡಿ.ಓ.ಗಳು ಕೆಲಸಗಳಾದ ಮೇಲೆ ಜೂನಿಯರ್ ಇಂಜನಿಯರುಗಳು ಮೆಜರ್‌ಮೆಂಟ್ ಮಾಡಿ ಬರೆದು ಕಳುಹಿಸಿದ್ದಕ್ಕೆ ಸುಮ್ಮನೆ ಸಹಿ ಮಾಡಿ ಕಳುಹಿಸುತ್ತಾರೆ. ಇದರಿಂದ ಹಣದ ದುರುಪಯೋಗ ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಿದೆ. ನಾನು ಕೂಡ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಸದಸ್ಯನಾಗಿದ್ದೆ.

ಪ್ರತಿಯೊಂದು ಕೆಲಸಗಳಲ್ಲಿಯು ೨೫–೩೦ ಪರ್ಸೆಂಟ್ ಹಣ ದುರುಪಯೋಗ ಮಾಡುವಂಥ ದೂರುಗಳು ಇವೆ. ಇತ್ತೀಚಿಗೆ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ, ಗುಣಮಟ್ಟ ಉತ್ತಮಪಡಿಸುವುದರಿಂದಲೇ ತೃಪ್ತಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಬರ ಕಾಮಗಾರಿಗಳಲ್ಲಿಯೂ ಹಣದ ದುರುಪಯೋಗ ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರದವರು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕು. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಯಾವುದೇ ರೀತಿಯ ಮುಲಾಜಿಲ್ಲದೆ ಕ್ರಮ ತೆಗೆದುಕೊಂಡರೆ ಮಾತ್ರ ಕೆಲಸಕಾರ್ಯಗಳು ಸರಿಯಾದ ರೀತಿಯಲ್ಲಿ ನಡೆದು ಸರ್ಕಾರ ಖರ್ಚು ಮಾಡತಕ್ಕ ಹಣಕ್ಕೆ ಪ್ರತಿಯಾಗಿ ಸರಿಯಾಗಿ ಫಲ ಕೊಡುತ್ತದೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಾವಿರಾರು ಹಳ್ಳಿಗಳಲ್ಲಿ ಪಾಠಶಾಲೆಗಳು ಇಲ್ಲ. ಶಾಲಾಕಟ್ಟಡಗಳನ್ನು ಕಟ್ಟಿಸುವ ವಿಚಾರದಲ್ಲಿ ಸರ್ಕಾರದವರು ಒಂದು ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡು ಇಷ್ಟು ವರ್ಷಗಳ ಶಾಲಾಕಟ್ಟಡಗಳನ್ನು ಸಂಪೂರ್ಣವಾಗಿ ಕಟ್ಟುವ ಒಂದು ಗುರಿಯನ್ನು ಇಟ್ಟುಕೊಂಡು ಈ ಕೆಲಸವನ್ನು ಲ್ಯಾಂಡ್ ಆರ್ಮಿಗಾದರೂ ವಹಿಸಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಐ.ಆರ್.ಡಿ.ಪಿ. ಯೋಜನೆಯಲ್ಲಿ ಟ್ರೈಸಂಗೆ ಒದಗಿಸತಕ್ಕ ಹಣ ಬಹಳ ಕಡಿಮೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಯುವಕರಿಗೆ ಪ್ರತಿಯೊಂದು ಬ್ಲಾಕಿನಲ್ಲಿಯೂ ಸಾವಿರಾರು ಜನರಿಗೆ ತರಬೇತಿ ನೀಡಿ, ಸ್ವಯಂ ಉದ್ಯೋಗಕ್ಕೆ ನೆರವು ಒದಗಿಸಿಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ ಇವತ್ತು ಸ್ವಯಂ ಉದ್ಯೋಗ ಮಾಡುವವರಿಗೆ ೫ ರಿಂದ ೨೫ ಸಾವಿರದವರೆಗೆ ಸಾಲ ಕೊಡುವಂಥ ಒಂದು ಯೋಜನೆ ಇದೆ. ಈ ಯೋಜನೆ ಮೂಲಕ ಸಾಹುಕಾರರಿಗೆ, ಬ್ಯಾಂಕಿನಲ್ಲಿ ಪ್ರಭಾವ ಇರತಕ್ಕವರಿಗೆ ಸಾಲ ಸಿಕ್ಕಿದೆಯೇ ಹೊರತು, ಬಡವರಿಗೆ, ನಿಜವಾಗಿಯೂ ಸ್ವಯಂ ಉದ್ಯೋಗ ಮಾಡತಕ್ಕ ಅರ್ಹ ವ್ಯಕ್ತಿಗಳಿಗೆ ಸಾಲ ಸಿಗುತ್ತಿಲ್ಲ. ಟ್ರೈಸಂನಲ್ಲಿ ತರಬೇತಿ ಪಡೆದವರಿಗೆ ಮಾತ್ರ ಸಾಲ ಕೊಡಲಾಗುವುದೆಂದು ಕಾನೂನು ಮಾಡಿದರೆ ಮಾತ್ರ ಬಡವರಿಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಇನ್ನು ಬಯೋಗ್ಯಾಸ್ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳುತ್ತೇನೆ. ಬಯೋಗ್ಯಾಸ್ ಟೆಕ್ನಾಲಜಿ ೧೯೬೦ರಲ್ಲಿ ಭಾರತದಲ್ಲಿ ಪ್ರಾರಂಭವಾಯಿತು. ನಮಗಿಂತ ಹಿಂದೆ ಬಯೋಗ್ಯಾಸ್ ಟೆಕ್ನಾಲಜಿ ಕಂಡು ಹಿಡಿದ ಚೈನಾದೇಶದವರು ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಯೂನಿಟ್‌ಗಳನ್ನು ಹಾಕಿರುವಾಗ ನಮ್ಮ ದೇಶದಲ್ಲಿ ಒಂದು ಲಕ್ಷ ಯೂನಿಟ್‌ಗಳನ್ನು ಮಾತ್ರ ಹಾಕಿದ್ದಾರೆ. ಚೈನಾದೇಶದಲ್ಲಿ ಸುಮಾರು ೧೨ ನಮೂನೆಯ ಬಯೋಗ್ಯಾಸ್ ಯೂನಿಟ್ ಹಾಕಿದ್ದಾರೆ ಅಲ್ಲದೆ, ೫೦೦ ರೂಪಾಯಿಗಳಿಗೆ ಒಂದು ಯೂನಿಟ್ ಹಾಕತಕ್ಕಂಥ ಟೆಕ್ನಾಲಜಿ ಅಲ್ಲಿ ಬೆಳೆದಿದೆ. ನಮ್ಮ ದೇಶದಲ್ಲಿ ಬಯೋಗ್ಯಾಸ ವಿಚಾರದಲ್ಲಿ ಸಾಕಷ್ಟು ತಾಂತ್ರಿಕತೆ ಬೆಳೆದಿಲ್ಲ. ಈ ಬಗ್ಗೆ ಸಾಕಷ್ಟು ಪ್ರಚಾರ ಮಾಡಿ ಕಡಿಮೆ ದರದಲ್ಲಿ ಯೂನಿಟ್‌ಗಳನ್ನು ಹಾಕಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಅಸ್ತ್ರ ಒಲೆಗಳನ್ನು ಹಾಕಿಸುವಂಥ ಯೋಜನೆ ಕೂಡ ನಮ್ಮಲ್ಲಿ ಇದೆ ಈ ಯೋಜನೆ ಮೇರೆಗೆ ಇಟ್ಟುಕೊಂಡಿರತಕ್ಕ ಗುರಿ ಏನೇನೂ ಸಾಲದು. ೧೯೮೫–೮೬ರಲ್ಲಿ ೪೫,೦೦೦ ಅಸ್ತ್ರ ಒಲೆಗಳನ್ನು ಹಾಕಿಸುವ ಗುರಿ ಇಟ್ಟುಕೊಂಡಿದ್ದು, ಕೇವಲ ೨೫,೦೦೦ ಮಾತ್ರ ಒದಗಿಸಲಾಗಿದೆ. ಅದೇರೀತಿ ಹೊಗೆ ಇಲ್ಲದ ಒಲೆಗಳನ್ನು ಹಾಕಿಸುವ ದಿಕ್ಕಿನಲ್ಲಿಯೂ ಸಾಕಷ್ಟು ಪ್ರಯತ್ನ ಮಾಡಿದಂತೆ ಕಂಡು ಬರುತ್ತಿಲ್ಲ. ಇದರ ಕಡೆಗೆ ಕೂಡ ಸರ್ಕಾರದವರು ಹೆಚ್ಚು ಗಮನಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಅರಣ್ಯಮಂತ್ರಿಯವರಾದ ಶ್ರೀ ಜೀವಿಜಯರವರು ಕಾಡು ಬೆಳೆಸುತ್ತೇವೆಂದು ಹೇಳುತ್ತಿದ್ದಾರೆ. ಬಡವರಿಗೆ ಬೇಕಾದ ಸೌದೆಗೆ ಸಂಬಂಧಪಟ್ಟ ಮರಗಳನ್ನು ಜಾಸ್ತಿ ಬೆಳೆಸಬೇಕು. ಪ್ರತಿಯೊಂದು ಬ್ಲಾಕಿನಲ್ಲಿಯೂ ಕನಿಷ್ಟಪಕ್ಷ ೫,೦೦೦ ಅಸ್ತ್ರ ಒಲೆಗಳನ್ನು ಹಾಕಿಸುವಂಥ ಯೋಜನೆಯನ್ನು ಕೈಗೊಳ್ಳಬೇಕು. ಹಾಗೆ ಮಾಡದಿದ್ದರೆ, ಎಷ್ಟೇ ಪ್ರಮಾಣದಲ್ಲಿ ಅರಣ್ಯ ಬೆಳೆಸಿದರೂ ಪ್ರಯೋಜನವಾಗುವುದಿಲ್ಲ. ಕಾಡುಗಳ ರಕ್ಷಣೆಗೆ ಸಾವಿರಾರು ಜನ ಗಾರ್ಡ್‌ಗಳನ್ನು ರೇಂಜರುಗಳನ್ನು ನೇಮಕ ಮಾಡಿದರೂ ಪ್ರಯೋಜನವಾಗುವುದಿಲ್ಲ. ಅಸ್ತ್ರ ಒಲೆಗಳ ಬಗ್ಗೆ ಜನತೆಗೆ ಸಾಕಷ್ಟು ತಿಳುವಳಿಕೆ ಕೊಡಬೇಕು ಹಾಗೂ ಈ ಬಗ್ಗೆ ಗುರಿಯನ್ನು ಹೆಚ್ಚು ಮಾಡುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

೬–೩೦ ಪಿ.ಎಂ.

ಇನ್ನು ನೂರು ಬಾವಿಗಳು ಒಂದು ಯೋಜನೆ ನಮ್ಮಲ್ಲಿದೆ. ಈ ಯೋಜನೆಯ ಬಗ್ಗೆ ೨೦ ಅಂಶಗಳ ಕಾರ್ಯಕ್ರಮದ ಮೀಟಿಂಗ್‌ನಲ್ಲಿ ಕೇಳುತ್ತಿದ್ದೇವೆ. ಈ ಬಗ್ಗೆ ಬ್ಯಾಂಕ್‌ನವರಿಗೆ ಮತ್ತು ಬ್ಲಾಕ್‌ಮಟ್ಟದಲ್ಲಿರತಕ್ಕ ಅಧಿಕಾರಿಗಳಿಗೆ ಯಾವುದೇ ರೀತಿಯ ಕೋ ಆರ್ಡಿನೇಷನ್ ಇಲ್ಲ. ಸಣ್ಣ ಸಣ್ಣ ಕಾರಣ

ಗಳಿಗೋಸ್ಕರ ಸರಿಯಾಗಿ ರೆಕಾರ್ಡ್ ಬಿಲ್ಡಪ್ ಮಾಡುವುದಿಲ್ಲ. ೧೯೫೮೮ ಅರ್ಜಿಗಳನ್ನು ಬ್ಯಾಂಕ್‌ನವರು ಕಳುಹಿಸಿದ್ದಾರೆ. ಬ್ಯಾಂಕ್‌ನವರು ಸಾಲ ಕೊಟ್ಟಿರತಕ್ಕದ್ದು ಅಂಕಿಅಂಶಗಳ ಪ್ರಕಾರ ೬೪೨೧ ಬಾವಿಗಳಿಗೆ ಮಾತ್ರ. ಬಾವಿ ಯೋಜನೆ ಆರಂಭವಾದಾಗಿನಿಂದ ಕೆಲವು ಬಾವಿಗಳನ್ನು ಮಾಡಿದ್ದಾರೆ. ಈ ದಿಕ್ಕಿನಲ್ಲಿ ನೂರು ಬಾವಿ ಯೋಜನೆಯು ಕೆಲಸ ನಡೆದರೆ ಬಹುಶಃ ನೂರು ಭಾವಿ ಯೋಜನೆ ಎನ್ನುವುದಕ್ಕೆ ಬದಲು ಮೂರು ಬಾವಿ ಯೋಜನೆಯೆಂದು ಹೆಸರು ಬದಲಾವಣೆ ಮಾಡುವುದು ಒಳ್ಳೆಯದು. ನೂರು ಬಾವಿ ಯೋಜನೆ ಕೆಲಸ ಸರಿಯಾಗಿ ಆಗಬೇಕಾದರೆ ಹೆಚ್ಚಿನ ಮುತವರ್ಜಿ ವಹಿಸಿ ಕೆಲಸ ಮಾಡಬೇಕಾಗುತ್ತದೆ. ಬ್ಲಾಕ್‌ಮಟ್ಟದಲ್ಲಿರತಕ್ಕ ಅಧಿಕಾರಿಗಳು ಏನಿದ್ದಾರೆ, ಅವರಿಗೆ ಪ್ರತಿಯೊಬ್ಬರಿಗೂ ಜವಾಬ್ದಾರಿಯನ್ನು ಫಿಕ್ಸ್ ಮಾಡದಿದ್ದರೆ ಬಹುಶಃ ಗ್ರಾಮೀಣ ಸಮಾಜವನ್ನು ಪುನರ್ ನಿರ್ಮಾಣ ಮಾಡುವುದು ಕನಸಿನ ಮಾತಾಗುತ್ತದೆ. ಆದ್ದರಿಂದ ಅಮೂಲಾಗ್ರವಾಗಿ ನಮ್ಮ ಈಗಿನ ಆಡಳಿತವನ್ನು ಬದಲಾವಣೆ ಮಾಡಬೇಕೆಂದು ಮನವಿ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ಎಸ್ ಶಿವನಂಜಪ್ಪ (ಗುಬ್ಬಿ).—ಮಾನ್ಯ ಅಧ್ಯಕ್ಷರೆ, ನನಗೆ ಸಹಕಾರ ಇಲಾಖೆಯ ಬಗ್ಗೆ ಅಷ್ಟೇನೂಗೊತ್ತಿಲ್ಲ. ಆದರೂ ಮಾನ್ಯ ಸಹಕಾರ ಮಂತ್ರಿಗಳಾದ ಶ್ರೀ ಜಾಲಪ್ಪನವರಿಗೆ ಕೇಳುವುದಾದರೆ, ೨೩ ಸಾವಿರ ಸೊಸೈಟಿಗಳಲ್ಲಿ ಸೊಸೈಟಿ ಮಿಸ್ ಅಪ್ರೋಪ್ರಿಯೇಷನ್ ಮಾಡದಿರುವ ಯಾವುದಾದರೂ ಸೊಸೈಟಿ ಇದೆಯೆ ಎಂದು ?

ಅಧ್ಯಕ್ಷರು —ಅದಕ್ಕೆ ಮಂತ್ರಿಗಳು ಏನು ಮಾಡಬೇಕು ಎಂಬುದನ್ನು ಹೇಳಿ ?

ಶ್ರೀ ಜಿ ಎಸ್. ಶಿವನಂಜಪ್ಪ.—ಮಾರ್ಕೆಟ್‌ನಲ್ಲಿ ರೈತರಿಗೆ ಅನುಕೂಲ ಮಾಡಿಕೊಡಲು ವ್ಯವಸ್ಥೆ ಮಾಡಿದ್ದೇವೆಂದು ಹೇಳುತ್ತಾರೆ ? ಆದರೆ ಅದಕ್ಕೆ ತದ್ವಿರುದ್ಧವಾಗಿ ಎರಡು ಪರ್ಸೆಂಟ್ ಕಮಿಷನ್ ತೆಗೆದುಕೊಳ್ಳಿಯೆಂದು ಓಪನ್ ಆಗಿ ಚೀಟಿ ಬರೆದು ಕೊಡುತ್ತಾರೆ, ತುಮಕೂರಿನಲ್ಲಿ ಎರಡು ಪರ್ಸೆಂಟ್ ಇದ್ದದ್ದು ೮ ಪರ್ಸೆಂಟ್‌ಗೆ ಬಂದಿದೆ. ಗುಬ್ಬಿಯಲ್ಲಿ ಐದಾರು ಪರ್ಸೆಂಟ್ ವರೆಗೆ ಕಮಿಷನ್ ವ್ಯವಹಾರ ನಡೆಯುತ್ತಿದೆ. ಇದರ ಬಗ್ಗೆ ಮಂತ್ರಿಗಳಿಗೆ ಹೇಳುತ್ತೇನೆಂದು ಅಲ್ಲಿನವರಿಗೆ ಹೇಳಿದ್ದೇನೆ. ಈ ವ್ಯವಸ್ಥೆಯನ್ನು ಮಂತ್ರಿಗಳು ತಪ್ಪಿಸಲಿಲ್ಲ, ೮೮ ಮೂಟೆ ಅಡಿಕೆ ಮಾರ್ಕೆಟ್‌ಗೆ ಬಂದರೆ ೮ ಮೂಟೆಗೆ ಮಾತ್ರ ರಶೀತಿ ಕೊಡುತ್ತಾರೆ. ೮೦ ಮೂಟೆಗೆ ರಶೀತಿ ಕೊಡುವುದಿಲ್ಲ. ಇದರಿಂದ ಸೇಲ್ಸ್ ಟ್ಯಾಕ್ಸ್ ಹಾಳಾಗಿ ಹೋಗುತ್ತಿದೆ. ಇದನ್ನು ಸ್ವಲ್ಪ ಬಿಗಿ ಮಾಡಿದರೆ ಸೇಲ್ಸ್ ಟ್ಯಾಕ್ಸ್ ಕೊಡತಕ್ಕವರು ಇದರಲ್ಲಿ ಬರುತ್ತಾರೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

ಇನ್ನು ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ಹೇಳುವುದಾದರೆ, ಬೋರ್‌ವೆಲ್ ಒಂದು ಹಾಕಿಸಿದರೆ ರಾಜ್ಯವೆಲ್ಲಾ ಉದ್ಧಾರವಾಗುತ್ತದೆಂದು ಮಾನ್ಯ ಮಂತ್ರಿಗಳು ಏನು ತಿಳಿದುಕೊಂಡಿದ್ದಾರೋ ಏನೋ ನನಗೆ ಗೊತ್ತಿಲ್ಲ, ಅವರು ಟಾಮ್ ಟಾಮ್ ಹೊಡೆದುಕೊಂಡು ಈ ಬಗ್ಗೆ ಹೇಳುತ್ತಾರೆ. ಒಂದು ರಾಜ್ಯದ ಉದ್ಧಾರವಾಗಬೇಕಾದರೆ, ಒಂದು ಊರು ಉದ್ಧಾರವಾಗಬೇಕಾದರೆ ಜನರಿಗೆ ಏನೇನು ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕೋ ಅದನ್ನು ಕಲ್ಪಿಸಿಕೊಡುವುದು ಬಹಳ ಮುಖ್ಯ. ಇವತ್ತು ಎಷ್ಟೋ ಊರುಗಳಲ್ಲಿ ಪ್ರಾಥಮಿಕ ಶಾಲೆಗಳಿಗೆ ಕಟ್ಟಡಗಳು ಇಲ್ಲ. ೫೦,೫೫೫ ಜನತಾ ಮನೆಗಳನ್ನು ಹಳ್ಳಿಗಳಲ್ಲಿ ಕಟ್ಟುತ್ತೇವೆಂದು ಹೇಳುತ್ತಾರೆ. ಆ ಮನೆಗಳನ್ನು ಎಲ್ಲಾ ಕಡೆಗೂ ಹಂಚಿದರೆ ಒಂದು ಊರಿಗೆ ಎರಡು—ಎರಡೂವರೆ ಮನೆಗಳು ಬರುತ್ತವೆ, ೫೦ ಸಾವಿರ ಚಿಲ್ಲರೆ ಮನೆಗಳನ್ನು ಕೊಡುತ್ತೇವೆಂದು ಹೇಳಿಕೊಂಡು ದೊಡ್ಡದಾಗಿ ಪ್ರಚಾರ ಮಾಡುತ್ತಾರೆ, ಒಂದು ಗ್ರೂಪ್‌ಗೆ ೬೫ ಸಾವಿರ ರೂಪಾಯಿಗಳನ್ನು ಕೊಟ್ಟರೆ ಒಂದು ಊರಿಗೆ ಎಷ್ಟು ಮನೆಗಳನ್ನು ಕೊಡುವುದಕ್ಕಾಗುತ್ತದೆ ? ೧೯೮೬-೮೭ ರಲ್ಲಿ ಕೇವಲ ೬೫ ಸಾವಿರ ರೂಪಾಯಿಗಳನ್ನು ಕೊಡುವುದರಿಂದ ಮನೆಗಳನ್ನು ಕಟ್ಟುವುದಾದರೂ ಹೇಗೆ ? ಅಂತ್ಯೋದಯ ಸ್ಕೀಮ್ ಏನಿದೆ. ಆ ಒಂದು ಸ್ಕೀಮ್ ಅನ್ನು ಮೆಚ್ಚುತ್ತೇನೆ ಆ ಒಂದು ಕಾರ್ಯಕ್ರಮ ಏನಿದೆ ಅದನ್ನು ತೀವ್ರಗತಿಯಲ್ಲಿ ತೆಗೆದುಕೊಳ್ಳಬೇಕು ಇನ್ನು ಬೇರೆ ಸ್ಕೀಮ್‌ಗಳನ್ನು ಎಲೆಕ್ಷನ್ ಸ್ಟಂಟ್‌ಗೋಸ್ಕರ ಇಟ್ಟಿದ್ದಾರೆ. ನಿಮ್ಮ ಕಾರ್ಯಕ್ರಮಗಳಿಂದ ಎಷ್ಟು ಜನರಿಗೆ ಅನುಕೂಲವಾಗಿದೆ ? ಈ ತರಹ ಮಾಡುತ್ತಾ ಹೋದರೆ ನಮ್ಮ ಜನರು ಉದ್ಧಾರವಾಗುವುದು ಯಾವಾಗ? ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ತರಹ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಅಂಕಿಅಂಶಗಳನ್ನು ತೋರಿಸಿ ದೊಂಬರಾಟ ಆಡಿದರೆ ಹಳ್ಳಿಗಾಡಿನ ಜನ ನಿಮ್ಮನ್ನು ಕ್ಷಮಿಸುವುದಿಲ್ಲ. ಕಾಂಗ್ರೆಸ್

ನವರನ್ನು ಓಡಿಸುವುದಕ್ಕೆ ಜನರು ೩೫ ವರ್ಷ ತೆಗೆದುಕೊಂಡರೆ, ನಿಮ್ಮನು ಓಡಿಸುವುದಕ್ಕೆ ಮೂರೇ ವರ್ಷ ಸಾಕು. ಇದಕ್ಕೆ ಕಾರಣ, ಯಾವುದೇ ಸ್ಕೀಮ್ ತೆಗೆದುಕೊಳ್ಳಿ ಸರಿಯಾದ ಕೆಲಸ ಆಗಿಲ್ಲ. ಜನಾರೋಗ್ಯ ಇಲಾಖೆಯನ್ನು ತೆಗೆದುಕೊಂಡರೆ ಭ್ರಷ್ಟಾಚಾರ ಯಾವರೀತಿ ಇಲ್ಲಿ ನಡೆಯುತ್ತಿದೆ ಎಂದು ಹೇಳಬೇಕಾದರೆ, ನಾವು ೩೫ ರೂಪಾಯಿ ೪೮ ರೂಪಾಯಿ ಕೊಟ್ಟರೆ ಇವರು ಒಂದು ಅಡಿಗೆ ೬೦-೬೫ ರೂಪಾಯಿ ಕೊಡುತ್ತಿದ್ದಾರೆ. ನಿಮಗೆ ರಿಗ್‌ಗಳು ಸಿಗುವುದಿಲ್ಲವೆ ? ಏತಕ್ಕೆ ಇಷ್ಟೊಂದು ಹಣವನ್ನು ಕೊಡುತ್ತೀರಿ? ನಾವು ೪೦ ರೂಪಾಯಿ ಒಂದು ಅಡಿಗೆ ಕೊಟ್ಟರೆ ನೀವು ೬೫ ರೂಪಾಯಿ ಕೊಡುವುದಾದರೆ ಇದರಲ್ಲಿ ಭ್ರಷ್ಟಾಚಾರ ಅಡಗಿದೆ. ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳಿ ಹೊಸ ಕಾನೂನು ತಂದಿದ್ದೀರಿ, ಅದು ಹೇಗೆ ಮಾಡುತ್ತೀರಿ ಮಾಡಿ. ಒಂದು ಬೋರ್‌ವೆಲ್ ಮಂಜೂರು ಮಾಡಲಿಕ್ಕೆ ನಿಮಗೆ ಎಷ್ಟು ತಿಂಗಳು ಬೇಕು ? ನನ್ನ ಮತದಾರ ಕ್ಷೇತ್ರದಲ್ಲಿ ೧೫-೧೬ ಹಳ್ಳಿಗಳಲ್ಲಿ ಬೋರ್‌ವೆಲ್‌ಗಳು ಇಲ್ಲ ಚುನಾವಣೆ ಮುಗಿದ ಮೇಲೆ ನಾನು ಜಿಲ್ಲಾಧಿಕಾರಿಗಳವರಿಗೆ ಬರೆದಿದ್ದೇನೆ. ಜಿಲ್ಲಾಧಿಕಾರಿಗಳು ಎಕ್ಸಿಕ್ಯುಟೀವ್ ಇಂಜಿನಿಯರ್‌ಗೆ ಬರೆಯುತ್ತಾರೆ. ಎಕ್ಸಿಕ್ಯುಟೀವ್ ಇಂಜಿನಿಯರ್ ಸೂಪರಿಂಟೆಂಡಿಂಗ್ ಇಂಜಿನಿಯರ್ ಪವರಿಗೆ ಆವರು ಚೀಫ್ ಇಂಜಿನಿಯರ್‌ಗೆ ಬರೆದು ನಂತರ ಅದು ಮಂತ್ರಿಗಳ ಹತ್ತಿರ ಬರಬೇಕಾದರೆ ಆರು ತಿಂಗಳು ಆಗುತ್ತದೆ. ನಿಮ್ಮ ಹತ್ತಿರ ಬಂದರೆ ಬೋರ್‌ವೆಲ್ ಹಾಕಲಿಕ್ಕೆ ರಿಗ್ ಇರುವುದಿಲ್ಲ. ಇಂತ ಸಮಸ್ಯೆಯನ್ನು ಯಾವಾಗ ಬಗೆಹರಿಸುತ್ತೀರಿ ? ಬರಗಾಲದಲ್ಲಿ ಬಹಳಷ್ಟು ಹಣವನ್ನು ಖರ್ಚು ಮಾಡುತ್ತೀರಿ, ಅದರಲ್ಲಿ ಎಷ್ಟು ಭ್ರಷ್ಟಾಚಾರ ನಡೆದಿವೆ ಎಂಬುದು ನಿಮಗೆ ಗೊತ್ತಿದೆಯೋ ? ಬೋರ್‌ವೆಲ್‌ಗಳನ್ನು ತೆಗೆದು ಅವಕ್ಕೆ ಪೈಪುಗಳನ್ನು ಹಾಕುವಾಗ ಬಹಳಷ್ಟು ಮೋಸ ಮಾಡಿದ್ದಾರೆ. ಬೋರ್‌ವೆಲ್ ಹಾಕಿಸಲಿಕ್ಕೆ ಎಷ್ಟು ದಿವಸ ಬೇಕು ? ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಐದಾರು ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಇದುವರೆಗೆ ಮಾಡಿಕೊಟ್ಟಿಲ್ಲ. ಜನ ನಿಮ್ಮನ್ನು ಹೇಗೆ ನಂಬಬೇಕು ? ಅಧಿಕಾರ ವಿಕೇಂದ್ರೀಕರಣ ಹೇಗೆ ಮಾಡುತ್ತೀರಿ ? ಬರಗಾಲದ ಬಗ್ಗೆ ಕೆಲಸ ಮಾಡುವ ಕಡೆ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಅಥವಾ ವಿಶೇಷ ಜಿಲ್ಲಾಧಿಕಾರಿಗಳವರಿಗೆ ಅಧಿಕಾರವನ್ನು ಕೊಡಬೇಕು. ಅವರಿಗೆ ಅಧಿಕಾರ ಕೊಟ್ಟರೆ ಅವರು ತಕ್ಷಣ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಬೋರ್‌ವೆಲ್ ಹಾಕಿಸುವುದರಲ್ಲಿ ಭ್ರಷ್ಟಾಚಾರ ಅಡಗಿದೆ. ನೀವು ಪವರ್ಸ್ ಅನ್ನು ಏತಕ್ಕೆ ಇಟ್ಟು ಕೊಂಡಿದ್ದೀರಿ ? ಜಿಲ್ಲಾಧಿಕಾರಿಗಳವರಿಗೆ ಪವರ್ಸ್ ಕೊಟ್ಟು, ಕೆಲಸ ಮಾಡಲಿಕ್ಕೆ ಹೇಳಿ. ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳುವವರು ಪವರ್ಸ್ ಎಲ್ಲವನ್ನು ನೀವೇ ಇಟ್ಟುಕೊಂಡಿದ್ದೀರಿ, ಹಳ್ಳಿಯಲ್ಲಿ ಆಗತಕ್ಕ ಕೆಲಸ ಕಾರ್ಯಗಳಿಗೆ ಇಲ್ಲಿಯವರೆಗೂ ಬರಬೇಕೆ ? ಹಳ್ಳಿಯಲ್ಲಿ ಆಗತಕ್ಕ ಕೆಲಸಕಾರ್ಯಗಳಿಗೆ ಅಲ್ಲಿಯೇ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅಧಿಕಾರ ವಿಕೇಂದ್ರೀಕರಣ ಮಾಡುವಾಗ ನೀವು ಯಾವುದೇ ಅಧಿಕಾರವನ್ನು ಇಟ್ಟುಕೊಳ್ಳಬಾರದು. ನಮ್ಮ ತಾಲ್ಲೂಕಿನ ಒಂದು ವಿಚಾರ ತಮ್ಮ ಹತ್ತಿರ ಬಂದು ಅದು ಪುನಃ ವಾಪಸ್ಸು ಹೋಗುವುದಕ್ಕೆ ೯ ತಿಂಗಳು ಆಗುತ್ತದೆ. ಆದ್ದರಿಂದ ಅಧಿಕಾರವನ್ನು ಅವರಿಗೆ ಕೊಡಬೇಕು ನೀವು ಯಾವ ಅಧಿಕಾರವನ್ನೂ ಇಟ್ಟುಕೊಳ್ಳಬಾರದು. ಅನೇಕ ಹಳ್ಳಿಗಳಿಗೆ ಇವತ್ತು ರಸ್ತೆ ಇಲ್ಲ. ಮಾನ್ಯ ಕೃಷಿ ಮಂತ್ರಿಗಳಾದ ಶ್ರೀ ಪ್ರಕಾಶ್‌ರವರು ಹೇಳುವಂತೆ ಶೇಕಡ ೮೦ ರಷ್ಟು ಹಳ್ಳಿಗಾಡು ಜನರು ಇನಿದ್ದಾರೆ ಅವರಲ್ಲಿ ಶೇಕಡಾ ೭೦ ರಷ್ಟು ಜನ ರೈತರು ಇದ್ದಾರೆ ರೈತರ ಕಷ್ಟ ಏನು ? ಅದರ ಬಗ್ಗೆ ಚರ್ಚೆಮಾಡಲು ಮಾನ್ಯ ಪ್ರಕಾಶ್‌ರವರ ಜೊತೆಯಲ್ಲಿ ಮಾನ್ಯ ಜಾಲಪ್ಪನವರ ಜೊತೆಯಲ್ಲಿ ಕುಳಿತುಕೊಂಡು ಚರ್ಚೆ ಮಾಡಬೇಕು. ನಾಲ್ಕು ಹಳ್ಳಿಯ ಕುಟುಂಬಗಳ ವಿವರನ್ನು ಕೊಟ್ಟಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆ, ತುಮಕೂರು, ಕೋಲಾರ ಈ ಜಿಲ್ಲೆಗಳನ್ನು ಒಂದಕ್ಕೊಂದು ಹೋಲಿಕೆ ಮಾಡುವುದಕ್ಕೆ ಆಗುವುದಿಲ್ಲ. ಎತ್ತು ಉಚ್ಚೆ ಉಯ್ದಹಾಗೆ ಎಂದು ಹಳ್ಳಿಗಳ ಕಡೆ ಒಂದು ಗಾದೆ ಹೇಳುತ್ತಾರೆ ಅದರಂತೆ ಎಲ್ಲಾ ಜಿಲ್ಲೆಗಳಿಗೂ ಒಂದೇ ಸ್ಕೀಮ್ ತುಮಕೂರು ಜಿಲ್ಲೆಗೆ ಬೇಕಾಗುವಂತಹ ಸ್ಕೀಮ್‌ಗಳು ದಕ್ಷಿಣ ಕನ್ನಡ ಜಿಲ್ಲೆಗೆ ಬೇಕಾಗಿಲ್ಲ. ತುಮಕೂರು ಕೋಲಾರ ಜಿಲ್ಲೆಗಳಿಗೆ ಕೆಲವು ಅವಶ್ಯಕತೆಗಳು ಬೇಕಾಗುತ್ತದೆ. ಇಂತಹ ವಿಚಾರಗಳನ್ನು ಗ್ರಾಮೀಣಾಭಿವೃದ್ಧಿ ಮಂತ್ರಿಗಳು, ಕೃಷಿ ಮಂತ್ರಿಗಳು, ಸಹಕಾರ ಮಂತ್ರಿಗಳು ಕುಳಿತು ಸಮಾಲೋಚಿಸಬೇಕಾಗುತ್ತದೆ. ಎಲ್ಲರೂ ಮಾತನಾಡಿಕೊಂಡು ಕೆಲವೊಂದು ಕಾರ್ಯಕ್ರಮಗಳಿಗೆ ಹೆಚ್ಚಿನ ಹಣದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ದುರಾದೃಷ್ಟವಶಾತ್ ಈ ರಾಜ್ಯದಲ್ಲಿ ಈ ರಾಷ್ಟ್ರದಲ್ಲಿ ಯಾವುದಕ್ಕೆ ಆದ್ಯತೆಯನ್ನು ಕೊಡಬೇಕೋ ಅದನ್ನು ಕೊಡುತ್ತಾ ಇಲ್ಲ ನೀವು ಕೇಂದ್ರ ಬಿಂದುವಾಗಿರಬೇಕಾಗುತ್ತದೆ, ನಿಮ್ಮ ಸುತ್ತಾ ಕೃಷಿ, ಸಹಕಾರ, ಅರಣ್ಯ ಇವೆಲ್ಲಾ ಇರಬೇಕಾಗುತ್ತದೆ.

ಜನರು ಶ್ರೀಮಾನ್ ದೇವೇಗೌಡರ ಸ್ವತ್ತು. ಅಥವಾ ಶ್ರೀಮಾನ್ ಬೊಮ್ಮಾಯಿಯವರ ಸ್ವತ್ತು ಇರುತ್ತಾರೆಯೋ ಏನ: ನಿಮ್ಮ ಸ್ವತ್ತು ಆಗಲಿ, ಶ್ರೀಮಾನ್ ಜಾಲಪ್ಪನವರ ಸ್ವತ್ತು ಆಗಲಿ ಯಾರು ಇರುವುದಿಲ್ಲ. ಶೇಕಡ ೮೦ ರಷ್ಟು ಜನಗಳಿಗೆ ಅನುಕೂಲ ಮಾಡಿಕೊಡುವಂತಹ ಇಲಾಖೆ ಏನಿದೆ, ಆ ಇಲಾಖೆಗೆ ಸಾಕಷ್ಟು ಪ್ರಾಮುಖ್ಯತೆಯನ್ನು ಕೊಡಬೇಕಾಗಿತ್ತು. ಆದರೆ ಆ ರೀತಿ ಮಾಡುವಂತಿಲ್ಲ, ನಿಮ್ಮ ಇಲಾಖೆಯಲ್ಲಿ ಶೇಕಡ ೫೦ ರಷ್ಟು ಹೆಣ್ಣು ಮಕ್ಕಳು ಬರುತ್ತಾರೆ. ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳ ಅಭಿವೃದ್ಧಿ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ? ಅವರಿಗೆ ಎಜುಕೇಷನ್ ಹೇಗೆ ಬರಬೇಕು ? ಮೊನ್ನೆ ನಮ್ಮ ಜಿಲ್ಲೆಗೆ ಹೋದಾಗ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಕುಟುಂಬ ಯೋಜನೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದಕ್ಕೆ ನೀವು ಸಹಾಯ ಮಾಡಿ ಎಂದು ಜಿಲ್ಲಾಧಿಕಾರಿಗಳು ನಮಗೆ ಹೇಳಿದರು, ಹಾಗೂ ಹಳ್ಳಿಹಳ್ಳಿಗಳಿಗೆ ಹೋಗಿ ಜನಗಳಿಗೆ ತಿಳುವಳಿಕೆಯನ್ನು ಹೇಳಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿದರು ಅದಕ್ಕೆ ನಾವು ಅಧಿಕಾರಿಗಳನ್ನು ೪ ವಿಭಾಗಗಳನ್ನಾಗಿ ಮಾಡಿಕೊಂಡು ಒಂದೊಂದು ಹೋಬಳಿಗೂ ಹೋದೆವು. ಆದರೆ ಆ ಹೆಣ್ಣು ಮಕ್ಕಳು ಕೇಳತಕ್ಕಂತಹ ಪ್ರಶ್ನೆಗೆ ನಾವು ಉತ್ತರವನ್ನು ಕೊಡುವುದಕ್ಕಾಗಲಿಲ್ಲ. ಇದೇ ರೀತಿ ಜನಸಂಖ್ಯೆ ಬೆಳೆಯುತ್ತಾ ಹೋದರೆ, ಭಾರತದಲ್ಲಿ ಈಗ ಇರುವಂತಹ ೬೮ ಕೋಟಿ ಜನಸಂಖ್ಯೆ ಇನ್ನು ೧೦ ವರ್ಷ ಕಳೆದ ಮೇಲೆ ೧೦೮ ಕೋಟಿ ಆಗಬಹುದು. ಜನಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಅಥವಾ ಅದನ್ನು ನಿಯಂತ್ರಣ ಮಾಡುವುದಕ್ಕೆ ಕಾನೂನು ಜಾರಿಗೆ ಬಂದರೆ ಆಗುವುದಿಲ್ಲ. ಅವರಿಗೆ ಆ ಬಗ್ಗೆ ಸರಿಯಾದ ಎಜುಕೇಷನ್ ಕೊಡಬೇಕಾಗುತ್ತದೆ. ಇದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ? ೨,೦೦೦ ಮನೆಗಳನ್ನು ಕಟ್ಟಿಕೊಡುವುದರಿಂದ, ಹೆಚ್ಚು ಕೊಳವೆ ಬಾವಿಗಳನ್ನು ಮಾಡುವುದರಿಂದ, ಸ್ಕೂಲುಗಳನ್ನು ಹೆಚ್ಚು ಪ್ರಾರಂಭ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಇವೆಲ್ಲವನ್ನೂ ಕ್ರೋಡಿಕರಿಸಿ ಒಂದೇ ಯೋಜನೆಯನ್ನು ತಯಾರು ಮಾಡಬೇಕಾಗುತ್ತದೆ.

ಅಧ್ಯಕ್ಷರು.—ನಿಮ್ಮ ಸಹಕಾರದಿಂದ.

ಶ್ರೀ ಜಿ. ಎಸ್. ಶಿವನಂಜಪ್ಪ.— ಇವರ ಯೋಜನೆ ಏನೆಂಬುದೇ ನಮಗೆ ಗೊತ್ತಾಗುವುದಿಲ್ಲ, ನೀವು ಚುನಾವಣೆಯಲ್ಲಿ ಏನು ಘೋಷಣೆ ಮಾಡಿದ್ದೀರಿ ? ನಿಮ್ಮ ಚುನಾವಣಾ ಘೋಷಣೆಯಲ್ಲಿ ಮನೆಗೊಬ್ಬರಿಗೆ ಕೆಲಸ ಕೊಡುತ್ತೇವೆಂದು ಹೇಳಿದಿರಿ, ಅದರಂತೆ ಯಾವ ಕೆಲಸವನ್ನು ಕೊಟ್ಟಿದ್ದೀರೆಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ: ಅದಕ್ಕೆ ನೀವು ಮಾಡಿರುವಂತಹ ಯೋಜನೆಯಾದರೂ ಯಾವುದು ಎಂದು ನಿಮ್ಮನ್ನು ಕೇಳುತ್ತೇನೆ. ನಮ್ಮ ಮಾನ್ಯ ಮುಖ್ಯ ಮಂತ್ರಿಯವರನ್ನು ಈ ಬಗ್ಗೆ ಕೇಳಿದರೆ, ಅವರು ಎನ್. ಆರ್. ಇ. ಪಿ. ಯೋಜನೆಯಡಿಯಲ್ಲಿ ಅವರಿಗೆ ಕೆಲಸವನ್ನು ಕೊಡುತ್ತೇವೆಂದು ಹೇಳುತ್ತಾರೆ. ನಿಮ್ಮ ಚುನಾವಣೆಯ ಘೋಷಣೆಯಲ್ಲಿ ಆ ರೀತಿ ಹೇಳಿದ್ದೀರಾ ? ಗ್ರಾಮಾಂತರ ಪ್ರದೇಶದ ರತಕ್ಕಂತಹ ಯುವಕರಂತೂ ಬಹಳ ನಿರಾಶವಾದಿಗಳಾಗಿದ್ದಾರೆ. ರಾಷ್ಟ್ರದ ಹಾಗೂ ರಾಜ್ಯದ ಸಂಪತ್ತು ಎಂಬುದಾಗಿ ನಾವು ಏನು ಹೇಳುತ್ತೇವೆ, ಅವರ ಉನ್ನತಿಯ ಬಗ್ಗೆ ನೀವು ಮಾಡಿರುವಂತಹ ಯೋಜನೆ ಯಾವುದು ? ಈಗ ಅಂತಹ ಯುವಕರನ್ನೇ ಕೈಬಿಟ್ಟಿದ್ದೀರಿ. ಅವರಿಗೆ ಯಾವ ಕೆಲಸವನ್ನು ಕೊಟ್ಟಿದ್ದೀರೆಂದು ಹೇಳಬೇಕಾಗುತ್ತದೆ. ಬಡ್ಜೆಟ್ಟಿನಲ್ಲೂ ಸಹ ನೋಡಿದರೆ ಇವರಿಗೆ ಆ ಯುವಕರ ಬಗ್ಗೆ ಕಲ್ಪನೆಯೇ ಇಲ್ಲ. ಕನಿಕರವೇ ಇಲ್ಲ, ಅವರಿಂದ ಓಟು ತೆಗೆದುಕೊಂಡು ೫ ವರ್ಷ ಆಡಳಿತವನ್ನು ಮಾಡಬಹುದು, ಎಂದು ತಿಳಿದುಕೊಂಡಿರಬಹುದು. ಆ ಯುವಕರೇನಾದರೂ ನಿಮ್ಮ ಮೇಲೆ ತಿರುಗಿ ಬಿದ್ದರೆ ನಾಳೆ ನೀವು ಮನೆಗೆ ಹೋಗಬೇಕಾಗುತ್ತದೆ. ಚುನಾವಣೆಗೋಸ್ಕರ ಈ ರೀತಿಯ ಸ್ಟಂಟ್ ಮಾಡುವುದನ್ನು ದಯಮಾಡಿ ಬಿಟ್ಟು ಬಿಡಿ ಇಲ್ಲದಿದ್ದರೆ ಅದರಿಂದ ಮುಂದೆ ನೀವು ಕಷ್ಟವನ್ನು ಅನುಭವಿಸುತ್ತೀರಿ. ೧೬ ರಿಂದ ೧೮ ವರ್ಷದ ಹುಡುಗರು ಯಾರು ಇದ್ದಾರೆ ಅವರೆಲ್ಲರೂ ನಿಮ್ಮ ಪಕ್ಷದ ಪರವಾಗಿ ಕಳೆದ ಚುನಾವಣೆಯಲ್ಲಿ ಕ್ಯಾನ್ವಾಸ್ ಮಾಡುತ್ತಿದ್ದರು, ನಾನು ಅವರನ್ನು ಕುರಿತು ಏಕೆ ಅವರ ಪರವಾಗಿ ಕ್ಯಾನ್ವಾಸ್ ಮಾಡುತ್ತೀರಾ ಎಂಬುದಾಗಿ ಕೇಳಿದ್ದಕ್ಕೆ ಅವರು ಹೇಳಿದರು ಅವರು ಮನೆಗೊಂದು ಯುವಕರಿಗೆ ಕೆಲಸ ಕೊಡುತ್ತಾರೆ, ಅದಕ್ಕಾಗಿಯೇ ನಾವು ಅವರ ಪರವಾಗಿ ಕ್ಯಾನ್ವಾಸ್ ಮಾಡುತ್ತೇವೆಂದು ಹೇಳಿದರು. ಅಂತಹ ಯುವಕರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ನೀವು ಯೋಜನೆಯನ್ನು ಏನಾದರು ಹಾಕಿಕೊಳ್ಳದಿದ್ದರೆ ನೀವು ಒಂದು ಕ್ಷಣವೂ ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಸಾಧ್ಯವಾಗುವುದಿಲ್ಲ. ತಾಲ್ಲೂಕು ಬೋರ್ಡಿನ ವತಿಯಿಂದ ಯಾವ ಕೆಲಸವನ್ನು ಮಾಡಿದ್ದೀರೆಂಬುದನ್ನು ಇದರಲ್ಲಿ ಹೇಳಿಲ್ಲ. ಎಷ್ಟು ಹಣವನ್ನು ಖರ್ಚು ಮಾಡಿದ್ದೀರೆಂಬುದೂ ಕೂಡ ಇದರಲ್ಲಿಲ್ಲ. ಯಾವುದೇ

ಅಡ್ವೈಜರಿ ಬೋರ್ಡ್ ಇದ್ದರೂ ಅದು ಈ ಪುಸ್ತಕದಲ್ಲಿ ಬರಬೇಕು. ಆದರೆ ಅದ್ಯಾವುದರ ಪ್ರಸ್ತಾಪವೇ ಇಲ್ಲ. ಇವರು ಮಾಡುತ್ತಿರುವ ಕೆಲಸಗಳು ಯಾವ ರೀತಿಯಾಗಿವೆ ಎಂದರೆ, ಮೊದಲು ತಾಲ್ಲೂಕು ಬೋರ್ಡಿನ ವತಿಯಿಂದ ಮಾಡಿದಂತಹ ಕೆಲಸವನ್ನು ಪುನ: ಎನ್. ಆರ್. ಇ. ಪಿ. ಯೋಜನೆಯುಡಿಯಲ್ಲಿ ಮಾಡುವುದು. ನಂತರ ಅದೇ ಕೆಲಸವನ್ನು ಪಿ. ಡಬ್ಲ್ಯು. ಡಿ. ಯಿಂದ ಮಾಡಿಸುವುದು. ಈ ರೀತಿಯಾಗಿ ಕೆಲಸಕಾರ್ಯಗಳನ್ನು ಮಾಡಿಸುತ್ತಿದ್ದಾರೆ. ಮಾಡಿದ ಕೆಲಸವನ್ನೇ ಮತ್ತೆ ಮತ್ತೆ ಮಾಡುತ್ತಿದ್ದಾರೆ. ಕೊರಟಗೆರೆ ತಾಲ್ಲೂಕಿನಲ್ಲಿ ಒಂದು ಉದಾಹರಣೆಯನ್ನು ಹೇಳುವುದಾದರೆ, ನಾನು ಹಿಂದೆ ಬೆಳ್ಳಾವಿ ಕ್ಷೇತ್ರದ ಶಾಸಕನಾಗಿದ್ದಾಗ ಇ. ಎ. ಎಸ್. ಯೋಜನೆಯುಡಿಯಲ್ಲಿ ೪೫ ಲಕ್ಷ ರೂಪಾಯಿಗಳ ಒಂದು ಕೆಲಸವನ್ನು ಮೂರು ವರ್ಷಗಳಲ್ಲಿ ಮಾಡಿಸಿದ್ದೆ. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅದೇ ಕೆಲಸವನ್ನು ಅಂದರೆ ಬುಕ್ಕಾಪಟ್ಟ–ನೇಗಿಲುಪಾಡ ರಸ್ತೆಯ ಕೆಲಸವನ್ನು ಏನು ೧೯೭೮–೭೯–೮೦ನೇ ಸಾಲುಗಳಲ್ಲಿ ನಾವು ಮಾಡಿಸಿದೆವು, ಇವತ್ತು ಅದೇ ಕೆಲಸದ ಮೇಲೆ ಮತ್ತೆ ಬಿಲ್ಲನ್ನು ಮಾಡಿ ಹಣವನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ನೀವು ಇಂತಹವುಗಳನ್ನೆಲ್ಲಾ ಪ್ರತ್ಯಕ್ಷವಾಗಿ ನೋಡಬೇಕು. ಈ ಕರ್ನಾಟಕ ಜನ ಮೆಚ್ಚತಕ್ಕಂತಹ ರೀತಿಯಲ್ಲಿ ಆಡಳಿತವನ್ನು ಮಾಡಿ, ಜನ ನಿಮ್ಮನ್ನು ಸ್ವಾಗತ ಮಾಡುತ್ತಾರೆ. ನಾವು ಸ್ವಾಗತ ಮಾಡುತ್ತೇವೆ. ಅದನ್ನು ಬಿಟ್ಟು ಬರೀ ಭಾಷಣದ ಮೂಲಕ ರಾಜ್ಯವನ್ನು ಆಳುವುದಕಾಗುವುದಿಲ್ಲ. ಇಷ್ಟನ್ನು ಹೇಳುತ್ತಾ ಅಧ್ಯಕ್ಷರು ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಇಲ್ಲಿಗೆ ಬೇಡಿಕೆಯ ಮೇಲಿನ ಚರ್ಚೆ ಮುಕ್ತಾಯವಾಯಿತು.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ರೂಲ್ ೩೩೪ರ ಮೇಲೆ ಬೆಳಿಗ್ಗೆ ಎತ್ತಿದಂತಹ ವಿಷಯದ ಮೇಲೆ ಲಿಖಿತ ಹೇಳಿಕೆಯನ್ನು ನೀಡುತ್ತೇನೆ.

Statement by the Minister.

Reg Clash took place in JSS College chamarajn Ngan

ದಿನಾಂಕ ೮–೨–೧೯೮೬ ರಂದು ಒಬ್ಬ ಕಾಲೇಜು ವಿದ್ಯಾರ್ಥಿಗೆ ಅನಾಮಧೇಯ ಬೆದರಿಕೆ ಪತ್ರವು ಬಂದಿತ್ತು. ಅದರ ವಿಷಯದಲ್ಲಿ ಕೇಂದ್ರ ವಿದ್ಯಾರ್ಥಿಗಳ ಮೇಲೆ ಅನುಮಾನವಿತ್ತೆಂದು ಆತ ಪ್ರಾಂಶುಪಾಲರಿಗೆ ತಿಳಿಸಿದರು. ಒಬ್ಬರಿಗೂ ಪಾಠ ನಡೆಯುಲಿಲ್ಲ ಕಾಲೇಜಿಗೆ ರಜ ಕೊಟ್ಟಿದ್ದಾರೆ. ಆಗ ಕಾಲೇಜಿನಿಂದ ಹೊರಗೆ ಬಂದನಂತರ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಹಾಗೂ ಇತರ ವಿದ್ಯಾರ್ಥಿಗಳ ನಡುವೆ ಕಲ್ಲು ತೂರಾಟ ಪ್ರಾರಂಭವಾಯಿತು. ಈ ಘಟನೆಯಲ್ಲಿ ೩ ಜನ ವಿದ್ಯಾರ್ಥಿಗಳಿಗೆ ಮತ್ತು ಸೈಕಲ್ ಸ್ಟ್ಯಾಂಡ್ ಕಾವಲುಗಾರನಿಗೆ ಗಾಯಗಳಾದವು. ಗಾಯಗೊಂಡವರ ದೂರಿನ ಮೇಲೆ ೪ ಮೊಕದ್ದಮೆಗಳನ್ನು ದಾಖಲು ಮಾಡಲಾಯಿತು. ೧) ಶ್ರೀ ವೀರಭದ್ರಪ್ಪನವರ ಮಗ ಕೆ. ವಿ. ಶೇಖರಪ್ಪ, ಅಂತಿಮ ಬಿಕಾಂ ವಿದ್ಯಾರ್ಥಿ ಅವರು ಕೊಟ್ಟ ದೂರಿನ ಮೇಲೆ ಚಾಮರಾಜನಗರ ಪಶ್ಚಿಮ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ ೩೫–೮೬ ಕಲಂ ೧೪೩, ೧೪೭, ೧೪೮, ೩೨೪, ರೆಡ್‌ವಿತ್ ೧೪೯ ಭಾರತ ದಂಡ ಸಹಿತೆ ಪ್ರಕಾರ ರಾಮಸಮುದ್ರದ ದೇವರಾಜ್, ೨ನೇ ಬಿಎಸ್‌ಸಿ ವಿದ್ಯಾರ್ಥಿ, ಕಾಗಲವಾಡಿ ಗ್ರಾಮದ ಎಂ. ಮಹದೇವ ೨ನೇ ಬಿ. ಎ. ವಿದ್ಯಾರ್ಥಿ ಮತ್ತು ಇತರರ ಮೇಲೆ ಗುನ್ಹೆಯೊಂದನ್ನು ನೋಂದಾಯಿಸಲಾಯಿತು. ೨) ಮಲ್ಲಣ್ಣ ಎಂಬ ವಿದ್ಯಾರ್ಥಿಯ ದೂರಿನ ಮೇಲೆ ಅಪರಾಧ ಸಂಖ್ಯೆ ೩೬–೮೬ ಕಲಂ ೧೪೩, ೧೪೭, ೧೪೮, ೩೨೪ ರೆಡ್‌ವಿತ್ ೧೪೯ ಭಾರತ ದಂಡ ಸಂಹಿತೆ ಪ್ರಕಾರ ಕಾಗಲ್‌ವಾಡಿ ಶಿವಯ್ಯ, ೨ನೇ ಬಿ. ಎ. ವಿದ್ಯಾರ್ಥಿ, ರಾಮಸಮುದ್ರದ ದೇವರಾಜ್ ೨ನೇ ಬಿಎಸ್‌ಸಿ. ವಿದ್ಯಾರ್ಥಿ ಮತ್ತು ಇತರರ ಮೇಲೆ ಗುನ್ಹೆಯೊಂದನ್ನು ನೋಂದಾಯಿಸಲಾಯಿತು. ೩) ಸೈಕಲ್ ಸ್ಟ್ಯಾಂಡ್‌ನ ಕಾವಲುಗಾರನಾದ ಮಲ್ಲಣ್ಣನ ಮಗ ನಾಗಣ್ಣ ಎಂಬುವರ ದೂರಿನ ಮೇಲೆ ಅಪರಾಧ ಸಂಖ್ಯೆ ೩೭–೮೬ ಕಲಂ ೩೨೪ ರೆಡ್‌ವಿತ್ ೩೪ ಭಾರತ ದಂಡ ಸಂಹಿತೆ ಪ್ರಕಾರ ಸಿದ್ದರಾಜ ಮತ್ತು ಇತರರ ಇಬ್ಬರ ಮೇಲೆ ಗುನ್ಹೆಯೊಂದನ್ನು ನೋಂದಾಯಿಸಲಾಯಿತು. ೪) ಬೇವಿನ ತಲವಾರರ ಶಂಕರಪ್ಪನ ಮಗ ಕೆಂಪಲಿಂಗಪ್ಪ, ೨ನೇ ಬಿ. ಎ. ವಿದ್ಯಾರ್ಥಿ ಎಂಬುವರ ದೂರಿನ ಮೇಲೆ ಅಪರಾಧ ಸಂಖ್ಯೆ ೩೮–೮೬